# ಕನ್ನಡ ಭಾಷಾ ಪಠ್ಯ (ಎನ್.ಇ.ಪಿ)

## ವಿನ್ಯಾಸ ಸೌರಭ – ೦೪

### ಬಿ.ಎಸ್ಸಿ. ಫ್ಯಾಡ್

### ನಾಲ್ಕನೇ ಸೆಮಿಸ್ಟರ್


ಪ್ರಧಾನ ಸಂಪಾದಕರು

ಡಾ. ಪ್ರಶಾಂತ ನಾಯಕ

ಸಂಪಾದಕರು

ಡಾ. ಚನ್ನವೀರಯ್ಯ

ಶ್ರೀಮತಿ. ಛಾಯಾದೇವಿ. ಎನ್.

ಶ್ರೀ. ಪಾತಯ್ಯ. ಎನ್.



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

**VINYASA SOURABHA - 04**

A Prescribed NEP Text Book for B.Sc. Fad, Degree Course (Fourth Semester);


**Chief Editor:**

**Prof. Prashanth G. Nayak**
Professor of Kannada & Director,
Kannada Bharathi, Kuvempu University, Shankaraghatta, B.R. Project.
Shimoga Dist.

**Edited By:**

**Dr. Channaveeraiah** ಡಾ. ಚನ್ನವೀರಯ್ಯ
**Smt. Chaya devi** ಶ್ರೀಮತಿ. ಛಾಯಾದೇವಿ. ಎನ್.
**Sri. Pathaiah. N** ಶ್ರೀ. ಪಾತಯ್ಯ. ಎನ್.



**Published by: Bengaluru City University, BENGALURU.**



© Bengaluru City University,


First print: 2022



ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ:

**ಡಾ. ಕೆ.ವೈ. ನಾರಾಯಣಸ್ವಾಮಿ**
**ಡಾ. ಎಂ.ಎಸ್. ಆಶಾದೇವಿ**

ಸಂಯೋಜಕರು:

**ಡಾ. ಬೆಳಕೆರೆ ಲಿಂಗರಾಜಯ್ಯ**



**ಬೆಲೆ:** ರೂ. ೦೦/–

**ಪ್ರಕಾಶಕರು : ಬೆಂಗಳೂರು ನಗರ ವಿಶ್ವವಿದ್ಯಾಲಯ**

# ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣೆಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–2021ರ ವರ್ಷವನ್ನು ಕನ್ನಡ ಕಾಯಕವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನು ತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಲಿಂಗರಾಜಗಾಂಧಿ**
ಕುಲಪತಿಗಳು

## ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯ ವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಅತ್ಮೀಯರಾದ ಡಾ. ಲಿಂಗರಾಜಯ್ಯ ನವರ ಶ್ರಮವನ್ನು ಸ್ಮರಿಸಲೇಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್. ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಡಾ. ಪ್ರಶಾಂತ ಜಿ. ನಾಯಕ**

ಪ್ರಾಧ್ಯಾಪಕರು

# ಬೆಂಗಳೂರು ನಗರ ವಿಶ್ವವಿದ್ಯಾಲಯ
## 4ನೇ ಸೆಮಿಸ್ಟರ್ ಬಿಎಸ್ಸಿ. ಫ್ಯಾಡ್
## ಪರಿವಿಡಿ


**ಘಟಕ ೧. ಕೈಮಗ್ಗ ಪರಂಪರೆ**

**ಆಶಯ**

| | | |
|---|---|---|
| 1. ಮಗ್ಗದ ಸಾಹೇಬ | – ಬಾಗಲೋಡಿ ದೇವರಾಯ | 02 |
| 2. ಕಂಬಳಿ ಮಗ್ಗ ಒಂದು ಪರಿಚಯ | – ಡಾ. ರಾಜಪ್ಪ ದಳವಾಯಿ | 07 |
| 3. ಕೈಮಗ್ಗ ನೇಯ್ಗೆಯ ಕತೆ | – ಕೆ. ಪ್ರಸನ್ನ | 16 |
| 4. ಜೇಡರ ದಾಸಿಮಯ್ಯನ ಜೀವನ ಮತ್ತು ವಚನಗಳು (ಓದು ಪಠ್ಯ) | – ಡಾ. ವಿ.ಜಿ. ಪೂಜಾರ | 28 |

**ಘಟಕ ೨. ಅಹಿಂಸೆ**

**ಆಶಯ**

| | | |
|---|---|---|
| 1. ಬುದ್ಧ | – ದ.ರಾ. ಬೇಂದ್ರೆ | 34 |
| 2. ನಿರ್ಮಲ ಧರ್ಮದಿಂದ ಪಾಲಿಸು ಧರೆಯಂ | – ಜನ್ನ | 36 |
| 3. ಅಂಕ | – ಚದುರಂಗ | 39 |
| 4. ಭಿಕ್ಷುಕರಿಗೆ ರೊಟ್ಟಿ ದಾನ ಮಾಡಿದುದು (ಓದು ಪಠ್ಯ) | – ವಿ.ಎಚ್. ಗವಿಸ್ವಾಮಿ | 48 |

**ಘಟಕ ೩. ವಾಸ್ತುಶಿಲ್ಪ**

**ಆಶಯ**

| | | |
|---|---|---|
| 1. ಬೇಲೂರಿನ ಶಿಲಾಬಾಲಿಕೆಯರು | – ಡಿ.ವಿ.ಜಿ. | 52 |
| 2. ವಾಸ್ತು ಸಂಪತ್ತು, ಶಿಲ್ಪ ಸಂಪತ್ತು, ಚಿತ್ರ ಸಂಪತ್ತು | – ಎಚ್.ಎನ್ ಗೋಪಾಲ್‌ರಾವ್ | 56 |
| 3. ಕೊರೆದ ಗುಹೆಗಳು | – ಡಾ. ಶಿವರಾಮ ಕಾರಂತ | 66 |
| 4. ವಾಸ್ತುಶಿಲ್ಪದ ಇತಿಹಾಸ ಲೇಖನ (ಓದು ಪಠ್ಯ) | – ಕೆ.ಎಸ್. ಸದಾನಂದ | 73 |

**ಘಟಕ ೪. ಸಂಕೀರ್ಣ ಲೇಖನಗಳು**

**ಆಶಯ**

| | | |
|---|---|---|
| 1. ಬೆಂಗಳೂರಿನ ಹತ್ತಿರ ಜಪಾನಿ ಟೌನ್‌ಶಿಪ್ | – ಕೆ.ವಿ. ಸುಬ್ಬಣ್ಣ | 80 |
| 2. ಹಣದ ಹುಚ್ಚು | – ಡಿ.ಎಚ್. ಲಾರೆನ್ಸ್ | 84 |
| 3. ಸಗುವಾರ ಕಳ್ಳಿ | – ಕೆ.ಪಿ. ಪೂರ್ಣಚಂದ್ರ ತೇಜಸ್ವಿ | 86 |
| 4. ಬಾಲ್ಯ–ಬಾಲನಟ (ಓದು ಪಠ್ಯ) | – ಗುಬ್ಬಿ ವೀರಣ್ಣ (ಕ.ಸಾ.ಪ.) | 88 |

# ಘಟಕ : ೧.

## ಕೈಮಗ್ಗ ಪರಂಪರೆ

**ಆಶಯ**

ಊರ ಸೀರೆಗೆ ಅಸಗ ಬಡಿ ಹಡೆದಂತೆ
ಹೊನ್ನೆನ್ನದು ಮಣ್ಣೆನ್ನದು ಎಂದು ಮರುಳಾದೆ,
ನಿಮ್ಮನರಿಯದ ಕಾರಣ
ಕೆಮ್ಮನೆ ಕೆಟ್ಟೆ, ಕೂಡಲಸಂಗಮದೇವಾ

ಉಂಕಿಯ ನಿಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೊಳು ವಾಳುಮೆಟ್ಟದೆ
ಹಿಡಿದ ಲಾಳಿಯ ಮುಳ್ಳು, ಕಂಡಿಕೆಯ ನುಂಗಿತ್ತು
ಈ ಸೀರೆಯ ನೆಯ್ದವ ನಾನೊ ನೀನೂ ರಾಮನಾಥ

ಅಗ್ಗ ಬಡವಗೆ ಲೇಸು । ಬುಗ್ಗೆಯಗಸಗೆ ಲೇಸು ।
ತಗ್ಗಿದ ಗದ್ದೆ ಉಳಲೇಸು, ಜೇಡಂಗೆ ।
ಮಗ ಲೇಸೆಂದ ಸರ್ವಜ್ಞ॥

# ೧. ಮಗ್ಗದ ಸಾಹೇಬ

**– ಬಾಗಲೋಡಿ ದೇವರಾಯ**

**ಪ್ರವೇಶ :** ಬಹಳ ಜನಪ್ರಿಯ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣ ಕಥೆಯೂ ಒಂದು. ಕಥೆಯನ್ನು ಹೇಳುವುದು ಹಾಗೂ ಕೇಳುವುದು ಮಾನವನ ಹುಟ್ಟುಗುಣ. ನಮ್ಮ ಹಿರಿಯರು ತಮ್ಮ ಮಕ್ಕಳಲ್ಲಿ ಆಸಕ್ತಿ ಕೆರಳಿಸಿ ಕುತೂಹಲ ಉಂಟುಮಾಡಲು, ಮನಸ್ಸಿಗೆ ಮುದನೀಡಲು ಮನಸ್ಸನ್ನರಳಿಸುವ ಕಥೆಗಳನ್ನು ಹೇಳುತ್ತಿದ್ದರು. ಈ ಕಥನ ಕಲೆಯು ವಿಸ್ತಾರಗೊಂಡು ಕೆಲವು ಸಾಹಿತಿಗಳು ವಸ್ತು, ಶೈಲಿ, ನಿರೂಪಣೆಗಳೆಲ್ಲದರಲ್ಲಿಯೂ ಪರಿಣಾಮಕಾರಿಯಾದ ಮಾರ್ಪಾಡುಗಳನ್ನು ಮಾಡಿ ಸಣ್ಣಕಥೆ ಎಂಬ ಸಾಹಿತ್ಯ ಪ್ರಕಾರವನ್ನು ಪ್ರಚುರಗೊಳಿಸಿದರು ಮತ್ತು ಸಂಕ್ಷಿಪ್ತತೆ, ವಾಸ್ತವತೆಗಳು ಇದರ ಗುಣಗಳಾಗಿವೆ. ಶಿಕ್ಷಣ, ಬದುಕಿನ ಏಳುಬೀಳುಗಳು, ಸ್ವಉದ್ಯೋಗ, ವಿಜ್ಞಾನ ಮೊದಲಾದವುಗಳು ಸಣ್ಣಕಥೆಗೆ ವಸ್ತುಗಳಾಗಿವೆ. ಪ್ರಸ್ತುತ ಕಥೆಯಲ್ಲಿ ಬಹು ಮುಖ್ಯವಾಗಿ ಇಂದು ವಿನಾಶದ ಅಂಚಿನಲ್ಲಿರುವ ಗುಡಿಕೈಗಾರಿಕೆಗೆ ನಮ್ಮ ಶಿಕ್ಷಣದಲ್ಲಿ ನೀಡಬೇಕಾದ ಮಹತ್ವವನ್ನು ಸಾದರಪಡಿಸುವ ಉದ್ದೇಶವಿದೆ. ತಂದೆಯ ಆಸೆಯಂತೆ ಸರ್ಕಾರಿ ಉದ್ಯೋಗವನ್ನೇ ಅವಲಂಬಿಸದೆ, ಸ್ವಯಂ ಉದ್ಯೋಗ ಕಂಡುಕೊಳ್ಳುವ ಯುವಕನೊಬ್ಬ ರಾಷ್ಟ್ರಮಟ್ಟದ ಗೌರವಾದರಗಳಿಗೆ ಪಾತ್ರನಾಗುವುದೇ ಇಲ್ಲಿಯ ಕಥಾವಸ್ತು.

ಮಗ್ಗದ ಸಾಹೇಬ ಅಂದರೆ ಅಬ್ದುಲ್ ರಹೀಮ್ ಸಾಹೇಬ್. ಅವನು ಮಗ್ಗವನ್ನು ಮುಟ್ಟದೆ ಇಪ್ಪತ್ತು ವರ್ಷಕ್ಕೂ ಹೆಚ್ಚಾಗಿದೆ. ಆದರೂ ಅವನನ್ನು ಮಗ್ಗದ ಸಾಹೇಬನೆಂದೇ ಕರೆಯುವುದು ವಾಡಿಕೆ. ಅವರ ಪೂರ್ವಜರು ಸಾಹೇಬ್ ಬಹಾದ್ದೂರ್ ಮಗ್ಗದ ಹುಸೇನ್ ಸಾಹೇಬರು ಜನಪ್ರಿಯ ಮತ್ತು ಧನವಂತ ವ್ಯಕ್ತಿಯಾಗಿದ್ದರು. ಅವರು ಮಸೀದಿ ಮಾತ್ರವಲ್ಲ; ದೇವಸ್ಥಾನವನ್ನೂ ಕಟ್ಟಿಸಿದ್ದರು. ಇಂದಿಗೂ ಈ ದೇವಸ್ಥಾನದಲ್ಲಿ ರಥೋತ್ಸವದ ಸಮಯದಲ್ಲಿ ಅವರ ಮನೆತನದ ಹಿರಿಯ ಪ್ರತಿನಿಧಿಗೆ ಎಲ್ಲರಿಗಿಂತಲೂ ಮುಂದಾಗಿ ಪ್ರಸಾದವನ್ನು ಪಡೆಯುವ ಹಕ್ಕಿದೆ.

ಇಂತಹ ಸಂಪ್ರದಾಯ ಪದ್ಧತಿಗಳು ಇಂದಿಗೂ ಕರ್ಣಾಟಕದಲ್ಲಿ ನಡೆಯುತ್ತಿವೆ. ಇದರಿಂದ ಪೂರ್ವಜರಲ್ಲಿ ಎಂತಹ ಘನತೆ, ಸದಾಚಾರ, ಸದ್ಭಾವನೆಗಳು ಇದ್ದವು ಎಂದು ತಿಳಿಯುವುದು. ಉದಾಹರಣೆಗೆ ನನ್ನದೇ ಹುಟ್ಟೂರಿನ ಪಕ್ಕದಲ್ಲಿ ಮುಸಲ್ಮಾನರ ವಸತಿ ಇದೆ. ಆದರೊಳಗೆ ಒಂದು ಪವಿತ್ರ ಸ್ಥಾನವಿದೆ. ಅಲ್ಲಿ 'ಉರ್ಸ್' ಎಂಬ ಮುಸಲ್ಮಾನರ ಧಾರ್ಮಿಕ ಉತ್ಸವದ ಕಾಲದಲ್ಲಿ ನಮ್ಮ ಮನೆತನದ ಒಬ್ಬ ಪ್ರತಿನಿಧಿ ಇದ್ದೇ ಇರಬೇಕೆಂಬ ಸಂಪ್ರದಾಯ ಇತ್ತು.

ಹಾಗೆಯೇ ಗಣೇಶ ಚತುರ್ಥಿ, ಕೃಷ್ಣಾಷ್ಟಮಿಗಳ ಮರುದಿನ ಮುಸಲ್ಮಾನ ಸಮಾಜದ ಪ್ರತಿಷ್ಠಿತ ಮುಖ್ಯಸ್ಥರು ನಮ್ಮ ಮನೆಗೆ ಬರುವುದು, ಕುಶಲೋಪಚಾರ ಮಾತನಾಡುವುದು, ನಾವು ಅವರಿಗೆ ಮೋದಕ, ಉಂಡೆ, ಚಕ್ಕುಲಿ ಇತ್ಯಾದಿ ಹಬ್ಬದ ಭಕ್ಷ್ಯ-ಭೋಜ್ಯಗಳನ್ನು ವಿತರಣೆ ಮಾಡುವ

ಸಂಪ್ರದಾಯವಿತ್ತು. ಒಂದು ಬಾರಿ ನಮ್ಮ ತಾಯಿ ಕಾಯಿಲೆ ಬಿದ್ದ ಕಾರಣ ತಂದೆಯವರು ಅಂಗಡಿಯಿಂದ ಲಡ್ಡುಗಳನ್ನು ಕೊಂಡು ಕೊಟ್ಟುದಕ್ಕೆ ಅವರಿಗೆ ಬಹಳ ಸಿಟ್ಟು ಬಂತು. 'ರಾಯರೆ, ಅಂಗಡಿಯಿಂದ ತೆಗೆದುಕೊಳ್ಳಲು ನಮ್ಮಲ್ಲಿ ಹಣವಿಲ್ಲವೆ? ಮನೆಯಲ್ಲಿ ಕಾಯಿಲೆಯಿದ್ದರೆ ಒಂದು ತುಂಡು ಬೆಲ್ಲವನ್ನೊ ಕಲ್ಲುಸಕ್ಕರೆ ಹರಳನ್ನೋ ಕೊಡಿ. ನಿಮ್ಮ ಹಬ್ಬದ ಪೂಜೆಯ ಪ್ರಸಾದವನ್ನು ನಾವು ತೆಗೆದುಕೊಳ್ಳುವುದು ತಲತಲಾಂತರದಿಂದ ಬಂದ ಹಳೆಯ ಸಂಪ್ರದಾಯ, ಅಂಗಡಿಯ ಮಿಠಾಯಿಯನ್ನು ಪ್ರಸಾದವೆಂದು ಕೊಡುವುದು ಸರಿಯೇ?' ಎಂದು ಕೇಳಿಯೇ ಬಿಟ್ಟಿದ್ದರು.

ಅದು ಹೇಗೇ ಇರಲಿ, ಈಗ ಅಬ್ದುಲ್ ರಹೀಮನಿಗೆ 'ಮಗ್ಗದ ಸಾಹೇಬ' ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು. "ಅನಿಷ್ಟ ಮಗ್ಗದ ಹೆಸರೆತ್ತಬೇಡಿ"–"ಮಗ್ಗವಲ್ಲ ಕೊರಳಿಗೆ ಹಗ್ಗ" ಎಂಬುದು ಆತನ ನಿರಾಶೆ, ರೋಷಗಳ ಉದ್ಗಾರವಾಗಿತ್ತು.

ಏಕೆಂದರೆ ಅವನ ಅಜ್ಜನ ಕಾಲದಲ್ಲಿ ಬ್ರಿಟಿಷರು ಅಗ್ಗದ ವಿಲಾಯತಿ ಮಿಲ್ಲಿನ ಬಟ್ಟೆಗಳನ್ನು ನಮ್ಮ ದೇಶದಲ್ಲಿ ಹೇರಿಬಿಟ್ಟರು. ಅವೇನೋ ನಿಜಕ್ಕೂ ನಿಕೃಷ್ಟ ವಸ್ತುಗಳು. ಒಂದು ವರ್ಷದೊಳಗೇ ಕಳೇಬರಗಳಾಗಿ ಹರಕು ಚಿಂದಿಯಾಗುವುವು. ಬಣ್ಣವೋ ಒಂದೇ ತಿಂಗಳಲ್ಲಿ ವಿವರ್ಣವಾಗಿ ಎರಡೇ ತಿಂಗಳಲ್ಲಿ ಮಾಯವಾಗುವುದು. ಆದರೇನು? ಬಹು ಅಗ್ಗ, ಜನರಿಗೆ ಬೇಕಾದುದು ಅಗ್ಗದ ವಸ್ತು, ಗುಣವನ್ನು ಯಾರು ಕೇಳುತ್ತಾರೆ? ಅಗ್ಗದ ಮಾಲಿನದೇ ಅಧಿಪತ್ಯವಾಯಿತು. ಮಗ್ಗದವರು ಭಿಕಾರಿಗಳಾದರು. ಅವರ ಅನ್ನಕ್ಕೆ ಸಂಚಕಾರವಾಯಿತು.

ಪಾಪ! ಅಬ್ದುಲ್ ರಹೀಮನ ಗತಿ? ಹಿರಿಯರು ಕಟ್ಟಿದ ಭವ್ಯವಾದ ಹಳೆಯ ಕಾಲದ ಮನೆ ವಿಶಾಲವಾದ ತೋಟ. ಆದರೆ ಮಗ್ಗಗಳೆಲ್ಲಾ ಧೂಳು ತುಂಬಿ ಜೇಡನ ಬಲೆಗಳಿಂದ ಆಚ್ಛಾದಿತವಾಗಿವೆ. ಮನೆಯಲ್ಲಿ ಊಟಕ್ಕೆ ಇದೆಯೋ ಇಲ್ಲವೋ ಎಂಬಂತಾಗಿದೆ.

ಈಗ ಅವನಿಗೆ ಒಂದೇ ಹಠ, ಒಂದೇ ವ್ರತ. ಅವನ ಮೂವರು ಗಂಡುಮಕ್ಕಳಿಗೆ ಒಂದಿಷ್ಟಾದರೂ ವಿದ್ಯಾಭ್ಯಾಸ ಕೊಡಿಸಿ ಸರಕಾರಿ ನೌಕರರನ್ನಾಗಿ ಮಾಡಬೇಕು ಎಂದು. ಅಂತೆಯೇ ಇಬ್ಬರು ಮಕ್ಕಳು ವಿಧೇಯರಾಗಿ ಅವನ ಅಭೀಷ್ಟವನ್ನು ನೆರವೇರಿಸಿದರು. ಒಬ್ಬ ಸರಕಾರಿ ಕಚೇರಿಯಲ್ಲಿ ಗುಮಾಸ್ತನಾದ. ಇನ್ನೊಬ್ಬ ಪೋಸ್ಟ್ ಮಾಸ್ತರನಾದ. ಆದರೆ ಕೊನೆಯ ಮಗ ಕರೀಮ್‌ನಿಂದ ಬಹಳ ನಿರಾಸೆ ಉಂಟಾಯಿತು. ಕರೀಮ್ ಆಟದಲ್ಲೂ ಪಾಠದಲ್ಲೂ ಬಹು ಚುರುಕು; ಬುದ್ಧಿವಂತ; ಹಸನ್ಮುಖಿ ಎಲ್ಲರಿಗೂ ಬೇಕಾದವನು. ಆದರೆ ಏನೋ ಕಾರಣದಿಂದ ಅವನಿಗೆ ಅನಿಷ್ಟ ಮಗ್ಗದಲ್ಲಿ ಬಹಳ ಅಭಿರುಚಿ, ಮನೆಯಲ್ಲಾದರೋ ಮಗ್ಗವನ್ನು ಮುಟ್ಟಲೂ ತಂದೆ ಬಿಡುತ್ತಿರಲ್ಲಿಲ್ಲ. ಆದರೆ ಮಗನ ಗ್ರಹಚಾರ ಎನ್ನಿ. ಶಾಲೆಯಲ್ಲಿಯೇ ಮಗ್ಗ ಉದ್ಭವಿಸಬೇಕೇ?

ಮಹಾತ್ಮಾ ಗಾಂಧಿ ಪ್ರೇರಣೆಯಿಂದ ಕೆಲವು ಶಾಲೆಗಳಲ್ಲಿ 'ನವೀನ ಶಿಕ್ಷಣ' ಆರಂಭವಾಯಿತು. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹಲವು ತರಹದ ಔದ್ಯೋಗಿಕ ಶಿಕ್ಷಣವನ್ನು ಕೊಡುವುದು, ಅವರಲ್ಲಿ ಹಸ್ತಕೌಶಲವನ್ನು, ದೇಹಶ್ರಮದಲ್ಲಿ ಗೌರವ–ಭಾವವನ್ನು ಉಂಟು ಮಾಡುವುದು ಒಂದು ಭಾಗವಾಗಿತ್ತು.

ಕೆಲವರಿಗೆ ಬಡಗಿಯ ಕೆಲಸ, ಕೆಲವರಿಗೆ ಬೆತ್ತದ ಕುರ್ಚಿ ಕೆಲಸ ಇತ್ಯಾದಿ ಸಾಮಗ್ರಿಗಳನ್ನು ಮಾಡುವ, ಕೆಲವರಿಗೆ ಕೃಷಿ, ಕೆಲವರಿಗೆ ಮಗ್ಗದ ಕೆಲಸವನ್ನು ಕಲಿಸತೊಡಗಿದ್ದರು.

ಹುಡುಗ ಕರೀಮ್ ಮಗ್ಗದ ಕೆಲಸವನ್ನು ಮೀನು ನೀರಿನಲ್ಲಿ ಈಜುವಷ್ಟೇ ಸುಲಭವಾಗಿ ಕಲಿತು ಬಹು ನಿಪುಣನಾಗಿಬಿಟ್ಟ. ಅವನ ತಂದೆಗೆ ರೋಷ ಉಕ್ಕಿಬಂತು. ಮುಖ್ಯೋಪಾಧ್ಯಾಯ ಶಂಕರಪ್ಪ ಅವರೊಡನೆ ನಿಷ್ಠುರವಾಗಿ ಜಗಳವಾಡಿದ್ದನು. ಆದರೆ ಹುಡುಗ ಕರೀಮ್ ಶಾಲೆಯ ಮಗ್ಗದಲ್ಲಿ ಒಂದು ಪರಿವರ್ತನೆಯನ್ನು ತನ್ನದೇ ಬುದ್ಧಿವಂತಿಕೆ ಹಾಗೂ ಕೌಶಲದಿಂದ ಮಾಡಿಬಿಟ್ಟಿದ್ದ. ಅದನ್ನು ಶಂಕರಪ್ಪ ಅವರು ಸ್ವಾಭಾವಿಕವಾಗಿಯೇ ಪ್ರಶಂಸೆ ಮಾಡಿ ಮೇಲಧಿಕಾರಿಗಳಿಗೆ ವರದಿ ಮಾಡಿದ್ದರು. ಅದರ ಫಲಸ್ವರೂಪವಾಗಿ ಸರಕಾರದಿಂದ ಹುಡುಗ ಕರೀಮ್‌ಗೆ ಒಂದು ಬೆಳ್ಳಿಯ ಪದಕವೂ ಒಂದು ನೂರು ರೂಪಾಯಿಯ ಬಹುಮಾನವೂ ಬಂದುಬಿಟ್ಟವು.

ಹುಡುಗನ ಉತ್ಸಾಹ ಆಕಾಶಕ್ಕೇರಿತು. ತಂದೆ ಈ ಹಠಮಾರಿಗೆ ಮಗ್ಗದ ಹುಚ್ಚನ್ನು ಬಿಡಿಸಬೇಕೆಂದು ಶಾಲೆಯಿಂದಲೇ ಬಿಡಿಸಿಬಿಟ್ಟನು. ಹೆಡ್‌ಮಾಸ್ಟರ್ ಶಂಕರಪ್ಪ ಅವರ ಎಷ್ಟೋ ಅನುನಯ ವಿನಯಗಳನ್ನು ಗಣಿಸದೆ ನಿರಾಕರಿಸಿದನು.

ಒಂದು ದಿನ ಶಾಲೆಯ ವಾರ್ಷಿಕೋತ್ಸವ ಸಮಾರೋಪದಲ್ಲಿ ಹಳೆಯ ವಿದ್ಯಾರ್ಥಿಗಳ ಒಂದು ನಾಟಕವಿತ್ತು. ಅದರಲ್ಲಿ ಕರೀಮನದು ಸ್ತ್ರೀಪಾತ್ರ, ಅದಕ್ಕೆಂದು ತಾಯಿಯಿಂದ ಗೌಪ್ಯವಾಗಿ ಹಳೆಕಾಲದ ಚಿನ್ನದ ಸರವನ್ನು ಅಲಂಕಾರಕ್ಕೆಂದು ಎರವಲು ತೆಗೆದುಕೊಂಡ. ನಾಟಕ ಮುಗಿದ ನಂತರ ಮನೆಗೆ ಬರಲಿಲ್ಲ. ಎಲ್ಲೋ ಮಾಯವಾಗಿ ಹೋದ.

ತಂದೆಗೆ ಮೈಯಲ್ಲಿ ಅಗ್ನಿಸಂಚಾರವಾಯಿತು. ಮಗನನ್ನು ಕ್ರೂರವಾಗಿ ಶಪಿಸಿದನು. "ಹಾಳಾಗಿ ಹೋಗಲಿ! ಹಠಮಾರಿ, ತಂದೆಯ ಮಾತನ್ನು ಉಲ್ಲಂಘಿಸಿದವನು ಎಂದು ಮಾತ್ರ ತಿಳಿದಿದ್ದೆ. ಈಗ ಕಳ್ಳನೆಂದೂ ತಿಳಿಯಿತು. ನನಗೆ ಇಬ್ಬರೇ ಗಂಡು ಮಕ್ಕಳು: ಕಳ್ಳನಾದವನು, ಮನೆಬಿಟ್ಟು ಓಡಿಹೋದವನು ಮಗನೇ ಅಲ್ಲ" ಎಂದು ಆಣೆ ಹಾಕಿದನು.

ಕೆಲವು ವರ್ಷಗಳ ಅನಂತರ ಕರೀಮ್ – ಈಗ ಬೆಳೆದು ಯುವಕನಾಗಿದ್ದಾನೆ – ಮನೆಗೆ ಬಂದು ಬಾಗಿಲು ತಟ್ಟಿದ. ತಂದೆ ಬಾಗಿಲು ತೆರೆದು ಮುಖ ನೋಡಿ ಫಟಾರನೆ ಬಾಗಿಲು ಮುಚ್ಚಿದ. ಒಂದು ಘಂಟೆ ಬಾಗಿಲು ತಟ್ಟಿದರೂ ತಾಯಿ ಅತ್ತು ಹಂಬಲಿಸಿದರೂ ಬಾಗಿಲು ತೆರೆಯಲೇ ಇಲ್ಲ.

ಕೊನೆಗೆ ನಿವೃತ್ತರಾಗಿರುವ ಶಂಕರಪ್ಪ ಅವರ ಮನೆಗೆ ಹೋಗಿ, ಸಂಧಾನ ಮಾಡಿಸಿರಿ ಎಂದು ನಿವೇದಿಸಿದ. 'ನನ್ನ ಮುಖವನ್ನೇ ನೋಡಬಾರದು ಎಂದು ಹಠವಿದ್ದರೆ ಕೊನೆಗೆ ತಾಯಿಯಾದರೂ ನನ್ನನ್ನು ಕಾಣಬಾರದೆ? ಅಮ್ಮನ ಚಿನ್ನದ ಸರವನ್ನು ತಂದಿದ್ದೇನೆ. ಅದರೊಡನೆ ಹತ್ತು ಸಾವಿರ ರೂಪಾಯಿಗಳನ್ನು ತಂದಿದ್ದೇನೆ. ಅವನ್ನಾದರೂ ತಾಯಿಯ ಕಾಲ ಮೇಲೆ ಹಾಕಿ ಹೋಗುತ್ತೇನೆ. ತಂದೆಯವರಿಗೆ ಸಮಾಧಾನ ಹೇಳಿ. ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ' ಎಂದ.

ಶಂಕರಪ್ಪ ಅವರು ಮುದುಕನೊಡನೆ ಒಂದು ಗಂಟೆ ಗೋಗರೆದರು, ನಿವೇದಿಸಿದರು. ತರ್ಕಿಸಿದರು, ಚರ್ಚಿಸಿದರು. ಆದರೆ ನಿಷ್ಫಲವಾಯಿತು. ಒಂದು ಪದವನ್ನೂ ಕೇಳುವ ತಾಳ್ಮೆ ಮುದುಕನಿಗೆ ಇರಲಿಲ್ಲ. 'ಸಾಹೇಬ್ ಬಹಾದ್ದೂರ್ ಹುಸೇನ್ ಸಾಹೇಬರ ಕೀರ್ತಿಗೆ ಮಸಿಹಚ್ಚಿದ್ದಾನೆ. ಈ ಮಾತಿನಲ್ಲಿ ನೀವು ಅಡ್ಡಬಾಯಿ ಹಾಕಬೇಡಿ. ನೀವು ಕಲಿಸಿದ ಪಾಠದಿಂದಲೇ ಈ ಹಠಮಾರಿ ನಮ್ಮ ವಂಶದ ಕೀರ್ತಿಯನ್ನು ಮಣ್ಣುಪಾಲು ಮಾಡಿದ. ಹಣ ತಂದಿದ್ದಾನಂತೆ. ಕಳವಿನ ಹಣವೋ? ದರೋಡೆಯ ಹಣವೋ?' ಎಂದು ಸಿಡುಕಿದ. ಶಂಕರಪ್ಪ ಅವರು ಮುಖಬಾಡಿಸಿಕೊಂಡು ಹಿಂತೆರಳಿದರು.

ಕರೀಮ್‌ನ ಹಣ ಕಳವಿನದೂ ಅಲ್ಲ. ದರೋಡೆಯದೂ ಅಲ್ಲ. ಸಣ್ಣಪ್ರಾಯದಲ್ಲೇ ಮಗ್ಗದ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಅವನೀಗ ಅದರ ಅಧ್ಯಕ್ಷನಾಗಿದ್ದಾನೆ. ಸಾಕಷ್ಟು ಯಶಸ್ವಿಯೂ ಧನವಂತನೂ ಆಗಿದ್ದಾನೆ. ಅದೂ ಅಲ್ಲದೆ ಮಗ್ಗದ ಯಂತ್ರದ ಪ್ರಯೋಗದಲ್ಲಿ ಹೊಸ ಹೊಸ ಸುಧಾರಣೆಗಳನ್ನೂ ಪರಿವರ್ತನೆಗಳನ್ನೂ ತಂದು ಹೆಸರು ಮಾಡಿದ್ದಾನೆ. ಆದರೆ ಈ ವಿಷಯದ ಲವಲೇಶವೂ ತಂದೆಗೆ ತಿಳಿಯದು. ಏಕೆಂದರೆ ಆತ ಕರೀಮ್ ಕಡೆಗೆ ತನ್ನ ಹೃದಯವನ್ನು, ಮನೆಯ ಬಾಗಿಲು ಮುಚ್ಚಿದಂತೆ–ಸಂಪೂರ್ಣವಾಗಿ ಮುಚ್ಚಿಬಿಟ್ಟಿದ್ದಾನೆ. ಯಾರಾದರೂ ಕರೀಮ್‌ನ ಹೆಸರೆತ್ತಿದರೆ 'ನನಗೆ ಎರಡೇ ಮಕ್ಕಳು, ಕಳ್ಳರ ಪರಿಚಯ ನನಗಿಲ್ಲ' ಎಂದೇ ಅವನ ನಿಷ್ಠುರದ ಉತ್ತರ.

ಕೆಲವು ವರ್ಷಗಳ ಅನಂತರ ಅಬ್ದುಲ್ ರಹೀಮ್ ಹಾಸಿಗೆಯಲ್ಲಿ ಒರಗಿದ್ದಾನೆ. ಅನಾರೋಗ್ಯದಿಂದ ನರಳುತ್ತಾ ಇದ್ದಾನೆ. ಎಲುಬಿನ ಹಂದರವಾಗಿದ್ದಾನೆ. ಕಣ್ಣೂ ಸರಿಯಾಗಿ ಕಾಣಿಸುತ್ತಿಲ್ಲ; ಕಿವಿಯೂ ಸರಿಯಾಗಿ ಕೇಳುತ್ತಿಲ್ಲ. ಶಂಕರಪ್ಪ ಅವರು ಬಾಗಿಲು ತಟ್ಟಿದರು. ಒಳಗೆ ಬಂದರು. ಕೈಯಲ್ಲಿ ಒಂದು ವಾರ್ತಾಪತ್ರಿಕೆ, 'ರಹೀಮ್ ಸಾಹೇಬರೇ, ಈ ಪತ್ರಿಕೆ ನೋಡಿದಿರಾ? ಈ ಭಾವಚಿತ್ರ ನೋಡಿ?' ಮುದುಕ ಕಣ್ಣಿನ ಹತ್ತಿರ ತಂದ. ಆದರೆ ಪಾಪ! ಕಣ್ಣು ಮಂಜಾಗಿವೆ. ಏನೂ ತೋರದು. ಅವನ ಹೆಂಡತಿ ಬಂದು ವಾರ್ತಾಪತ್ರಿಕೆ ತೆಗೆದುಕೊಂಡು ಹೋದಳು.

"ಕರೀಮ್! ನಮ್ಮ ಕರೀಮ್! ನಮ್ಮ ಕರೀಮ್" ಎಂದು ಗಟ್ಟಿಯಾಗಿ ಉದ್ಧರಿಸಿದಳು.

"ಏನು? ಜೇಲಿಗೆ ಹೋದನೇ? ಫಾಶೀ ಆಯಿತೇ? ಇನ್ನೂ ಮನೆತನದ ಮೇಲೆ ಏನು ಅಪಕೀರ್ತಿ ಹೇರಿದ್ದಾನೆ?" ಎಂದು ಮುದುಕ ಕೆಮ್ಮುತ್ತ ಕೆಮ್ಮುತ್ತ ಗರ್ಜಿಸಿದ.

"ರಹೀಮ್ ಸಾಹೇಬರೇ, ನಿಮ್ಮ ಮಗ ಕರೀಮ್‌ಗೆ ರಾಷ್ಟ್ರಪತಿ ಅವರು ಪದ್ಮಭೂಷಣ ಬಿರುದನ್ನು ಕೊಟ್ಟಿದ್ದಾರೆ. ಅದರ ಭಾವಚಿತ್ರ ಈ ವಾರ್ತಾಪತ್ರಿಕೆಯಲ್ಲಿದೆ."

"ಆಂ! ಪದ್ಮಭೂಷಣ! ಅಂದರೇನು?"

"ಪದ್ಮಭೂಷಣ ಅಂದರೆ ಸಾಹೇಬ್ ಬಹಾದ್ದೂರ್‌ಗಿಂತಲೂ ಮೇಲಿನ ಬಿರುದು. ಖಾನ್ ಸಾಹೇಬ್, ಖಾನ್ ಬಹಾದ್ದೂರ್, ದಿವಾನ್ ಬಹಾದ್ದೂರ್ ಇವೆಲ್ಲದರಿಂದಲೂ ಮೇಲೆ, ದೊಡ್ಡ ಬಿರುದು!"

**"**ಕರೀಮ್! ನನ್ನ ಕರೀಮ್! ಸಾಹೇಬ್ ಬಹಾದ್ದೂರ್‌ಗಿಂತಲೂ ಮೇಲಾದನೇ**?** ದೇವರು ದೊಡ್ಡವನು. ದೇವರು ದಯಾಳು. ನನ್ನ ಬಾಯಿಯಿಂದ ಬಿದ್ದ ಕೆಟ್ಟ ಮಾತನ್ನು ದೇವರು ಕಿವಿಗೆ ಹಾಕಿಕೊಳ್ಳಲಿಲ್ಲ. ನನ್ನ ಕರೀಮ್ ಮಗ್ಗದ ಹುಸೇನ್ ಸಾಹೇಬರ ಹೆಸರಿಗೆ ಕೀರ್ತಿ ತಂದ**"** ಎಂದು ಕೆಮ್ಮುತ್ತ ಕೆಮ್ಮುತ್ತ ಬಿಕ್ಕಿಬಿಕ್ಕಿ ಅಳತೊಡಗಿದ ಭಾವುಕನಾಗಿ.


* **ಬಾಗಲೋಡಿ ದೇವರಾಯ**

# ೨. ಕಂಬಳಿ ಮಗ್ಗ ಒಂದು ಪರಿಚಯ

**– ಡಾ. ರಾಜಪ್ಪ ದಳವಾಯಿ**

ಕರ್ನಾಟಕದ ಕುರುಬರು, ಗೊಲ್ಲರ ಮುಖ್ಯ ಕಸುಬು ಕುರಿ ಸಾಕಾಣಿಕೆ. ಇವರಲ್ಲದೆ ಇತರ ಜಾತಿಯವರೂ ಕುರಿಗಳನ್ನು ಸಾಕುತ್ತಾರೆ. ಆದರೆ ಕುರಿಗಳ ತುಪ್ಪಟ ಕತ್ತರಿಸುವುದು, ಕತ್ತರಿಸಿದ ತುಪ್ಪಟದಿಂದ ಕುಕ್ಕಡಿ ಮಾಡಿ, ಹಾಸು ಹಾಕಿ ಕಂಬಳಿ ಮಾಡುವುದು ಮಾತ್ರ ಕುರುಬರ ಕೆಲಸ, ಕಂಬಳಿಗೆ 'ಗೊಂದಡಿ' 'ಜಾಡಿ' 'ಗದ್ದಿಗೆ' ಎಂತಲೂ ಕರೆಯುತ್ತಾರೆ. ಚಿಕ್ಕನಾಯಕನಹಳ್ಳಿಯಂತೂ ಕಂಬಳಿಯನ್ನು ಒಂದು ಮುಖ್ಯ ಉದ್ದಿಮೆಯನ್ನಾಗಿಸಿಕೊಂಡಿದೆ. ಕಂಬಳಿಗಳಲ್ಲಿ ಎರಡೆಳೆ ಜಾಡಿ, ನಾಕೆಳೆ ಜಾಡಿ ಎಂದೂ ಸಹ ಕರಿಯ ಕಂಬಳಿ ಅಂಚಿನಲ್ಲಿರುವ ಬಿಳಿಎಳೆಗಳ ಆಧಾರದಿಂದ ಗುರುತಿಸುತ್ತಾರೆ. ಆಳತೆ ಆರರಿಂದ ಒಂಬತ್ತು ಮಳ ಉದ್ದ. ಎರಡೂವರೆ ಅಡಿ ಅಗಲ, ಒಂದೊಂದು ಹೋಳನ್ನು ಕೂಡಿಸಿ ಹೊಲಿದ ಕಂಬಳಿಯನ್ನು 'ಇಪ್ಪಾಳೆ ಕಂಬಳಿ' ಎಂದೂ ಕರೆಯುತ್ತಾರೆ. ಕಂಬಳಿಯ ತಯಾರಿಕೆಯ ವಿವಿಧ ಹಂತಗಳು ಕೇವಲ ಯಾಂತ್ರಿಕವಾಗಿರದೆ, ಆ ಹಂತಗಳು ಜೀವನಕ್ರಮದ ಅವಿಭಾಜ್ಯ ಅಂಗವಾಗಿರುತ್ತವೆ.

ಕುರಿಯ, ತುಪ್ಪಟವನ್ನು ಕತ್ತರಿಸುವ ಕತ್ತರಿಗೆ 'ಮೊದಲಗಾರ' ಎಂದು ಕರೆಯುತ್ತಾರೆ. ಕುರಿ ತುಪ್ಪಟ ಕತ್ತರಿಸುವ ಮೊದಲು ಕುರಿಗಳನ್ನು ನೀರಿನಲ್ಲಿ ತೊಳೆದು ನಂತರ ಕತ್ತರಿಸುತ್ತಾರೆ. ಸಾಮಾನ್ಯವಾಗಿ ಭಾನುವಾರ ತೊಳೆದು ಸೋಮವಾರ ಕತ್ತರಿಸುತ್ತಾರೆ. ಕುರಿಗಳನ್ನು ಶನಿವಾರ ಮತ್ತು ಸೋಮವಾರ ನೀರಿಗೆ ಹಾಕುವುದಿಲ್ಲ. ಮೊದಲಗಾರನನ್ನು ನೀರಿನ ತಡಿಯಲ್ಲಿಟ್ಟು ಮೂರೆಲೆ, ಮೂರಡಿಕೆ ಮೂರುಕಲ್ಲುಗಳನ್ನಿಟ್ಟು ಕಾಯಿ ಒಡೆದು ಊದಿಗಡ್ಡಿಯಿಂದ ಪೂಜಿಸಿ ಗಂಗಮ್ಮನನ್ನು ಮಾಡುತ್ತಾರೆ. ನಂತರ ಮೊದಲಗಾರನ ಮೇಲೆ ನೀರಿಗೆ ಬೀಳುವಂತೆ ಜೋಡಿ ಹೆಣ್ಣುಕುರಿಗಳನ್ನು ಹಿಡಿದು ತಂದು – ಹಾಲು ಕರೆಯುತ್ತಾರೆ. ಒಂದು ದಿನ ಬಿಟ್ಟು ಕುರಿಗಳ ತುಪ್ಪಟವನ್ನು ಕತ್ತರಿಸುತ್ತಾರೆ.



**ಮೊದಲಗಾರ**


ವರ್ಷಕ್ಕೆ ಎರಡು ಕೊಯಿಲು ತುಪ್ಪಟ ಕತ್ತರಿಸುತ್ತಾರೆ. ಕುರಿಗಳಿಗೆ ಎರಡು ಬಾರಿ ಕತ್ತರಿಸದಿದ್ದರೆ ತುಪ್ಪಟ ಬಂತೆಗಟ್ಟಿ ಕೂದಲು ಉದುರಿಬಿಡಬಹುದು. ನೀರು ಬಿಟ್ಟುಕೊಳ್ಳದೆ ಸೆಕೆಯಾಗಿ ಕುರಿಗಳು ನಸ್ತು ಹೋಗಿ ಬಿಡುತ್ತವೆ. ಆಕಸ್ಮಾತ್ ಕುರಿಗೆ ಕಾಯಿಲೆ ಇದ್ದರೆ ಮಾಗಿಯ ಕೊಯಿಲನ್ನು ಬಿಡುತ್ತಾರೆ. ಕಾರಣ ನೀರು ಹಿಡಿದು ಬಿಡುತ್ತವೆ. ಕುರಿಗಳಿಗೆ ಮೈಲಿ ಎದ್ದರೆ ತುಪ್ಪಟ ಕತ್ತರಿಸುವುದಿಲ್ಲ. ಕುರಿಯನ್ನು ಕತ್ತರಿಸುವಾಗ ಮೊದಲಗಾರನಿಗೆ ಇಬತ್ತಿ ಹಚ್ಚಿ ಪೂಜುತ್ತಾರೆ. ಆಮೇಲೆ ಕತ್ತರಿಸುತ್ತಾರೆ. ಅಜ್ಜಂಪುರದ ಸುತ್ತ ಮುತ್ತ ಕುರಿಗಳ ತುಪ್ಪಟವನ್ನು ಕುರುಬರು ಮಾತ್ರ ಕತ್ತರಿಸುತ್ತಾರೆ. ಒಂದು ಪ್ರಚಲಿತ ಗಾದೆಯೇ ಇದೆ. 'ಗೊಲ್ಲರ ಕುರಿ ಕುರುಬರ ಲೆಕ್ಕ' ಈ ಗಾದೆಯಲ್ಲಿ ಕುರಿ ತುಪ್ಪಟ ಕತ್ತರಿಸುವ ಒಂದು ಕಸುಬೇ

ಅಡಗಿದೆ. 'ಕುರಿಗಳ ಮೇಲೆ ಕುರುಬರ ಬಿಟ್ಟರೆ ಯಾರೂ ಕುಂದ್ರಲ್ಲ'. ಒಟ್ಟಿಗೇ ಕುರಿಗಳ ತುಪ್ಪಟ ಕತ್ತರಿಸಿ ಆಮೇಲೆ ಲೆಕ್ಕ ಹಾಕುತ್ತಾರೆ. ಇದಕ್ಕೆ 'ಕತ್ತರಿಲೆಕ್ಕ', 'ಮೊದಲಗಾರಲೆಕ್ಕ' ಎಂದೇ ಹೆಸರು. ಈ ಲೆಕ್ಕ ಸಂಜೆಯಲ್ಲಿ ಮುಖ್ಯವಾಗುತ್ತದೆ. ಇಲ್ಲಿ 'ಸ್ವಲಿಗೆ' ಎಂಬ ಪದ ಬಳಕೆಯಾಗುತ್ತದೆ. ಒಂದು ಸ್ವಲಿಗೆ ಎಂದರೆ ಐವತ್ತು ಕುರಿಗಳು ಎಂದು ಲೆಕ್ಕ. ಒಂದು ಸ್ವಲಿಗೆಗೆ ಒಂದು ಕಂಬಳಿ ಕೊಡುವ ಪದ್ಧತಿಯೂ ಇದೆ. ಒಂದು ಸ್ವಲಿಗೆಗೆ ಕನಿಷ್ಠ ನಾಲ್ಕು ಕಂಬಳಿಗಳಾಗುತ್ತವೆ. ಆದರೆ ಈಗ ಈ ಪದ್ಧತಿ ಕಡಿಮೆಯಾಗಿ, ಪ್ರತಿ ಕುರಿಯ ತುಪ್ಪಟದ ಕಟಾವಿಗೆ ಒಂದೂವರೆ, ಎರಡು ರೂಪಾಯಿ ಲೆಕ್ಕದಲ್ಲಿ ಹಣ ಕೊಡುತ್ತಾರೆ. ಈ ಮೊದಲಗಾರನನ್ನು ಮಾಡುವುದು ಎಲ್ಲಾ ಕಮ್ಮಾರರಿಗೂ ಬರುವುದಿಲ್ಲ. ಗಡೀಹಳ್ಳಿಯಲ್ಲಿ ಇದನ್ನು ಮಾಡುವವರಿದ್ದಾರೆ. ಬಿಟ್ಟರೆ, ಚಿಕ್ಕನಾಯಕನಹಳ್ಳಿ ಕಡೆಗೆ ಹೆಚ್ಚು. ಇದರಿಂದ ಮಕ್ಕಳ ತಲೆಕೂದಲನ್ನೂ ಕತ್ತರಿಸುತ್ತಾರೆ. ಇತ್ತೀಚೆಗೆ ಈ ಮೊದಲಗಾರ ಬಹು ಉಪಯೋಗಿ.



**ಬೀವು**


ರಾಶಿಯಾಗಿ ಬಿದ್ದಿರುವ ತುಪ್ಪಟವನ್ನು ಮೊದಲಿಗೆ 'ಬೀವು'ವಿನಿಂದ ಹಿಂಜುತ್ತಾರೆ. ಈ ಬೀವುವನ್ನು ಎಳೆಗರುವಿನ ಚರ್ಮದಿಂದ ಮಾಡಿರುತ್ತಾರೆ. ಇದು ಅಪ್ಪಟ ಬಿಲ್ಲಿನ ಸ್ವರೂಪದಲ್ಲಿರುತ್ತೆ. ಇದರ ಜೊತೆ ಯಾವಾಗಲೂ ಒಂದು ಚೀಲ ಇರುತ್ತದೆ. ಇದರೊಳಗೆ ಅಧಿಕವಾದ ಚರ್ಮದ ನೂಲನ್ನೂ ಇಟ್ಟಿರುತ್ತಾರೆ. ಏಕೆಂದರೆ ಈ ಚರ್ಮದ ದಾರವನ್ನು ಇಲಿಗಳು ಆಗಾಗ ಕತ್ತರಿಸುತ್ತಿರುತ್ತವೆ.



**ರಾಟೆ**


ಬೀವುವಿನಿಂದ ಸಂಸ್ಕರಣಗೊಂಡ ತುಪ್ಪಟವನ್ನು 'ರಾಟೆ'ಯಿಂದ ಒಂದೆಳೆಯ ನೂಲನ್ನಾಗಿ ಒಸೆಯಲಾಗುತ್ತದೆ. ಮರ, ಕಬ್ಬಿಣ ಮತ್ತು ದಾರದಿಂದ ನಿರ್ಮಿತವಾದ ಈ ರಾಟೆ ಕಂಬಳಿ ತಯಾರಿಕೆಯಲ್ಲಿ ಬಹಳ ಮುಖ್ಯವಾದ ಪಾತ್ರ ವಹಿಸಿದೆ. ಇದರಲ್ಲಿ ಹಾಸುಪಟ್ಟಿ, ನಿಲುಗಂಬ, ರಾಟೆಕೈ, ರಾಟೆಕಾಲು, ಗುಂಬ, ದಾರ, ಮೇಲುಕಡ್ಡಿ, ಗೊಂಬೆ, ಚೆಲ್ಲು ಎಂಬ ಬಿಡಿಭಾಗಗಳಿರುತ್ತವೆ. ಇದರಿಂದ ನೂಲುಮಾಡಿದ್ದನ್ನೆಲ್ಲ ಚೆಲ್ಲಿನಲ್ಲಿರುವ ಕದಿರಿನದಿಂಡಿನ ತಂತಿಯಲ್ಲಿ ಶೇಖರಿಸುತ್ತಾರೆ. ಇದನ್ನು ಕುಕ್ಕಡಿ

ಎಂದು ಕರೆಯುತ್ತಾರೆ. ಶಿರಾ ಪ್ರಾಂತ್ಯದಲ್ಲಿ ಕುರುಬರು ಎನ್ನುವುದಕ್ಕೆ ಅಣಕವಾಗಿ **'ಕುಕ್ಕಡಿ'** ಎಂದು ಕರೆಯುವುದು ಇಂದಿಗೂ ಚಾಲ್ತಿಯಲ್ಲಿದೆ.



**ಕುಕ್ಕಡಿ**

ಹೀಗೆ ನೂಲಾದ ಕುಕ್ಕಡಿಗಳನ್ನು 'ಅರಗಣಿ'ಯಲ್ಲಿ ಹಾಸುತೆಗೆದು ಕಂಬಳಿಯ ಅಳತೆಗೆ ಸರಿಯಾಗಿ ಪ್ರತಿ ಎಳೆಯನ್ನು ಬಿಡುತ್ತಾ ನೂಲನ್ನು ಹಂಚುತ್ತಾರೆ.




**ಅರಗಣಿ**


ಈ ಅರಗಣಿಯಲ್ಲಿರುವ ಮೂರೂ ಅಡ್ಡಪಟ್ಟಿಗಳು ಯಾವ ಅಳತೆಗೆ ಬೇಕೊ ಆ ಅಳತೆಗೆ ಸರಿಗಾಡುವಂತಿರುತ್ತವೆ. ಬಲಭಾಗದ ಕೊನೆಯಲ್ಲಿರುವ ಒಂದು ಮತ್ತು ಮೂರನೇ ಚಿಕ್ಕಗೂಟಗಳಲ್ಲಿ ನೂಲನ್ನೂ ಆಣೆ ಬೀಳಿಸುತ್ತಾರೆ. ∝ (ಹೀಗೆ) ಮಧ್ಯವ ಚಿಕ್ಕಗೂಟದಲ್ಲಿ ನೂಲು ಸುಮ್ಮನೆ ಒಂದರ ಮೇಲೊಂದು ಬಂದಿರುತ್ತದೆ. ಇದನ್ನು ಎತ್ತಿದರೆ ಒಂದು ಮತ್ತು ಮೂರನೇ ಗೂಟದ ಗೊಲೆಗಳಿಗೆ ಕಡ್ಡಿ ಹಾಕಿ ಎತ್ತಿದರೆ, ಈ ನೂಲೆ ಮುಂದಿನ ಕೆಲಸಕ್ಕೆ ಗೊಲೆ ಬೀಳುತ್ತಾ ಅನುಕೂಲವಾಗುತ್ತದೆ. ಪ್ರತಿಸಲವೂ ಒಂದು ಮತ್ತು ಮೂರನೆಯ ನೂಲು ಬಿಟ್ಟರೆ ಎರಡು ಆಣೆ ಆಗಿಬಿಡುತ್ತದೆ. ರೀತಿ ಕುಕ್ಕಡಿಯ ನೂಲನ್ನೂ ಹಾಸು ಹಾಕುತ್ತಾರೆ. ಇಲ್ಲಿ 'ಸ್ವಲುಗೆ' (ಇದು ಹಗುರ ಮರದ್ದಾಗಿದ್ದು, ನೂಲನ್ನು ಇದರಲ್ಲಿ ಸೇರಿಸುತ್ತಾರೆ). 'ದಾಣಿ', 'ಹೂಡುಬೆತ್ತ' ಮತ್ತು 'ಉಕ್ಕೆಕಲ್ಲು' ಎಂಬ ಸಾಮಾಗ್ರಿಗಳು ಬಳಕೆಯಾಗುತ್ತವೆ.

ಅರಗಣಿಯಿಂದ ತೆಗೆದು ನೂಲಿನ ಹಾಸನ್ನು ಹಟ್ಟಿಯ ಹೊರಗೆ ಊಡುಬೆತ್ತದಿಂದ **X** ಆಕಾರದ ಎರಡು ನಿಲುವಿನಲ್ಲಿ ಮಧ್ಯಕ್ಕೆ ಹಾಸುತ್ತಾರೆ. ಹಾಸಿ ಅದಕ್ಕೆ ಬೊಂಬೆಯಿಂದ ಹಂಬಲಿ ಹಚ್ಚಿ 'ಕುಂಚಿಗೆ'ಯಿಂದ ಬಾಚುತ್ತಾರೆ. ಇದರಿಂದ ನೂಲಿಗೆ ಹಂಬಲಿ ಚೆನ್ನಾಗಿ ಹತ್ತಿಕೊಳ್ಳುತ್ತದೆ. ಹಂಬಲಿಯನ್ನು ಹುಣಸೇ ಪಿಕ್ಕಗಳನ್ನು ಚೆನ್ನಾಗಿ ಸದೆದು ಬೆಳಿಗ್ಗೆ ನೀರಲ್ಲಿ ನೆನೆಹಾಕಿ, ಸಂಜೆ ಕಾರ ಹರೆದಂತೆ ಹರೆಯುತ್ತಾರೆ. ಇದಕ್ಕಾಗಿಯೆ ಗುಂಡುಗಳು ಪ್ರತ್ಯೇಕವಾಗಿರುತ್ತವೆ. ಹೀಗೆ ಚಟ್ನಿಯಂತೆ ತಿರುವಿದ ಹಂಬಲಿಗೆ ಒಂದು ಕೊಡ ನೀರು ಹಾಕಿ ತಮಗೆ ಬೇಕಾದ ಹವಣಿಗೆ ಕದರಿ ಒಲೆಮೇಲಿಟ್ಟು ಚೆನ್ನಾಗಿ

ಕಾಯಿಸುತ್ತಾರೆ. ಬೆಳಿಗ್ಗೆ ಹೊತ್ತು ಮೂಡುವ ಮೊದಲು ನೀರಂಬಲಿಯನ್ನು ಹಾಸಿಗೆ ಇಡುತ್ತಾರೆ. ನಂತರ 'ಗಟ್ಟಂಬಲಿ'ಯನ್ನು ಎರಡು ಬಾರಿ ಇಡುತ್ತಾರೆ. ಹಾಸಿಗೆ ಕೈಯಿಂದ ಹಚ್ಚಿ ಕುಂಚಿಗೆಯಿಂದ ಸವರುತ್ತಾರೆ. ಸುಮಾರು ಹತ್ತನ್ನೊಂದು ಗಂಟೆಯ ಹೊತ್ತಿಗೆ ಇಡೀ ಹಾಸನ್ನು ಎರಡು ನುಲೆ ಹಾಕಿಕೊಂಡು ಮಗ್ಗಕ್ಕೆ ತಂದು ಅಣೆ ಹಾಕಿಕೊಳ್ಳುತ್ತಾರೆ.



**ಊಡುಬೆತ್ತ**




**ಕುಂಚಿಗೆ**

ಕುಂಚಿಗೆಯನ್ನು ಕಾರಂಜಿ ಹುಲ್ಲಿನ ಬೇರಿನಿಂದ ಮಾಡಿರುತ್ತಾರೆ. ಕೇದಿಗೆ ಮೆಳೆಯ ಕಟ್ಟಿನಿಂದ ಇದನ್ನು ಬಂಧಿಸಿರುತ್ತಾರೆ. ತೆಳುವಾದ ನಾಲ್ಕು ದಬ್ಬೆಗಳನ್ನು ಹಾಕಿ ಹೊಲಿದಿರುತ್ತಾರೆ. ಅಂಬಲಿಯನ್ನು ಕುಡಿದುಕುಡಿದು ಇದು ಒರಟಾಗಿಯೂ ಬಂದೋಬಸ್ತಾಗಿಯೂ ಇರುತ್ತದೆ.


ಮಗ್ಗದ ಗುಂಡಿಗೆ ನೂಲಿನ ಹಸೆ ಬರಲು ಹೊರಗಡೆ ಇಷ್ಟೆಲ್ಲ ಪ್ರಕ್ರಿಯೆ ಆಗಬೇಕಾಗುತ್ತದೆ. ಮುಂದೆ ಮಗ್ಗದ ಗುಂಡಿಗೆ ಹಾಸು ಬಂದಾಗ, ಅಲ್ಲಿ 'ಅಂಬುತಿಕೆ' ಎಂಬ ದಬ್ಬೆಯಿಂದ ಪ್ರತಿ ಎಳೆಯನ್ನು

ಲಾಳಿಯಿಂದ ಹಾಕಿ ಆ ದೆಬ್ಬೆಯಿಂದ ಬಡಿದು ಕೂರಿಸುತ್ತಾರೆ. ಹೀಗೆ ನೂಲು ನೂಲಿಗೂ ಗೊಲೆ ಬೀಳುತ್ತಾ ಹೋಗುತ್ತದೆ. ಮುಖ್ಯ ಪಾತ್ರವಹಿಸುವುದೆಂದರೆ ಇಲ್ಲಿ 'ಲಾಳಿ'. ಇದು ನೂಲನ್ನು ತುಂಬಿರುವ ಕೊಳಪೆ. ಒಮ್ಮೆಗೆ ಸುಮಾರು ಹತ್ತಾರು ಇಂಥ ಲಾಳಿಯನ್ನು ತಯಾರಿಸಿಟ್ಟುಕೊಂಡಿರುತ್ತಾರೆ. ಇದಕ್ಕೆ ನೂಲನ್ನೊ 'ತುಂಬುಗಟ್ಟಿಕೆ' (ಲಾಳಿಗೆ' ನೂಲನ್ನು ತುಂಬಲು ಬಳಸುವ ಒಂದು ಮೊಳ ನಾಕುಬಟ್ಟು ಅಳತೆಯ ಒಂದು ಬಿದಿರು ಕಡ್ಡಿ)ಯಿಂದ ತುಂಬುತ್ತಾರೆ. ಅಲ್ಲದೆ ಅಚ್ಚಗಡ್ಡಿಯನ್ನು ಬೆದಹೊಯ್ಯಲು ಬಳಸುತ್ತಾರೆ. ಇದರಲ್ಲಿ ಒಂದು ಬಗನೆ ಮತ್ತೊಂದು ಅಡಿಕೆಕಡ್ಡಿ ಎರಡೂ ಒಟ್ಟಿಗೇ ಇರುತ್ತವೆ. 'ಒಳಗೋಲು' ಎಂಬುದು ಒಂದು ಬಿದರಿನ ಕೋಲು, ದುಂಡಗೆ ಸ್ವಲ್ಪ ದಪ್ಪಗಿರುತ್ತದೆ.




**ಅಂಬುತಿಕೆ**

'ತಾರತಟ್ಟೆ ದಬ್ಬೆ' ಮತ್ತು 'ತಾರತಟ್ಟೆ ಕಲ್ಲು'ಗಳೂ ಇಲ್ಲಿ ಬಹಳ ಮುಖ್ಯವಾದವು. ಇದರ ಮೇಲೆ ಅಂಬುತಿಕೆ ಕುಳಿತಿರುತ್ತದೆ.



**ತಾರತಟ್ಟೆ ಕಲ್ಲು ಮತ್ತು ದೆಬ್ಬೆ**


'ಗುಂಜಗಲ್ಲು' ಎಂಬುದು ಇಲ್ಲಿ ನೇಯುವವನ ಪಕ್ಕದಲ್ಲಿರುತ್ತದೆ. ಒಂದು ಅಗಲವಾದ ಕಲ್ಲಿನಲ್ಲಿ ಕೈಗುಂಜನ್ನು ಹಾಕಿಕೊಂಡು ಸ್ವಲ್ಪ ನೂಲನ್ನು ಲಾಳಿಗೆ ತುಂಬಿಕೊಳ್ಳಲು ಅನುಕೂಲವಾಗುವಂತೆ ಈ ಕಲ್ಲಿನಲ್ಲಿ ಹಂಬಲಿಯ ಜೊತೆ ಕಲಸಲು ಬಳಸುತ್ತಾರೆ.



**ಗುಂಜಗಲ್ಲು**


ಕಂಬಳಿ ನೂಲಿನ ಆಚೆಯ ಬದಿಯಲ್ಲಿ 'ಕರಗೋಲು' ಇರುತ್ತದೆ. ಇದು ಮುಖ್ಯವಾಗಿ ನೇಕಾರನ ಆಚೆಗೆ ಎರಡು ಹಗ್ಗದ ಎಳೆಗಳು ಇದನ್ನು ಬಂಧಿಸಿರುತ್ತವೆ. ಈ ಕರಗೋಲು ಕಂಬಳಿ ನೂಲಿನ ಆಚೆಯ ಬದಿಯಲ್ಲಿರುತ್ತದೆ. ಅಲ್ಲದೆ ಎರಡು ಎಳೆಯ ಹಗ್ಗದ ಒಂದು ಎಳೆ ನೇಕಾರನ ಬಲಬದಿಯಲ್ಲಿರುವ ಒಂದು ಚಿಕ್ಕ ಗೂಟಕ್ಕೆ ಕಟ್ಟಲ್ಪಟ್ಟಿರುತ್ತದೆ. ಬೇಕಾದ ಅಳತೆಗೆ ಅದನ್ನು ಕಡಿಮೆ, ಹೆಚ್ಚು ಮಾಡಿಕೊಳ್ಳಲು ಅನುಕೂಲವಾಗಿರುತ್ತದೆ. ಕಂಬಳಿ ನೂಲಿನ ಆಚೆಯ ಬದಿಯಲ್ಲಿರುತ್ತದೆ. ಅಲ್ಲದೆ ಎರಡು ಎಳೆಯ ಹಗ್ಗದ ಒಂದು ಎಳೆ ನೇಕಾರನ ಬಲಬದಿಯಲ್ಲಿರುವ ಒಂದು ಚಿಕ್ಕ ಗೂಟಕ್ಕೆ ಕಟ್ಟಲ್ಪಟ್ಟಿರುತ್ತದೆ. ಬೇಕಾದ ಅಳತೆಗೆ ಅದನ್ನು ಕಡಿಮೆ, ಹೆಚ್ಚು ಮಾಡಿಕೊಳ್ಳಲು ಅನುಕೂಲವಾಗಿರುತ್ತದೆ.

ಕರಗೋಲಿಗೆ ಕಟ್ಟಿರುವ ಎರಡೂ ಎಳೆಯ ಹಗ್ಗಗಳೂ ನೇಕಾರನಿಂದ ಹತ್ತು ಮೊಳ ದೂರದಲ್ಲಿರುತ್ತದೆ. ಇದು ಸರಿಗಾಡುವಂತಿರಬೇಕು.



**ಕರಗೋಲು**


ಈ ಹಗ್ಗ ಒಟ್ಟು ಸುಮಾರು ಒಂಬತ್ತು ಮಾರುದ್ದ ಇರುತ್ತದೆ. ಮಗ್ಗದ ಗುಂಡಿ ಸುಮಾರು ಎರಡೂವರೆ ಅಡಿಯಿಂದ ಮೂರು ಅಡಿ ಇರುತ್ತದೆ. ಉರಿಯನ್ನು ಹಾಕಿಕೊಳ್ಳಲು 'ಕೊಲ್ಡಿಗೆ' ಯನ್ನು ಹಾಕಿಕೊಂಡಿರುತ್ತಾರೆ.



**ಕೊಲ್ಡಿಗೆ**

ಹಗ್ಗವನ್ನು ಮುದುರಿ ಸಿಗಿಸಲು ಕೊಕ್ಕೆಯೊಂದು ಇರುತ್ತದೆ. ಇದನ್ನು ಮರದ ಕವೆಯಿಂದ ಮಾಡಿಕೊಂಡಿರುತ್ತಾರೆ. ಬಣಪಕಲ್ಲಿನ ಚಿಕ್ಕ ಬಾನಿ ಒಂದಿರುತ್ತದೆ. ಇದಕ್ಕೆ 'ನೀರೂಡೋ ಕುಡಿಕೆ' ಅಥವಾ 'ಉಡೆ ಕುಡಿಕೆ' ಎನ್ನುತ್ತಾರೆ. ಕುಂಟೆ ನೇಯ್ದೆ ಆದ ಕಂಬಳಿಯ ಭಾಗವನ್ನು ಸುತ್ತಿಕೊಳ್ಳುತ್ತದೆ. ಮಗ್ಗದಲ್ಲಿ ಇದೇ ದೊಡ್ಡ ವಸ್ತು.

ಈ ಕುಂಟೆಯನ್ನು ಅಲ್ಲಾಡದಂತ 'ಲಿಂಗದಗೂಟ' ಹಿಡಿದಿಟ್ಟಿರುತ್ತದೆ. ಕುಂಟೆ ಚಚ್ಚೌಕಲಾಗಿದ್ದು ಅದರ ನಾಲ್ಕು ಮಗ್ಗಲಿಗೂ ಲಿಂಗದ ಗೂಟದೊಳಗೆ ಸೇರುವಂತೆ ಉಗುಲಿರುತ್ತದೆ.



**ಮಗ್ಗದ ಕುಂಟೆ**

ಮಗ್ಗದ ಕುಂಟೆ ನೇಯುವವನ ತೊಡೆಯ ನೇರಕ್ಕೆ ಇರುತ್ತದೆ. ಒಂದೊಂದು ಸುತ್ತು ಆದಂತೆಲ್ಲ ಲಿಂಗದ ಗೂಟ ಅದನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತಿರುತ್ತದೆ 'ಶೇಡು' – ಇದು ಮೂರು ಮೊಳ ನಾಲ್ಕು ಬೊಟ್ಟು ಉದ್ದದ ಬಿದಿರಿನ ದೆಬ್ಬೆ. ಇದನ್ನು ಎರಡು ಕಡೆಯಲ್ಲೂ ಚುಚ್ಚಿರುತ್ತಾರೆ. ಇದು ಕಂಬಳಿ ಕುಗ್ಗದಂತಿರಲು ಅನುಕೂಲವಾಗಿರುತ್ತದೆ. ಕಂಬಳಿಯ ಅಳತೆಗೆ ಸರಿಯಾಗಿ ಇರುತ್ತದೆ. ಇದರ ಎರಡು ತುದಿಗೆ ಚೂಪು ಮೊಳೆ ಇರುವುದರಿಂದ ಕಂಬಳಿಯ ಅಳತೆಗೆ ಸರಿಯಾಗಿ ಹಿಡಿದಿಟ್ಟಿರುತ್ತದೆ. 'ಬೇವು' – ಇದು ಬಗನೆ ಮರದಿಂದ ಮಾಡಿದ ಮರ. ಒಂದು ಕಡೆ ಚೂಪಾಗಿರುತ್ತದೆ. ಪ್ರತಿ ಎಳೆಯನ್ನು ಹಾಕಿದಾಗಲೂ ಇದರಿಂದ ನೂಲನ್ನು ಗುದ್ದಿ ಗುದ್ದಿ ಕೂರಿಸುತ್ತಾರೆ. 'ಒಕ್ಕಳಗಟ್ಟಿಕೆ' – ಕಂಬಳಿಯನ್ನು ನೇಯಲು ಮತ್ತು ಹಾಕಿಕೊಳ್ಳಲು ಬಳಸುತ್ತಾರೆ. ಇದನ್ನು ಸಣ್ಣ ಉರಿಗಳಿಂದ ಎರಡೂ ಕಡೆ ಮಾಡಿರುವ ತೂತುಗಳಿಂದ ಬಂಧಿಸಿರುತ್ತಾರೆ. 'ಬೆದ' – ಇದು ಹತ್ತಿದಾರದಿಂದ ಮಾಡಿದ್ದು. ಇದನ್ನು ಅಣಿಗೆ ಎರಡು

ಕಡ್ಡಿ ಏರಿಸಿ ಗೊಲೆ ಹಾಕಿರುತ್ತಾರೆ. ಇದು ಕೆಳಕ್ಕೆ ಮತ್ತು ಮೇಲಕ್ಕೆ ಕಂಬಳಿಯ ನೂಲನ್ನು ಎತ್ತಿ ಕೊಡುತ್ತದೆ. ಬಲಭಾಗದ ಬೇವು ತಿರುಗಾಡಲು ಮತ್ತೊಂದು ಹಳೆಯ ಬೇವನ್ನು ಅಡ್ಡ ಹಾಕಿಕೊಂಡಿರುತ್ತಾರೆ. ಇದರಿಂದ ನೂಲನ್ನೂ ಬಡಿದು ಕೂರಿಸುವ ಬೇವು ಸುಲಭವಾಗಿ ಅತ್ತಿತ್ತ ಅಡ್ಡಾಡುತ್ತಿರುತ್ತದೆ. ಎರಡುದಿನ ಇಲ್ಲ ಒಂದೇ ದಿನಕ್ಕೂ ಒಂದು ಕಂಬಳಿ ನೇಯುತ್ತಾರೆ. ಕಂಬಳಿ ನೇಯುವುದು ಮುಗಿದರೆ 'ಕರೆ ಹೊತ್ತಾರುವುದು' ಎಂದು ಕರೆಯುತ್ತಾರೆ.

ಮಗ್ಗದ ಎಲ್ಲಾ ಸಾಮಾಗ್ರಿಯನ್ನು ದೀಪಾವಳಿಯಲ್ಲಿ ಕೆರೆಗೆ ಒಯ್ದು ತೊಳೆದು ತಂದು ಸಂಜೆ ಪೂಜುತ್ತಾರೆ. ಹಬ್ಬಕ್ಕೆ ಮಾಡಿದ ಅಡಿಗೆಯಲ್ಲಿ ಸಿಹಿಯ ಎಡೆಯನ್ನು ಮಗ್ಗಕ್ಕೆ ನೈವೇಧ್ಯ ಮಾಡುತ್ತಾರೆ. ಈ ಎಡೆ ಹಾಕದಿದ್ದರೆ ಇಲಿಗಳು ನೂಲನ್ನು ತಿನ್ನುತ್ತವೆ ಎಂಬ ನಂಬಿಕೆಯಿದೆ. ಇದು ದೇವರಿಗೆ ಸಮಾನವೆಂಬ ಭಾವನೆಯೂ ಇದೆ. ಅಲ್ಲದೆ ಕಂಬಳೆಯನ್ನು ತುಳಿಯುವುದಾಗಲಿ, ಕಾಲು ಸೋಕಿಸುವುದಾಗಲಿ ಮಾಡುವಂತಿಲ್ಲ. ಅದು 'ಸಿದ್ಧೇಶ್ವರ ಸ್ವಾಮಿ' ಎಂದು ನಂಬುತ್ತಾರೆ.

ಕಂಬಳಿ ಮಗ್ಗ ಜನಪದರ ತಾಂತ್ರಿಕತೆಗೆ ಒಂದು ಸ್ಪಷ್ಟ ದ್ಯೋತಕವಾಗಿದೆ. ಅಲ್ಲದೆ ಅದರೊಂದಿಗೆ ಹಲವಾರು ಆಚರಣೆಗಳು, ನಂಬಿಕೆಗಳೂ ಜೀವಂತವಾಗಿವೆ. ಇದರಲ್ಲಿ ದೇವರಿಗೆ ಬೇಕಾದ ನಿಶಾನೆಗಳನ್ನೂ ನೇಯುತ್ತಾರೆ. ಅಜ್ಜಂಪುರದ ಬಳಿಯ ಮುಗಳಿಯಲ್ಲಿ ಕಂತೆ ನೇಯುವುದು ಒಂದು ವಿಶೇಷ ಸಂದರ್ಭ. ಇದು ಸೊಲ್ಲಾಪುರದ ಸಿದ್ಧರಾಮೇಶ್ವರ ಸ್ವಾಮಿಯ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಜಾತ್ರೆಗಾಗಿ ಸ್ವಾಮಿಯ ಅಡಿಗೆ ಹಾಕಲು ನೇಯುವ ವಿಶೇಷ ಕಂಬಳಿ, ಇದರ ನೇಯ್ದೆಗೆ ಬಹಳಷ್ಟು ವಿಧಿಗಳು, ಆಚರಣೆಗಳೂ ಇವೆ. ಯಾರ ಕಣ್ಣಿಗೂ ಕಾಣದಂತೆ ನೇಯಬೇಕೆಂಬುದು ಅಂಥ ವಿಧಿಗಳಲ್ಲೊಂದು.

ಕಂಬಳಿ ಮಗ್ಗ ಆಧುನಿಕ ಕಾಲಕ್ಕೆ ಆಧುನಿಕ ವಸ್ತುಗಳ ತಯಾರಿಕೆಗೆ ಬದಲಾಗದಿದ್ದರೆ, ಸಾಂಪ್ರದಾಯಿಕ ನೆಲೆಯಲ್ಲಿ ಕಂಬಳಿ ನೇಯತೊಡಗಿದರೆ ಹೆಚ್ಚು ಕಾಲ ಉಳಿಯಲಾರದು. ಏಕೆಂದರೆ, ಇಂಥ ತಯಾರಿಕೆಗೆ ಈಗ ಹೆಚ್ಚು ಬೇಡಿಕೆಯಿಲ್ಲ ಎನ್ನುವುದಕ್ಕಿಂತ ತಮ್ಮ ತಯಾರಿಕೆಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆಯನ್ನು ಗ್ರಾಮೀಣ ಪ್ರದೇಶದಲ್ಲಿ ಮಾಡಿಕೊಳ್ಳದಿರುವುದು ಮುಖ್ಯ ಕಾರಣ. ಅಲ್ಲದೆ ಆಧುನಿಕತೆ ಅತಿಯಾಗಿ ಕಂಬಳಿ ಚುಚ್ಚುತ್ತದೆಂದು ತ್ಯಜಿಸುವವರೆ ಅಧಿಕ. ಆದರೂ ಕುರಿಕಾಯಲು, ಕಣ ಕಾಯಲು, ಮಾಗಿ ಚಳಿಗೆ ಕಂಬಳಿಯೆ ಶ್ರೀರಕ್ಷೆ, ಮಲೆನಾಡಿಗಂತೂ ಕಂಬಳಿ ಬೇಕೇಬೇಕು: ಕಂಬಳಿಯ ತಯಾರಿಕೆಯೂ ಹೊಸ ಆವಿಷ್ಕಾರಗಳನ್ನು ಪಡೆಯಬೇಕಾಗಿರುವುದು ಅನಿವಾರ್ಯವಿದೆ. ಚಿಕ್ಕನಾಯಕನಹಳ್ಳಿಯಲ್ಲಿ ನೆಲಹಾಸುಗಳನ್ನು ಆಧುನಿಕವಾಗಿ ತಯಾರಿಸುವುದರಿಂದ ಅಲ್ಲಿ ಕಂಬಳಿ ಉದ್ಯಮ ಹೊಸ ಸಾಧ್ಯತೆಗಳಿಗನುಗುಣವಾಗಿ ಬಳಕೆಯಾಗುತ್ತಿದೆ. ಕಂಬಳಿ ಮಗ್ಗ, ಕಂಬಳಿ ತಯಾರಿಕೆ, ಕಂಬಳಿ ಬಳಕೆಯೂ ಸಹ ಒಂದು ಸಂಸ್ಕೃತಿಯ ಆಚರಣೆ ನಂಬಿಕೆಗಳ ಅಧ್ಯಯನ ಮಾಡಲು ಸಹಕಾರಿಯಾಗಿದೆ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಹೊಸ ಹೊಸ ಅಧ್ಯಯನಗಳು ನಡೆಯಬೇಕಾಗಿದೆ.

**ಕ್ಷೇತ್ರಕಾರ್ಯ ಮಾಹಿತಿ :** ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಗಡೀಹಳ್ಳಿ ತಿಮ್ಮಣ್ಣ ನೀಡಿದವರು. ವಯಸ್ಸು ಸುಮಾರು ೭೦ ವರ್ಷಗಳು. ಇವರ ಮುಖ್ಯ ಕಸುಬು ಕಂಬಳಿ ನೇಯುವುದು. ರೇಖಾಚಿತ್ರಗಳನ್ನು ನಾನೇ ಬರೆದಿದ್ದೇನೆ.

**ಡಾ. ಕೆ.ವಿ. ನಾರಾಯಣ ಅವರ ಒಂದು ಸಂವಾದ**

# ೩. ಕೈಮಗ್ಗ ನೇಯ್ಗೆಯ ಕತೆ

**– ಕೆ. ಪ್ರಸನ್ನ**

## ಖಾದಿ ಬಟ್ಟೆ, ಕೈಮಗ್ಗದ ಬಟ್ಟೆ

ಬಟ್ಟೆ ತಯಾರಿಕೆಯಲ್ಲಿ ಮುಖ್ಯವಾಗಿ ಎರಡು ಘಟ್ಟಗಳಿರುತ್ತವೆ. ಹತ್ತಿಯಿಂದ ನೂಲನ್ನು ತಯಾರಿಸಿಕೊಳ್ಳುವುದು ಮೊದಲನೇಯ ಘಟ್ಟವಾದರೆ, ನೂಲಿನಿಂದ ಬಟ್ಟೆಯನ್ನು ನೇಯುವುದು ಎರಡನೇಯ ಘಟ್ಟ. ನೂಲುವುದು ಹಾಗೂ ನೇಯುವುದು ಈ ಎರಡೂ ಪ್ರಕ್ರಿಯೆಗಳನ್ನು ಕೈಗಳಿಂದಲೇ ನಿರ್ವಹಿಸಿದಾಗ ಸಿದ್ಧವಾಗುವ ಬಟ್ಟೆಯನ್ನು ಖಾದಿಬಟ್ಟೆಯೆಂದು ಕರೆಯಲಾಗುತ್ತದೆ. ನೂಲುವ ಕ್ರಿಯೆ ಮಾತ್ರವೇ ಸ್ವಯಂಚಾಲಿತ ಯಂತ್ರಗಳ ಮೂಲಕ ನಡೆದು, ನೇಯ್ಗೆಯ ಪ್ರಕ್ರಿಯೆಯು ಕೈಮಗ್ಗದಿಂದ ನಡೆದರೆ, ಅಂತಹ ಬಟ್ಟೆಯನ್ನು 'ಕೈಮಗ್ಗದ ಬಟ್ಟೆ' ಎಂದು ಕರೆಯಲಾಗುತ್ತದೆ.

ಖಾದಿ ಬಟ್ಟೆಗೆ 'ಖಾದಿ' ಎಂಬ ಹೆಸರನ್ನು ನೀಡಿದವರು ಗಾಂಧೀಜಿ. ಮೊದಲು ಆ ಹೆಸರು ಇರಲಿಲ್ಲ. ಅಥವಾ ಪ್ರತ್ಯೇಕವಾದ ಒಂದು ಹೆಸರಿನ ಅಗತ್ಯವಿರಲಿಲ್ಲ. ಏಕೆ ಎಂದು ತಿಳಿದುಕೊಳ್ಳೋಣ. ಹಿಂದೆಲ್ಲ ಅಂದರೆ ಸ್ವಯಂಚಾಲಿತ ಯಂತ್ರಗಳು ಬರುವುದಕ್ಕೆ ಮೊದಲು, ನೂಲುವುದು ಹಾಗೂ ನೇಯುವುದು ಎರಡೂ ವ್ಯಕ್ತಿಗಳ ಮಾನವ ಕೈಗಳಿಂದಲೇ ನಡೆಯುತ್ತಿತ್ತು. ತಾನೆ? ನೂಲುವುದು ನೇಯುವುದು ಮಾತ್ರವೇ ಏಕೆ ಎಲ್ಲ ಕೆಲಸಗಳು ಕೈಗಳಿಂದಲೇ ನಡೆಯುತ್ತಿದ್ದವು. ಬಡಗಿ ಕೆಲಸ, ಕುಂಬಾರಿಕೆಯ ಕೆಲಸ, ವ್ಯವಸಾಯ, ನೇಯ್ಗೆ ಹೀಗೆ ಸಕಲವೂ ಮಾನವ ಕೈಗಳಿಂದಲೇ ನಡೆಯುತ್ತಿದ್ದವು. ಕೈಗಳಿಗೆ ಪೂರಕವಾಗಿ ರಾಟೆ, ಚಕ್ರ, ನೇಗಿಲು ಇತ್ಯಾದಿ ಉಪಕರಣಗಳು ಇದ್ದವು. ಅಷ್ಟೆ, ಹಾಗಾಗಿ ಸ್ವಯಂಚಾಲಿತ ಯಂತ್ರಗಳು ಜಾರಿಗೆ ಬರುವ ಮೊದಲು ಬಟ್ಟೆಯು ಕೇವಲ ಬಟ್ಟೆಯಾಗಿತ್ತು. ಅದಕ್ಕೆ ವಿಶೇಷವಾದ ಹೆಸರಿಡುವ ಅಗತ್ಯವಿರಲಿಲ್ಲ.

ಬ್ರಿಟೀಷರು ಈ ಹಳೆಯ ವ್ಯವಸ್ಥೆಯನ್ನು ಮುರಿದರು. ಸ್ವಯಂಚಾಲಿತ ಯಂತ್ರಗಳನ್ನು ಜಾರಿಗೆ ತಂದರು ಹಾಗೂ ಯಂತ್ರಗಳನ್ನು ಬಳಸಿಕೊಂಡು ತಮ್ಮ ಏಕಸ್ವಾಮ್ಯವನ್ನು ಜಾರಿಗೆ ತಂದರು. ಇವರು ಈ ಕೆಲಸವನ್ನು ಎರಡು ಘಟ್ಟಗಳಲ್ಲಿ ಮಾಡಿದರು. ಮೊದಲ ಘಟ್ಟದಲ್ಲಿ ಭಾರತದ ಹತ್ತಿಯನ್ನು ತನ್ನ ದೇಶಕ್ಕೆ ಕೊಂಡೊಯ್ದು, ಅಲ್ಲಿ ಗಿರಣಿಗಳಲ್ಲಿ ಸ್ವಯಂಚಾಲಿತ ಯಂತ್ರಗಳ ಮೂಲಕ ನೂಲು ತಯಾರಿಸಿ ತಂದು ಭಾರತೀಯ ನೇಕಾರರಿಗೆ ನೇಯಲಿಕ್ಕೆಂದು ತಂದು ಕೊಡಲಿಕ್ಕೆ ಶುರುಮಾಡಿದರು. ಎರಡನೇಯ ಘಟ್ಟದಲ್ಲಿ ಪೂರ್ತಿ ಬಟ್ಟೆಯನ್ನೇ ಸ್ವಯಂಚಾಲಿತ ಯಂತ್ರಗಳಲ್ಲಿ ನೇಯ್ದು ಭಾರತಕ್ಕೆ ತಂದು ಭಾರತೀಯರಿಗೆ ಮಾರತೊಡಗಿದರು. ಹೀಗೆ ಕಾರ್ಖಾನೆ ನೂಲಿಂದ ನೇಯ್ದ ಬಟ್ಟೆಯನ್ನು ಕೈಮಗ್ಗದ ಬಟ್ಟೆ ಎಂದು ಕರೆಯುವ ವಾಡಿಕೆ ಇತ್ತು. ಇತ್ತ ಖಾದಿಬಟ್ಟೆಗೆ 'ಖಾದಿ' ಎಂಬ ಪ್ರತ್ಯೇಕ ನಾಮಕರಣದ ಅಗತ್ಯ ಇತ್ತು.

**ನೈಸರ್ಗಿಕ ಬಣ್ಣಗಾರಿಕೆ**

ನೈಸರ್ಗಿಕ ಬಣ್ಣಗಾರಿಕೆಯ ವಿಧಾನದಲ್ಲಿ ಬಳಕೆಯಾಗುವ ಎಲ್ಲ ಬಣ್ಣ ಪದಾರ್ಥಗಳೂ, ಇಲ್ಲವೇ ಸಸ್ಯಮೂಲದಿಂದ ಬಂದವುಗಳಾಗಿರುತ್ತವೆ ಅಥವಾ ಸಹಜ ಖನಿಜಗಳಾಗಿರುತ್ತವೆ. ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ನೈಸರ್ಗಿಕ ಬಣ್ಣಗಾರಿಕೆಯ ತಂತ್ರಗಾರಿಕೆ ಲಭ್ಯವಿದೆ.

**ರಾಸಾಯನಿಕ ಬಣ್ಣಗಾರಿಕೆ ಪರಿಸರಕ್ಕೆ ಹಾನಿಕಾರಕ**

ಈಗೀಗ ಬಟ್ಟೆಗಳಿಗೆ ಹೆಚ್ಚಾಗಿ ರಾಸಾಯನಿಕ ಬಣ್ಣಗಳನ್ನು ಹಾಕಲಾಗುತ್ತಿದೆ. ರಾಸಾಯನಿಕ ಬಣ್ಣಗಳು ಗಟ್ಟಿ ಬಣ್ಣಗಳು ಆದರೆ ಅವುಗಳಿಗೆ ಹಲವು ಅಡ್ಡಗುಣಗಳಿವೆ. ರಾಸಾಯನಿಕ ಬಣ್ಣಗಳು ಕಾರ್ಖಾನೆಗಳಲ್ಲಿ ತಯಾರಾಗುತ್ತವೆ. ರಾಸಾಯನಿಕ ಮೂಲವಸ್ತುಗಳ ಸಲುವಾಗಿ ಬೃಹತ್ ಪ್ರಮಾಣ ಗಣಿಗಾರಿಕೆ ನಡೆಸುವುದು ಅಗತ್ಯವಾಗುತ್ತದೆ. ರಾಸಾಯನಿಕ ಬಣ್ಣ ಹಾಕುವಾಗ ಹೊರಬರುವ ಬಣ್ಣ ತೊಳೆದ ನೀರು, ಅಳಿದುಳಿದ ಬಣ್ಣಗಳು, ಹಾಗೂ ಕಲ್ಮ ಪದಾರ್ಥಗಳು, ಪರಿಸರಕ್ಕೆ ಹಾನಿಕಾರಕವಾಗಿರುತ್ತದೆ. ರಾಸಾಯನಿಕ ಬಣ್ಣಗಾರಿಕೆ ಕೇಂದ್ರಗಳ ಸುತ್ತಮುತ್ತ ಇರುವ ಜಲಮೂಲಗಳು, ನದಿಗಳು ಹಾಗೂ ಕೆರೆಕುಂಟೆಗಳು, ರಾಸಾಯನಿಕ ಪದಾರ್ಥಗಳ ಕಾರಣದಿಂದಾಗಿ ಕಲುಷಿತಗೊಳ್ಳುತ್ತವೆ. ಇಂತಹ ನೀರನ್ನು ಬಳಸುವ ಮನುಷ್ಯರಿಗೆ, ಜಾನುವಾರುಗಳಿಗೆ ಹಾಗೂ ಪ್ರಾಣಿಪರಿಸರಕ್ಕೆ ಇದು ಅನಾರೋಗ್ಯಕರವಾಗಿ ಪರಿಣಮಿಸುತ್ತದೆ. ಬಟ್ಟೆ ಧರಿಸುವವರಿಗೂ ಕೂಡ ರಾಸಾಯನಿಕ ಬಣ್ಣಗಳು ತೊಂದರೆ ಕೊಡಬಲ್ಲವು. ಕೆಲವು ರಾಸಾಯನಿಕಗಳನ್ನು ಕ್ಯಾನ್ಸರ್ ಕಾರಕಗಳೆಂದು ಬಹಿಷ್ಕೃತಗೊಂಡಿವೆ. ಮಿಕ್ಕ ಕೆಲವು ರಾಸಾಯನಿಕ ಬಣ್ಣಗಳು ಧರಿಸಿದವರ ಚರ್ಮಕ್ಕೆ ಕಿರಿಕಿರಿ ಉಂಟುಮಾಡುವ ಹಾಗೂ ಚರ್ಮ ಖಾಯಿಲೆಗಳನ್ನು ಪ್ರೇರೇಪಿಸುವ ಗುಣವನ್ನು ಹೊಂದಿರುತ್ತವೆ. ನೈಸರ್ಗಿಕ ಬಣ್ಣಗಳಿಗೆ ಈ ಯಾವ ಅಡ್ಡಗುಣವೂ ಇಲ್ಲ.

ನೈಸರ್ಗಿಕ ಬಣ್ಣಗಳನ್ನು ಗಿಡಮೂಲಿಕೆ, ಮರದ ತೊಗಟೆ, ಮರದ ಕಾಂಡ, ಹೂವು, ಹಣ್ಣು, ಬೀಜಗಳು, ಕೆಲವು ಜಾತಿಯ ಮಣ್ಣುಗಳು ಹಾಗೂ ಖನಿಜಗಳಿಂದ ತಯಾರಿಸಲಾಗುತ್ತದೆ. ನೈಸರ್ಗಿಕ ಬಣ್ಣಗಳು ಬಳಕೆದಾರರಿಗಾಗಲೀ ಅಥವಾ ಪರಿಸರಕ್ಕಾಗಲಿ ಹಾನಿಕಾರಕವಲ್ಲ: ನೈಸರ್ಗಿಕ ಬಣ್ಣಗಾರಿಕೆಯ ವಿಧಾನದಲ್ಲಿ ನೀರು ಹಾಗೂ ಉರುವಲಿನ ಬಳಕೆಯೂ ಸಹಿತ ಕಡಿಮೆ ಪ್ರಮಾಣದಲ್ಲಿರುತ್ತದೆ. ಅನೇಕ ನೈಸರ್ಗಿಕ ಬಣ್ಣ ಪದಾರ್ಥಗಳು ಔಷಧೀಯ ಗುಣಗಳನ್ನು ಹೊಂದುವಂತಹ ಸಸ್ಯಗಳು, ಉದಾಹರಣೆಗೆ ನೈಸರ್ಗಿಕ ಬಣ್ಣಗಾರಿಕೆಯಲ್ಲಿ ಬಳಕೆಯಾಗುವ ಅಳಲೆಕಾಯಿಯು ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಪ್ರಮುಖ ಔಷಧ ಮೂಲವಾಗಿದೆ. ಅಥವಾ ನೀಲಿಬಣ್ಣ ತಯಾರಿಕೆಯಲ್ಲಿ ಬಳಕೆಯಾಗುವ ನೈಸರ್ಗಿಕ ನೀಲಿಯು (ಇಂಡಿಗೋ) ಚರ್ಮರೋಗಕ್ಕೆ ಮದ್ದು ಸಹಿತ ಹೌದು.

ಮಿಲ್ ಬಟ್ಟೆಗಳು, ಅದರಲ್ಲೂ ಸಿಂಥೆಟಿಕ್ ಬಟ್ಟೆಗಳು ಕಡಿಮೆ ಬೆಲೆಗೆ ಹೇಗೆ ಸಿಕ್ಕುತ್ತವೆ?

ಪರಿಸರದ ಹಾನಿ ಹಾಗೂ ಸಂಪನ್ಮೂಲಗಳ ದುರ್ಬಳಕೆಯ ಹಾನಿಯ ಬೆಲೆಯನ್ನು ಈ ಕೈಗಾರಿಕೆಗಳು ತೆರದೆ ನುಣುಚಿಕೊಳ್ಳುತ್ತಿರುವುದರಿಂದಾಗಿ ಇವುಗಳ ಮಾರಾಟ ಬೆಲೆ ಕಡಿಮೆಯಿರುತ್ತದೆ.

ಪರಿಸರನಾಶ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ದುರ್ಬಳಕೆ ಮಾಡುವ ಕೈಗಾರಿಕೆಗಳ ಮೇಲೆ ಪರಿಸರ ದಂಡವನ್ನು ವಿಧಿಸಬೇಕು.

**ಹತ್ತಿ**

ರಾಸಾಯನಿಕವಾಗಿ ತಯಾರಾಗುವ ರೆಯಾನ್ ಇತ್ಯಾದಿ 'ಸಿಂಥೆಟಿಕ್ ನೂಲು'ಗಳು ಲಭ್ಯವಾಗುವ ತನಕ ಬಟ್ಟೆ ತಯಾರಿಕೆಯಲ್ಲಿ ಅತ್ಯಂತ ಪ್ರಚಲಿತವಾಗಿ ಬಳಕೆಯಾಗುತ್ತಿದ್ದ ಮೂಲ ಸಾಮಗ್ರಿ ಹತ್ತಿಯೇ ಆಗಿರುತ್ತಿತ್ತು. ಹತ್ತಿಯ ನಂತರದಲ್ಲಿ ಉಣ್ಣೆ, ರೇಷ್ಮೆ, ಲೆನಿನ್ ಇತ್ಯಾದಿ ನೂಲುಗಳು ಒಂದರ ಹಿಂದೆ ಒಂದು ಸಾಲಾಗಿ ನಿಲ್ಲುತ್ತವೆ.

ಹತ್ತಿಯ ಉತ್ಪಾದನೆಯಲ್ಲಿ ಇಂದು ಭಾರತದೇಶವು ವಿಶ್ವದಲ್ಲಿ ಎರಡನೇಯ ಸ್ಥಾನದಲ್ಲಿದೆ. ಹಿಂದೆ ನಮ್ಮಲ್ಲಿ ಹತ್ತಿಯ ನೂರಾರು ತಳಿಗಳು ಮುಖ್ಯವಾಗಿ ಉದ್ದ ಕಡಿಮೆಯಿರುವ ಎಳೆಗಳ ಹಲವು ತಳಿಗಳು ಲಭ್ಯವಿದ್ದವು. ಕಡಿಮೆ ಉದ್ದದ ಎಳೆಗಳ ಈ ಹತ್ತಿ ತಳಿಗಳು ಕೈರಾಟೆಯಿಂದ (ಅರ್ಥಾತ್ ಚರಕದಿಂದ ಅಥವಾ ತಕಲಿಯಿಂದ) ನೂಲು ತೆಗೆಯುವುದಕ್ಕೆ ಹೇಳಿಮಾಡಿಸಿದಂತಹವು. ಹೆಚ್ಚಿನ ದೇಸಿ ಹತ್ತಿ ತಳಿಗಳು ಬದಲಾದ ವ್ಯವಸಾಯ ಪದ್ಧತಿಯಿಂದಾಗಿ ಈಗ ಮಾಯವಾಗಿವೆ. ಅವುಗಳ ಜಾಗವನ್ನು ಮಿಲ್ ಬಟ್ಟೆ ತಯಾರಿಸಲಿಕ್ಕೆ ಸೂಕ್ತವಾದ ಉದ್ದ ಎಳೆಯ ಮಿಶ್ರ ತಳಿಗಳು ಹಾಗೂ ಅಳವಡಿಸಲಗಿರುವ ಕುಲಾಂತರಿ ತಳಿಗಳು ಆಕ್ರಮಿಸಿಕೊಂಡಿವೆ.

ಮಿಲ್ ಬಟ್ಟೆಗಳಿಗೆ ಸೂಕ್ತ ಉದ್ದ ಎಳೆಯ ಅಮೇರಿಕನ್ ತಳಿಯನ್ನು ಬ್ರಿಟೀಷರು ನಮ್ಮ ದೇಶದ ರೈತರ ಮೇಲೆ ಬಲವಂತದಿಂದ ಹೇರಿ, ಕಳೆದ ಎರಡು ದಶಕಗಳಲ್ಲಿ ಹತ್ತಿ ಬೆಳೆಯುವ ರೈತ ಕೀಟನಾಶಕ, ದುಬಾರಿ ಬೆಲೆ ಹಾಗೂ ಇತರೆ ಖರ್ಚುಗಳನ್ನು ನಿಭಾಯಿಸಲಾರದೇ ಆತ್ಮಹತ್ಯೆಯ ದಾರಿ ಹಿಡಿದಿದ್ದನ್ನು ನೀವೆಲ್ಲ ಪತ್ರಿಕೆಗಳಲ್ಲಿ ಓದಿರುತ್ತೀರಿ. ಇದು ಹತ್ತಿ ಬೆಳೆಗಾರರ ಸಂಕಷ್ಟದ ಕತೆಯಾಯಿತು. ಇಷ್ಟೆಲ್ಲ ಸಂಕಷ್ಟಗಳ ನಡುವೆಯೂ ಕೆಲವು ಪ್ರಗತಿಪರ ಹತ್ತಿ ಬೆಳೆಗಾರರು ಹಳೆಯ ದೇಸಿ ತಳಿಗಳನ್ನು ಮತ್ತೆ ಜಾರಿಗೆ ತರುವ ಹಾಗೂ ಹತ್ತಿ ಕೃಷಿಯಲ್ಲಿ ಸಾವಯವ ಪದ್ಧತಿಯನ್ನು ಅನುಸರಿಸುವ ಧೈರ್ಯ ತೋರಿಸುತ್ತಿದ್ದಾರೆ.

ಹಿಂದೆಲ್ಲಾ ನಮ್ಮ ದೇಶದ ವಿವಿಧ ಭಾಗಗಳಲ್ಲಿ ಐದುನೂರಕ್ಕೂ ಹೆಚ್ಚು ಹತ್ತಿಯ ತಳಿಗಳು ಲಭ್ಯವಿದ್ದವಂತೆ. ಒಂದೊಂದು ಪ್ರದೇಶವೂ ಅಲ್ಲಿನ ಪರಿಸರ, ಮಳೆಯ ಮೊತ್ತ, ಮಣ್ಣಿನ ಗುಣ ಇತ್ಯಾದಿಗಳಿಗೆ ಹೊಂದಿಕೆಯಾಗುವಂತೆ ತನ್ನದೇ ಹತ್ತಿತಳಿಗಳನ್ನು ಹೊಂದಿದ್ದವಂತೆ. ಅವುಗಳಲ್ಲಿ ಬಣ್ಣದ ಹತ್ತಿಯ ತಳಿ ಕೂಡ ಸೇರಿತ್ತಂತೆ, ಬಣ್ಣದ ಹತ್ತಿಯ ತಳಿ ಈಗಲೂ ಆಫ್ಘಾನಿಸ್ತಾನದಲ್ಲಿ ಉಳಿದು ಬಂದಿದೆ. ದುರಂತವೆಂದರೆ ನಮ್ಮ ದೇಶದಲ್ಲಿ ಈಗ ಉಳಿದಿರುವ ಹತ್ತಿತಳಿಗಳ ಸಂಖ್ಯೆ ಇಪ್ಪತ್ತಕ್ಕೂ ಕಡಿಮೆಯಾಗಿದೆ.

**ದಾರ ಅಥವಾ ನೂಲು**

ನೂಲುವುದು ಎಂದರೆ, ಹತ್ತಿಯ ಎಳೆಗಳನ್ನು ಒಂದಕ್ಕೊಂದು ಹೊಸೆಯುತ್ತ ಸುತ್ತುತ್ತ, ಉದ್ದವಾದ ಹಾಗೂ ಏಕಪ್ರಕಾರವಾದ ನೂಲನ್ನು ತಯಾರಿಸುವ ತಂತ್ರವೇ ಆಗಿದೆ. ಹತ್ತಿಯ ಎಳೆಗಳ

ಉದ್ದವೆಂಬುದು ನೂಲಿನ ತೆಳುತನವನ್ನು ನಿರ್ಧರಿಸುವ ಪ್ರಮುಖ ಸಂಗತಿಯಾಗಿದೆ. ನೂಲುವವರ ಕೈಚಳಕವು ಸಹ ನೂಲನ್ನು ತೆಳುವಾಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹತ್ತಿಯ ಎಳೆಗಳು ಉದ್ದವಿದ್ದಷ್ಟೂ (ಎಳೆಗಳ ಉದ್ದವು ಬರಿಗಣ್ಣಿಗೆ ಪಕ್ಕನೆ ಗೋಚರಿಸುವುದಿಲ್ಲ). ನೂಲನ್ನು ತೆಳುವಾಗಿ ನೂಲುವುದು ಸಾಧ್ಯ.

**ಯಾರ್ನ್‌ಕೌಂಟ್, ಅರ್ಥಾತ್ ದಾರದ ದಪ್ಪದ ಎಣಿಕೆ**

ನೂಲಿನ ದಪ್ಪವನ್ನು ಅಳೆಯಲಿಕ್ಕೆ ಒಂದು ಮಾನದಂಡವನ್ನು ರೂಪಿಸಲಾಗಿದೆ. ಪ್ರಪಂಚದಾದ್ಯಂತ ಒಪ್ಪಿತವಾಗಿರುವ ಮಾನದಂಡ ಇದಾಗಿದೆ. ಯಾರ್ನ್‌ಕೌಂಟ್ ಅರ್ಥಾತ್ ನೂಲಿನ ದಪ್ಪದ ಎಣಿಕೆ ಎಂದು ಈ ಮಾನದಂಡವನ್ನು ಕರೆಯಲಾಗುತ್ತದೆ. ನೂಲಿನ ಉದ್ದವನ್ನು ಅದರ ತೂಕದಿಂದ ಭಾಗಿಸಿದರೆ ಬರುವುದೇ ಯಾರ್ನ್ಕೌಂಟ್. ಹಾಗಾಗಿ ನೂಲು ತೆಳುವಾದಷ್ಟೂ ನೂಲಿನ ಕೌಂಟ್ ಹೆಚ್ಚಾಗುತ್ತದೆ. ತುಂಬ ತೆಳುವಾದ ನೂಲು ತುಂಬ ಹೆಚ್ಚು ಕೌಂಟ್ ಇರುತ್ತದೆ. ನೂಲು ಎರಡು ಕೌಂಟಿನಿಂದ ಹಿಡಿದು (ಅತಿದಪ್ಪನಾದದ್ದು) ನೂರಾ ಇಪ್ಪತ್ತು ಕೌಂಟಿನವರೆಗೂ, ಕೆಲವೊಮ್ಮೆ ಅದಕ್ಕೂ ನವಿರಾಗಿ ಸಹ ಲಭ್ಯವಿರುತ್ತದೆ.

ಉದಾಹರಣೆಗೆ ತುಂಬ ನವಿರಾದ ಸೀರೆಗಳನ್ನು ನೇಯಲಿಕ್ಕೆ ನೂರು ಕೌಂಟಿನ ನೂಲು ಅಥವಾ ಕೆಲವೊಮ್ಮೆ ನೂರಾ ಇಪ್ಪತ್ತು, ನೂರಾ ನಲವತ್ತು, ನೂರಾ ಎಂಬತ್ತು+ ಕೌಂಟಿನ ನೂಲನ್ನು ಬಳಸಲಾಗುತ್ತದೆ. ಅದೇ ದಪ್ಪನಾದ ದಡಿ ನೇಯಲಿಕ್ಕೆ ಕಡಿಮೆ ಕೌಂಟಿನ ನೂಲನ್ನು ಬಳಸಲಾಗುತ್ತದೆ.

**ಹ್ಯಾಂಕ್ ಎಂಬ ಮಾನದಂಡ**

ನೂಲನ್ನು ಶೇಖರಿಸಿಡುವಾಗ ಸುತ್ತಿ ಲಡಿಗಳನ್ನಾಗಿ ಮಾಡಿಡಲಾಗುತ್ತದೆ. ತಾನೆ? ಲಡಿಗಳಲ್ಲಿ ಶೇಖರಿಸದೆ ಹೋದರೆ ನೂಲು ಸಿಕ್ಕುಸಿಕ್ಕಾಗಿ ಗೋಜಲಾಗಿ ಹೋಗುತ್ತದೆ. ಇಂತಹ ಪ್ರತಿಯೊಂದು ಲಡಿಯಲ್ಲಿ ಅದು ಎಷ್ಟು ಉದ್ದದ ನೂಲು ಇರಬೇಕು ಎನ್ನುವುದಕ್ಕೂ ಸಹ ಮಾನದಂಡವೊಂದನ್ನು ರೂಪಿಸಲಾಗಿದೆ, ಅದನ್ನು 'ಹ್ಯಾಂಕ್' ಎಂದು ಕರೆಯುತ್ತಾರೆ. ಒಂದು ಹ್ಯಾಂಕ್ ಲಡಿಯಲ್ಲಿ ೮೪೦ ಗಜ ನೂಲಿರುತ್ತದೆ.

ಹ್ಯಾಂಕ್ ಲಡಿಗಳನ್ನು ಚಿತ್ರದಲ್ಲಿ ಕಾಣಿಸಿರುವಂತೆ ಬಳೆಗಳ ಮಾದರಿಯಲ್ಲಿ ಸುತ್ತಲಾಗಿರುತ್ತದೆ. ಕೈಮಗ್ಗದ ನೇಕಾರಿಕೆಯಲ್ಲಿ ಬಳೆಯ ಮಾದರಿಯಲ್ಲಿ ಸುತ್ತಿದ ನೂಲನ್ನೇ ಬಳಕೆಮಾಡಲಾಗುತ್ತದೆ. ಬಳೆಯ ಮಾದರಿಯಲ್ಲಿ ಸುತ್ತಿದ ನೂಲನ್ನು ಚರಕಕ್ಕೆ ಹಾಕಿಕೊಂಡು ಬಾಬನ್ನು (Bobbin)ಗಳಾಗಿ ಅಥವಾ ಬರೀ (Plin)ಗಳಾಗಿ ಪರಿವರ್ತಿಸಲಿಕ್ಕೆ ಸುಲಭ. ಹಾಗಾಗಿ ಕೈಮಗ್ಗದಲ್ಲಿ ಬಳಕೆಯಾಗುವ ನೂಲನ್ನು ಹ್ಯಾಂಕ್ಯಾರ್ನ್ ಎಂದೇ ಕರೆಯಲಾಗುತ್ತದೆ. ಮಿಲ್ಲುಗಳಲ್ಲಿ ಬಳಕೆಯಾಗುವ ನೂಲು ಕೋನುಗಾಗಿ, ರಟ್ಟಿನ ಕೋನುಗಳ ಸುತ್ತ ಸುತ್ತಲಾಗುತ್ತದೆ. ಕೋನುಗಳೆಂದರೆ ಗೋಪುರಾಕಾರದಲ್ಲಿರುವ ರಟ್ಟಿನ ಸುರುಳಿಗಳು ಹಾಗೂ ಅದರ ಸುತ್ತ ಸುತ್ತಿದ ನೂಲಿನ ಉಂಡೆ.

**ನೂಲುವುದು**

ರಾಟೆಯಿಂದ ನೂಲು ತೆಗೆಯುವ ಕೆಲಸವು ಕೌಶಲ್ಯವನ್ನು ಬೇಡುತ್ತದೆ. ಈ ಕೆಲಸವನ್ನು ಎರಡು ರೀತಿಯಲ್ಲಿ ಮಾಡಲಾಗುತ್ತದೆ. ಹಳೆಯ ವಿಧಾನದಲ್ಲಿ ರಾಟೆ ಅಥವಾ ತಕಲಿಗೆ ಹತ್ತಿಯನ್ನು ನೇರವಾಗಿ ಒಡ್ಡಿ ನೂಲು ತೆಗೆಯಲಾಗುತ್ತದೆ. ಎರಡನೇಯ ವಿಧಾನದಲ್ಲಿ ಹತ್ತಿಯನ್ನು 'ಸ್ಲೀವರ್'ಗಳನ್ನಾಗಿ ಮಾಡಿಕೊಳ್ಳಲಾಗುತ್ತದೆ. ಸ್ಲೀವರ್‌ಗಳೆಂದರೆ ದಪ್ಪನಾದ ಹಾಗೂ ಮೃದುದಾರರಂತೆ ಸಿದ್ಧಪಡಿಸಿಕೊಂಡ ಹಿಂಜಿದ ಹತ್ತಿಯ ಲಡಿಗಳಾಗಿದೆ. ಸ್ಲೀವರ್‌ಗಳನ್ನು ಸ್ವಯಂಚಾಲಿತ ಯಂತ್ರದ ಸಹಾಯದಿಂದ ಸಿದ್ಧಮಾಡಲಾಗುತ್ತದೆ. ನಂತರದಲ್ಲಿ ಈ ಸ್ಲೀವರ್‌ಗಳನ್ನು 'ಅಂಬರಚರಕ' ಎಂಬ ಹೆಸರಿನ, ಸುಧಾರಿತ ರಾಟೆಗೆ ಒಡ್ಡಿ ನೂಲು ತೆಗೆಯಲಾಗುತ್ತದೆ. ಅಂಬರಚರಕವು ಎಂಟರಿಂದ ಹತ್ತು ಸ್ಲೀವರ್‌ಗಳನ್ನು ಏಕಕಾಲಕ್ಕೆ ಬಳಸಿಕೊಂಡು ಎಂಟರಿಂದ ಹತ್ತು ದಾರಗಳನ್ನು ಏಕಕಾಲಕ್ಕೆ ಹೊರತೆಗೆಯಬಲ್ಲದಾಗಿದೆ.

ಕೈರಾಟೆಯಿಂದ ನೂಲು ತೆಗೆಯುವಾಗ ಹತ್ತಿಯ ಎಳೆಗಳ ಮೇಲೆ ಕಡಿಮೆ ಒತ್ತಡ ಬೀಳುತ್ತದೆ. ಯಂತ್ರಗಳಲ್ಲಿ ಹೆಚ್ಚಿನ ಒತ್ತಡ ಬೀಳುತ್ತದೆ. ಹಾಗಾಗಿ ರಾಟೆಯಿಂದ ನೂಲು ತೆಗೆದಾಗ ಎಳೆಗಳ ಶಕ್ತಿ ಕುಂದದೆ ಉಳಿಯುತ್ತದೆ. ಆದರೆ ರಾಟೆಯಿಂದ ನೂಲು ತೆಗೆಯುವ ಕೆಲಸವು ಹೆಚ್ಚು ಶ್ರಮವನ್ನು ಬೇಡುತ್ತದಾದ್ದರಿಂದ ರಾಟೆ ನೂಲು, ಮಿಲ್ಲಿನ ನೂಲಿನ ಹೋಲಿಕೆಯಲ್ಲಿ ಕೊಂಚ ದುಬಾರಿ.

ಆಂಧ್ರಪ್ರದೇಶದ ಉತ್ತರ ಭಾಗದ ಶ್ರೀಕಾಕುಳಂ ಜಿಲ್ಲೆ ಮಾತ್ರ ಹತ್ತಿಯಿಂದ ನೇರವಾಗಿ ನೂಲು ತೆಗೆಯುವ ಪ್ರಕ್ರಿಯೆಯನ್ನು ಇವತ್ತಿಗೂ ಉಳಿಸಿಕೊಂಡು ಬಂದಿದೆ ಮಾತ್ರವಲ್ಲ; ಈ ಪ್ರಕ್ರಿಯೆಯಿಂದಲೇ ಅಲ್ಲಿನ ನೂಲುವವರು ನೂರು ಕೌಂಟಿನಷ್ಟು ನವಿರಾದ ನೂಲನ್ನು ತೆಗೆಯಬಲ್ಲವಾಗಿದ್ದಾರೆ.

**ನೂಲುವ ಮಿಲ್ಲುಗಳು**

ಪಶ್ಚಿಮ ದೇಶಗಳಲ್ಲಿ ನೂಲುವ ಮಿಲ್ಲುಗಳು (Spinning Mill), ಕೈಗಾರಿಕಾ ಕ್ರಾಂತಿಯ ಜೊತೆಜೊತೆಗೆ, ಹದಿನೇಳನೆಯ ಶತಮಾನದಲ್ಲಿ ಹುಟ್ಟಿಕೊಂಡವು. ನಮ್ಮ ದೇಶಕ್ಕೆ ಅವು ತಡವಾಗಿ ಆಗಮಿಸಿದವು. ಬ್ರಿಟೀಷರು, ತಮ್ಮ ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ, ಭಾರತದಲ್ಲಿ ನೂಲುವ ಮಿಲ್ಲುಗಳನ್ನು ಆರಂಭಿಸಿದರು. ಮೊದಲಿಗೆ ಅವುಗಳನ್ನು ಮುಂಬೈ ನಗರದಲ್ಲಿ ಆರಂಭಿಸಲಾಯಿತು. ನಂತರದಲ್ಲಿ ತಮಿಳುನಾಡು ಹಾಗೂ ಇತರೆಡೆಗಳಲ್ಲಿಯೂ ಅವು ಆರಂಭವಾದವು. ಇಂದಿಗೂ ಮಿಲ್ಲಿನಲ್ಲಿ ನೂತ ದಾರವು ಕೈಮಗ್ಗ ಬಟ್ಟೆಯ ಉತ್ಪಾದನೆಯಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಬಳಕೆಯಾಗುತ್ತಿದೆ. ಇತ್ತ ಖಾದಿನೂಲಿನ ಉತ್ಪಾದನೆಯು ಹಿನ್ನಡೆ ಅನುಭವಿಸುತ್ತ ನಡೆದಿದೆ.

'ದಿ ಬಾಂಬೆ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್' ಎಂಬುದು ಭಾರತದ ಮೊತ್ತಮೊದಲ ನೂಲುವ ಮತ್ತು ಇದು ಮುಂಬೈ ನಗರದ 'ತಾರ್‌ದಿಯೋ' ಎಂಬ ಸ್ಥಳದಲ್ಲಿ ೧೮೫೪ರಲ್ಲಿ ಆರಂಭವಾಯಿತು ಹಾಗೂ ದೊಡ್ಡ ಪ್ರಮಾಣದಲ್ಲಿ ಭಾರತದ ಕೈಮಗ್ಗಗಳಿಗೆ ನೂಲನ್ನು ಒದಗಿಸತೊಡಗಿತು. ವಿದೇಶಿ ಬಟ್ಟೆಯ ಮಾರಾಟ ಹಾಗೂ ದೇಸಿ ಮಿಲ್ಲುಗಳ ಸ್ಥಾಪನೆಯ ಮೂಲಕವಾಗಿ ಬ್ರಿಟೀಷ್ ವಸಾಹತುಶಾಹಿ ಆಳ್ವಿಕೆಯು ಕೈಮಗ್ಗ ಉದ್ಯಮವನ್ನು ಹಿಮ್ಮೆಟ್ಟಿಸಿತು. ಆ ಮೊದಲು ಕೈಮಗ್ಗ ಅತ್ಯಂತ ಸುಭದ್ರವಾಗಿದ್ದ ಉದ್ದಿಮೆಯಾಗಿತ್ತು ಹಾಗೂ ವಿದೇಶಗಳಿಗೆ ಬಟ್ಟೆಯನ್ನು ರಫ್ತು ಮಾಡುತ್ತಿತ್ತು.

ಹೀಗೆ ವಿಕೇಂದ್ರೀಕೃತವಾಗಿದ್ದ ಹಾಗೂ ಸ್ಥಿರವಾಗಿದ್ದ ಗ್ರಾಮೀಣ ಉದ್ದಿಮೆಯೊಂದು ವಸಾಹತುಶಾಹಿಯ ದಬ್ಬಾಳಿಕೆಯ ಕಾರಣದಿಂದಾಗಿ ಹೆಚ್ಚು ಕಡಿಮೆ ನಿರ್ನಾಮವಾಯಿತು.

**ಬಣ್ಣಗಾರಿಕೆ**

ಕೈಮಗ್ಗ ಬಟ್ಟೆಗಳಿಗೆ ಎರಡು ರೀತಿಯಲ್ಲಿ ಬಣ್ಣವನ್ನು ಹಾಕಲಾಗುತ್ತದೆ. ನೂಲಿಗೇ ಹಾಕಿ ನಂತರ ಬಟ್ಟೆ ನೇಯುವುದು ಒಂದು ವಿಧಾನವಾದರೆ, ನೇಯ್ಗೆಯಾದ ಬಟ್ಟೆ ಅಥವಾ ಸಿದ್ಧಉಡುಪಿಗೆ ಬಣ್ಣ ಹಾಕುವುದು ಎರಡನೇಯ ವಿಧಾನವಾಗಿದೆ. ನೂಲಿಗೆ ಬಣ್ಣ ಹಾಕುವ ವಿಧಾನವು ದಕ್ಷಿಣ ಭಾರತದಲ್ಲಿ ಹೆಚ್ಚು ಪ್ರಚಲಿತವಿದೆ.

ಉತ್ತರಭಾರತದ ಕುಶಲಕರ್ಮಿಗಳು ಬಟ್ಟೆಗೆ ಅಥವಾ ಸಿದ್ಧಉಡುಪಿಗೆ ಬಣ್ಣ ಹಾಕುವುದರಲ್ಲಿ ನಿಷ್ಣಾತರು, ಮಾತ್ರವಲ್ಲ, ಮುದ್ರಣದ ತಂತ್ರದಲ್ಲೂ ಅವರು ಸಿದ್ಧಹಸ್ತರು. ಉದಾಹರಣೆಗೆ ಗುಜರಾತ್ ಹಾಗೂ ರಾಜಸ್ಥಾನಗಳ ಕುಶಲಕರ್ಮಿಗಳು ಬಟ್ಟೆಯ ನೈಸರ್ಗಿಕ ಬಣ್ಣದ ಮುದ್ರಣದ ತಂತ್ರದಲ್ಲಿ ಪಳಗಿದವರಾಗಿದ್ದಾರೆ. ಮೊದಲು ಬಟ್ಟೆಯ ಮೇಲೆ ಮರದಚ್ಚಿನಿಂದ ಮುದ್ರಣ ಮಾಡಿಕೊಂಡು ನಂತರದಲ್ಲಿ ಬಟ್ಟೆಯನ್ನು ಬಣ್ಣದಲ್ಲಿ ಅದ್ದುತ್ತಾರೆ. ಅವರು ಹೀಗೆ ಮಾಡುವ ಮೂಲಕ ಚಿತ್ತಾರಗಳಿರುವ ಬಣ್ಣದ ಬಟ್ಟೆಗಳನ್ನು ಅವರು ತಯಾರಿಸುತ್ತಾರೆ. ನೈಸರ್ಗಿಕ ಬಣ್ಣದ ಮುದ್ರಣದಲ್ಲಿ ಹಲವು ರೀತಿಯ ತಂತ್ರಗಳು ಲಭ್ಯವಿದೆ.

**ಉಜ್ಜಿಗೆ ಹಾಕುವ (Scouring) ತಂತ್ರ :**

ನೂಲು (ಅಥವಾ ಬಟ್ಟೆಯನ್ನು) ಬಣ್ಣದಲ್ಲಿ ಅದ್ದುವ ಮೊದಲು ಅದನ್ನು ಉಜ್ಜಿಗೆ ಹಾಕಲಾಗುತ್ತದೆ. ಈ ಪ್ರಕ್ರಿಯೆಯನ್ನು ಇಂಗ್ಲೀಷಿನಲ್ಲಿ ಸ್ಕೌರಿಂಗ್ (Scouring) ಎಂದು ಕರೆಯಲಾಗುತ್ತದೆ. ಈ ತಂತ್ರದಲ್ಲಿ ನೂಲನ್ನು ಕುದಿಯುದ ನೀರಿನಲ್ಲಿ ಬೇಯಿಸಲಾಗುತ್ತದೆ. ಆ ಮೂಲಕ ನೂಲಿನಲ್ಲಿರುವ ಧೂಳು ಹಾಗೂ ಜಿಡ್ಡಿನ ಅಂಶವನ್ನು ಬೇರ್ಪಡಿಸಲಾಗುತ್ತದೆ. ಬೆಂದ ನೂಲು ಅರಳಿಕೊಂಡು ಮೃದುವಾಗುತ್ತದೆ. ಹೀಗೆ ಮೃದುವಾದ ನೂಲು ಬಣ್ಣವನ್ನು ಚೆನ್ನಾಗಿ ಹೀರಿಕೊಳ್ಳಬಲ್ಲದಾಗಿದೆ.

ಬಣ್ಣಗಾರಿಕೆಯ ಕೆಲಸವನ್ನು ಕೆಲವು ಕಡೆಗಳಲ್ಲಿ ನೇಕಾರರೇ ಮಾಡಿಕೊಳ್ಳುತ್ತಾರಾದರೆ, ಕೆಲವು ಕಡೆಗಳಲ್ಲಿ ವೃತ್ತಿಪರ ಬಣ್ಣಕಾರರು ಮಾಡಿಕೊಡುತ್ತಾರೆ. ಹಿಂದೆಲ್ಲ ಬಣ್ಣಗಾರಿಕೆಯ ಕೆಲಸವೂ ಸಹ ನೇಯ್ಗೆಯ ಕೆಲಸದಂತೆ ಚದುರಿದಂತೆ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿತ್ತು. ಅದೊಂದು ಕೇಂದ್ರೀಕೃತ ವ್ಯವಸ್ಥೆಯಾಗಿರಲಿಲ್ಲ. ಹಾಗಾಗಿಯೇ ಹಿಂದೆಲ್ಲ ಸೀರೆಗಳ ಒಡಲಿನಲ್ಲಿ ಹೆಚ್ಚಿನ ಬಣ್ಣವಿರುತ್ತಿರಲಿಲ್ಲ. ಬಣ್ಣವೇನಿದ್ದರೂ ಸೀರೆಯ ಅಂಚು ಹಾಗೂ ಸೆರಗಿನಲ್ಲಿ ಮಾತ್ರವೇ ಕೇಂದ್ರಿತವಾಗಿರುತ್ತಿತ್ತು.

**ಹಾಸು (ಅರ್ಥಾತ್ ವಾರ್ಪ್) ಸಿದ್ಧಪಡಿಸುವುದು:**

ಕನ್ನಡದಲ್ಲಿ ಹಾಸುಹೊಕ್ಕು ಎಂಬ ಸುಂದರವಾದ ಪದವೊಂದಿದೆ. ನೇಕಾರಿಕೆಯ ಮೂಲದಿಂದ ಬಂದ ಪದವಿದು. ನೇಯ್ಗೆಯಷ್ಟೇ ಚೆನ್ನಾಗಿ ಬೆರೆತ ಸಂಬಂಧಗಳನ್ನು ಹಾಸು ಹೊಕ್ಕಾದ ಸಂಬಂಧಗಳು ಎಂದು ಕರೆಯಲಾಗುತ್ತದೆ. ಹಾಸೆಂದರೆ ನೇಯ್ಗೆಯ ಉದ್ದನೆಯ ದಾರಗಳ ಸಮೂಹ. ಹೊಕ್ಕು ಎಂದರೆ,

ಅಡ್ಡಲಾಗಿ ಹೊಕ್ಕುವ ಅಥವಾ ಹೋಗುವ ದಾರ, ಯಾವ ಬಟ್ಟೆ ಅಥವಾ ಸೀರೆಯಲ್ಲಿ ಉದ್ದದಲ್ಲಿರುವ ದಾರಗಳೇ ಹಾಸಿನ ದಾರಗಳು. ಮೊದಲು ಹಾಸನ್ನು ಸಿದ್ಧಪಡಿಸಿಕೊಳ್ಳಲಾಗುತ್ತದೆ. ದಾರ ಅಡ್ಡ ಹಾಕುವುದು ನೇಯ್ಗೆಯ ಅಂತಿಮ ಘಟ್ಟದಲ್ಲಿ, ಅರ್ಥಾತ್ ನೇಯ್ಗೆ ನಡೆದಿರುವಾಗ.

ಹಾಸು ಸಿದ್ಧಪಡಿಸಿಕೊಳ್ಳುವ ಮೊದಲು ದಾರವನ್ನು ಬಾಬಿನ್ನುಗಳ ಸುತ್ತ ಸುತ್ತಿ ಸಿದ್ಧಮಾಡಿಟ್ಟುಕೊಳ್ಳಲಾಗುತ್ತದೆ. ಬಳೆಯ ಮಾದರಿಯಲ್ಲಿ (ಹ್ಯಾಂಕುಗಳ ರೂಪದಲ್ಲಿ) ಲಭ್ಯವಿರುವ ದಾರವನ್ನು ಚರಕಕ್ಕೆ ಏರಿಸಿ ಸುತ್ತಿಕೊಳ್ಳಲಾಗುತ್ತದೆ. ಹಾಸು ಸಿದ್ಧಪಡಿಸಿಕೊಳ್ಳಲಿಕ್ಕೆ ಬೇಕಿರುವ ಉದ್ದ ದಾರಗಳನ್ನು ಬಾಬಿನ್ನುಗಳು ಒದಗಿಸುತ್ತವೆ.

ಹಾಸಿನಲ್ಲಿ ಸಾವಿರಾರು ದಾರಗಳು, ಒಂದರ ಪಕ್ಕ ಒಂದರಂತೆ ಸಾಕಷ್ಟು ಒತ್ತಾಗಿ ಹಾಸಿಕೊಂಡಿರುತ್ತದೆ. ಇವುಗಳು ಒಂದೇ ಅಂತರದಲ್ಲಿ ಹಾಸಿಕೊಳ್ಳುವಂತೆ ಮಾಡಲಿಕ್ಕೆ ರೀಡ್ಸ್ (Reeds) ಎಂಬ ಒಂದು ಸರಳ ಉಪಕರಣವನ್ನು ಬಳಸಲಾಗುತ್ತದೆ. ಒಂದು ಹಾಸಿನಲ್ಲಿ ಸಾಮಾನ್ಯವಾಗಿ ಎಷ್ಟು ದಾರ ಕೂಡಿಸಲಾಗಿರುತ್ತದೆ ಎಂಬ ಕಲ್ಪನೆ ಬರಲಿಕ್ಕೆ ಈ ಉದಾಹರಣೆಯನ್ನು ಗಮನಿಸಿ ಸಾಮಾನ್ಯ ಬಟ್ಟೆಯೊಂದನ್ನು ನೇಯಬೇಕೆಂದರೆ, ಸುಮಾರು ಮೂರು ಸಾವಿರದ ನಾಲ್ಕು ನೂರು ದಾರಗಳನ್ನು ಒಂದರ ಪಕ್ಕ ಒಂದರಂತೆ ಹಾಸಿನಲ್ಲಿ ಜೋಡಿಸಿಕೊಳ್ಳಬೇಕಾಗುತ್ತದೆ. ಮಗ್ಗ ಏರಲಿರುವ ಸಾಮಾನ್ಯ ಗಾತ್ರದ ಹಾಡೊಂದರಲ್ಲಿ (೪೬" ಪನ್ನ ಹಾಗೂ ನಲವತ್ತು ಗಜಗಳ ಉದ್ದ) ಒಟ್ಟು ೧,೯೬,೫೫೦ ಮೀಟರು ದಾರವಿರುತ್ತದಂತೆ. ಆದರಿದು  ಸರಾಸರಿ ಮಾತ್ರ ನೂಲಿನ ದಪ್ಪ, ಅರ್ಥಾತ್ ನೂಲಿನ ಕೌಂಟ್, ಬಟ್ಟೆಯ ಪನ್ನ ಬಟ್ಟೆಯ ಸಾಂದ್ರತೆ, ಹಾಸಿನ ಉದ್ದ ಹೀಗೆ ಹಲವು ಸಂಗತಿಗಳು ಹಾಸಿನ ನೂಲಿನ ಒಟ್ಟು ಪ್ರಮಾಣವನ್ನು ನಿರ್ಧರಿಸುತ್ತವೆ.

**ಸೈಜಿಂಗ್: ಅರ್ಥಾತ್ ಗಂಜಿ ಬಳಿಯುವ ಪ್ರಕ್ರಿಯೆ**

ಸೈಜಿಂಗ್ ಎಂದರೆ, ಹಾಸಿನ ನೂಲಿಗೆ ಗಂಜಿ ಬಳಿಯುವ ಪ್ರಕ್ರಿಯೆ ಎನ್ನಬಹುದಾಗಿದೆ. ನವಿರಾದ ಬಟ್ಟೆ ನೇಯಬೇಕಾದಾಗ ಹಾಸಿನ ತೆಳುವಾದ ನೂಲು ಮತ್ತೆ ಮತ್ತೆ ತುಂಡಾಗುವ ಸಾಧ್ಯತೆಯಿರುತ್ತದೆ. ಹಾಸಿನ ನೂಲು ಒಂದೇ ಸಮನಾಗಿರುವಂತೆ ಮಾಡುವುದು ಹಾಗೂ ನೂಲಿಗೆ ದೃಢತೆ ತಂದುಕೊಡುವುದು ನೂಲಿಗೆ ಗಂಜಿ ಬಳಿಯುವುದರ ಹಿಂದಿನ ಉದ್ದೇಶವಾಗಿದೆ. ಗಂಜಿ ಬಳಿಯುವ ಕೆಲಸವು ತುಂಬ ಕೌಶಲ್ಯವನ್ನು ಬೇಡುತ್ತದೆ.

ಒಂದೊಮ್ಮೆ ನೀವು ಹತ್ತಿಯ ನೂಲನ್ನು ಸೂಕ್ಷ್ಮದರ್ಶಕದ ಮೂಲಕ ನೋಡಿದ್ದೇ ಆದರೆ, ಗಿಡರೆಂಬೆಗಳಂತೆ ನವಿರಾದ ಬಳೆಗಳು ನೂಲಿನಿಂದಾಚೆ ಅಲ್ಲಲ್ಲಿ ಚಾಚಿಕೊಂಡಿರುವುದು ನಿಮ್ಮ ಗಮನಕ್ಕೆ ಬರುತ್ತದೆ. ಹೀಗೆ ಚಾಚಿಕೊಂಡ ಹತ್ತಿಯ ಎಳೆಗಳು 'ರೀಡ್'ಗಳ ಸಂದುಗಳಿಗೆ ಸಿಕ್ಕಿಕೊಂಡು ನೂಲು ತುಂಡಾಗುವ ಸಾಧ್ಯತೆಯಿರುತ್ತದೆ. ಹೊರ ಚಾಚಿಕೊಂಡಿರುವ ಈ ಎಳೆಗಳನ್ನು ಜಾಣೆಯಿಂದ ಬಾಚಿ ಗಂಜಿ ಬಳಿಯುವುದರಿಂದಾಗಿ ಬಾಚಿದ ಎಳೆಗಳು ನೂಲಿನ ಬದಿಗೆ ಅಂಟಿಕೊಳ್ಳುತ್ತವೆ. ಹಾಗೂ ನೂಲು ಏಕಪ್ರಕಾರವಾಗುತ್ತದೆ. ಜೊತೆಗೆ ಗಂಜಿಯಲ್ಲಿರುವ ಅಂಟಿನ ಗುಣದಿಂದಾಗಿ ನೂಲು ಹೆಚ್ಚು ಸದೃಢವಾಗುತ್ತದೆ.

ನೂಲಿಗೆ ಗಂಜಿ ಬಳಿಯುವಾಗ ಹಾಸಿನಷ್ಟೇ ಅಗಲವಿರುವ ದೊಡ್ಡ ಕುಂಚಗಳನ್ನು ಬಳಸಲಾಗುತ್ತದೆ. ಇವು ಗಂಜಿ ಬಳಿಯುತ್ತಲೇ ನೂಲನ್ನು ಹಗುರವಾಗಿ ಬಾಚುತ್ತಿರುತ್ತವೆ. ಕೂದಲು ಸಿಕ್ಕಾಗದಂತೆ ಬಾಚಣಿಕೆಯಿಂದ ತಲೆ ಬಾಚಿಕೊಳ್ಳುವುದಿಲ್ಲವೇ, ಅದೇ ತಂತ್ರವು ಸೈಜಿಂಗ್ ಪ್ರಕ್ರಿಯೆಯಲ್ಲೂ ಬಳಕೆಯಾಗುತ್ತದೆ.

ಸೈಜಿಂಗಿನಲ್ಲಿ ಬಳಕೆಯಾಗುವ ಗಂಜಿಯು, ಸಾಮಾನ್ಯವಾಗಿ, ಸ್ಥಳೀಯವಾಗಿ ಲಭ್ಯವಿರುವ ಪಿಷ್ಟ ಪದಾರ್ಥದ ಹಿಟ್ಟಾಗಿರುತ್ತದೆ (Starch) ಅಥವಾ ಊಟದ ಗಂಜಿಯೂ ಆಗಿರಬಲ್ಲುದಾಗಿದೆ. ಗಂಜಿಗೆ ಕೊಂಚ ಎಣ್ಣೆ ಬೆರಸಿಕೊಂಡು (ತೆಂಗಿನೆಣ್ಣೆ ಅಥವಾ ಕಡಲೆಕಾಯಿ ಎಣ್ಣೆ) ನೂಲಿಗೆ ಬೆಳೆಯಲಾಗುತ್ತದೆ. ಎಣ್ಣೆಯ ದೆಸೆಯಿಂದಾಗಿ ನೂಲಿಗೆ ಹೊಳಪು ಪ್ರಾಪ್ತವಾಗುತ್ತದೆ.

ಹಾಸುಗಳು ನೂರಿನ್ನೂರು ಅಡಿಗಳಷ್ಟು ಉದ್ದವಿರುತ್ತವೆ. ಸೈಜಿಂಗಿನ ಪ್ರಕ್ರಿಯೆ ನಡೆಯುವಾಗ ಇಡೀ ಹಾಸನ್ನು ಉದ್ದಕ್ಕೆ ಜಗ್ಗಿ ಹಾಸಿನ ಎರಡೂ ಬದಿಗಳನ್ನು ಗೂಟಗಳಿಗೆ ಕಟ್ಟಿಕೊಳ್ಳಲಾಗುತ್ತದೆ. ಮಾತ್ರವಲ್ಲ, ಹಾಸಿನ ಅಗಲವನ್ನು ಅಲ್ಲಲ್ಲಿ ಕೋಲುಗಳ ಮೂಲಕ ಬಂಧಿಸಿ ಕಟ್ಟಿಕೊಂಡು ಕೆಲಸ ಮಾಡಲಾಗುತ್ತದೆ. ಹಾಸನ್ನು ನೆಲದಿಂದ ಮೂರು ಮೂರೂವರೆ ಅಡಿಗಳ ಎತ್ತರದಲ್ಲಿ, ಬಯಲಿನಲ್ಲಿ ಕಟ್ಟಿಕೊಳ್ಳಲಾಗುತ್ತದೆ. ಸೈಜಿಂಗ್ ಮಾಡುವವರು ಹಾಸಿನ ಎರಡೂ ಬದಿಯಲ್ಲಿ ನಿಂತು, ನಡೆಯುತ್ತ ನಡೆಯುತ್ತಲೇ ಗಂಜಿ ಬಳಿಯುವುದು ಸಾಧ್ಯವಾಗುವಂತೆ ಈ ರೀತಿ ಮಾಡಲಾಗುತ್ತದೆ.

ಸೈಜಿಂಗಿನ ಕೆಲಸವನ್ನು ಸೂರಿನ ಅಡಿಯಲ್ಲಿ, ಅರ್ಥಾತ್ ಮನೆಗಳ ಒಳಗೆ ಮಾಡುವುದು ಸಾಧ್ಯವಿಲ್ಲ. ಹಾಸನ್ನು ಬೀದಿಗೆ ತಂದು ಬಯಲಿನಲ್ಲಿ ಕಟ್ಟಿಕೊಂಡು ಕೆಲಸ ಮಾಡುವುದೇ ಹೆಚ್ಚು ಸೂಕ್ತ. ಈ ಕಾರಣದಿಂದಾಗಿ ಸೈಜಿಂಗಿನ ಪ್ರಕ್ರಿಯೆಗೆ 'ಬೀದಿ ಸೈಜಿಂಗ್' ಅಥವಾ 'ಸ್ಟ್ರೀಟ್ ಸೈಜಿಂಗ್' ಎಂದೇ ಹೆಸರು ಬಿದ್ದಿದೆ.

ಸೈಜಿಂಗಿಗೆ ಬಳಸುವ ಕುಂಚಗಳನ್ನು ಸ್ಥಳೀಯ ಪದಾರ್ಥಗಳನ್ನು ಬಳಸಿ, ಸ್ಥಳೀಯವಾಗಿಯೇ ತಯಾರಿಸಿಕೊಳ್ಳಲಾಗುತ್ತದೆ. ಗ್ರಾಮ ಕೈಗಾರಿಕೆಯಲ್ಲಿ ಬಳಕೆಯಾಗುವ ಹೆಚ್ಚೂ ಕಡಿಮೆ ಎಲ್ಲ ವಸ್ತುಗಳೂ ಸ್ಥಳೀಯವಾದದ್ದೇ ಆಗಿರುತ್ತವೆ. ಹಾಗೂ ಹೆಚ್ಚಾಗಿ ನೈಸರ್ಗಿಕ ಮೂಲದ ವಸ್ತುವಾಗಿರುತ್ತದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ.

ಸೈಜಿಂಗಿನ ಪ್ರಕ್ರಿಯೆಯು ತುಂಬ ಕೌಶಲ್ಯ ಹಾಗೂ ಅನುಭವವನ್ನು ಬಯಸುವ ಕೆಲಸವಾಗಿರುತ್ತದೆ. ಇದನ್ನು ಕೆಲವೊಮ್ಮೆ ನೇಕಾರರೇ, ತಮ್ಮ ಕುಟುಂಬದ ಸದಸ್ಯರ ಸಹಾಯ ಪಡೆದು ಮಾಡಿಕೊಳ್ಳುತ್ತಾರಾದರೂ, ಪರಿಣಿತ ಸೈಜರ್‌ಗಳು ಸೈಜಿಂಗ್ ಕೆಲಸ ಮಾಡಿಕೊಡುವುದು ಸಾಮಾನ್ಯ ಸಂಗತಿಯಾಗಿದೆ.

**ದುಡ್ಡು ಕೊಟ್ಟು ಬಟ್ಟೆ ಕೊಂಡಮಾತ್ರಕ್ಕೆ**

**ಬಟ್ಟೆಯ ಘನತೆ ಅರಿವಾಗಲು ಸಾಧ್ಯವೇ?**

**ಅದರ ತಯಾರಿಕೆಯ ಹಿಂದಿರುವ ದುಡಿಮೆ, ಕೌಶಲ್ಯ, ತಂತ್ರಜ್ಞಾನ**

**ಇವುಗಳನ್ನು ಕೇವಲ ಹಣದಿಂದ ತಿಳಿಯಲು ಸಾಧ್ಯವೇ?**

**ಬಟ್ಟೆಯ ವಿನ್ಯಾಸದ ಸೌಂದರ್ಯವು ಅದರ ಉತ್ಪಾದನಾ**

**ವಿಧಾನದಿಂದ ಬಂದದ್ದು, ಆರ್ಥಾತ್ ಶ್ರಮ ಪರಂಪರೆಯಿಂದ ಬಂದದ್ದು.**

**ಕಣಿಕೆ ಸುತ್ತುವ ಕೆಲಸ.**

ಪಿರ್ನ್ ಅಥವಾ ಕಣಿಕೆ ಎಂದರೆ ಒಂದು ರೀತಿಯ ಪುಟ್ಟ ಬಾಬಿನ್ನು ಎಂದು ಕರೆಯಬಹುದೇನೋ, ಇವು ಪುಟ್ಟದಾಗಿರುವುದಕ್ಕೆ ಕಾರಣವಿದೆ. ಕಣಿಕೆಯನ್ನು ಮಗ್ಗದ 'ಶಟಲ್'ಗಳ ಒಳಗೆ ಕೂಡಿಸಲಾಗುತ್ತದೆ. ಹಾಗಾಗಿ ಇನ್ನು ಚಿಕ್ಕದಿರ'ಬೇಕಾಗುತ್ತವೆ. ಶಟಲ್‌ಗಳೆಂದರೆ ತುದಿ ಚೂಪಾಗಿರುವ ಹಾಗೂ ಭಾರವಾಗಿರುವ, ಗುಂಡಿನ ಆಕಾರದ ಮರದ ತುಂಡು, ಶಟಲ್‌ಗಳು, ಒಂದು ರೀತಿಯಲ್ಲಿ ಬಂದೂಕಿನ ಗುಂಡುಗಳಿದ್ದಂತೆಯೇ ಸರಿ, ನೇಕಾರ ತನ್ನ ಕೈಯಲ್ಲಿರುವ ಲಗಾಮಿನಂತಹ ಹಗ್ಗವನ್ನು ಎಡಕ್ಕೆ ಬಲಕ್ಕೆ ಜಗ್ಗುತ್ತ ಹೋಗುತ್ತಾನೆ. ಹೀಗೆ ಪ್ರತಿಸಲ ಜಗ್ಗಿದಾಗಲೂ ಶಟಲ್‌ಗಳಿಗೆ ಹೊಡೆತ ಬಿದ್ದು ಅದು ಹಾಸಿನ ನೂಲುಗಳ ಒಳಹಾಯ್ದು ಓಡಿ ಮತ್ತೊಂದು ತುದಿಯನ್ನು ತಲುಪುತ್ತದೆ. ಶಟಲ್‌ಗಳು ಹೀಗೆ ಹಿಂದಕ್ಕೆ ಮುಂದಕ್ಕೆ ಓಡುತ್ತ ಹೋದ ಹಾಗೆ, ಅದರ ಒಳಗಿರುವ ಕಣಿಕೆಯ ನೂಲು ಬಿಚ್ಚಿಕೊಂಡು ನೇಯ್ಗೆಯಾಗುತ್ತ ಹೋಗುತ್ತದೆ.

ಕಣಿಕೆ ಸುತ್ತುವುದೂ ಸಹ ಬಾಬಿನ್ನುಗಳನ್ನು ಸುತ್ತಿದಂತೆಯೇ ಸರಿ, ಹ್ಯಾಂಕಿನ ನೂಲನ್ನು ಚರಕಕ್ಕೆ ಏರಿಸಿಕೊಂಡು ಕಣಿಕೆಗೆ ದಾಟಿಸಲಾಗುತ್ತದೆ. ಕಣಿಕೆಯ ಬಗ್ಗೆ ಹಾಳಾಗಬಾರದು ಎಂಬ ಕಾರಣಕ್ಕಾಗಿ ಕಣಿಕೆ ಸುತ್ತುವವರು ಸಾಮಾನ್ಯವಾಗಿ ತಮ್ಮ ಬೆರಳನ್ನು ದಾರಕ್ಕೆ ಒತ್ತಿ ಹಿಡಿಯುವ ಮೂಲಕ ಬಿಗಿತವನ್ನು ನಿಯಂತ್ರಿಸುತ್ತಾರೆ.

**ನೇಯ್ಗೆಯ ಕೆಲಸ**

ನೇಯ್ಗೆಯಲ್ಲಿ ನೂಲಿನ ಬಣ್ಣವು ಬಟ್ಟೆಯ ಬಣ್ಣವನ್ನು ರೂಪಿಸುತ್ತದೆ. ಅಡ್ಡಹಾಯುವ ನೂಲಿನ ಬಣ್ಣ ಹಾಗೂ ಹಾಸಿನ ಬಣ್ಣ ಒಂದೇ ಆಗಿದ್ದರೆ ಬಟ್ಟೆಯೂ ಅದೇ ಬಣ್ಣದಲ್ಲಿ ಸಿದ್ಧವಾಗುತ್ತದೆ. ಅಡ್ಡಹಾಯುವ ನೂಲಿನ ಬಣ್ಣವು ಹಾಸಿನ ನೂಲಿನ ಬಣ್ಣಕ್ಕಿಂತ ಭಿನ್ನವಾದರೆ ಆಗ ಬಟ್ಟೆ ಮಿಶ್ರಬಣ್ಣದಲ್ಲಿ ರೂಪುಗೊಳ್ಳುತ್ತದೆ. ಅಡ್ಡ ಹಾಯುವ ನೂಲನ್ನು ಆಗಾಗ ನಿಯತವಾಗಿ ಬದಲಿಸುವುದರಿಂದ ಬಟ್ಟೆಯ ಮೇಲೆ ಅಡ್ಡಗೆರೆಗಳನ್ನು ಮೂಡಿಸುವುದು ಸಾಧ್ಯವಿದೆ. ಇದೇ ರೀತಿ ಹಾಸಿನ ದಾರದಲ್ಲಿ ಅಲ್ಲಲ್ಲಿ ಬೇರೆ ಬಣ್ಣದ ನೂಲುಗಳನ್ನು ಸೇರಿಸಿದರೆ ಆಗ ಇವೆರಡೂ ಗೆರೆಗಳು ಪರಸ್ಪರ ಎದುರು ಹಾಯ್ದು ಬಟ್ಟೆಯ ಮೇಲೆ ಚೌಕುಳಿಗಳ ಚಿತ್ತಾರವು ಮೂಡುವುದು ಸಾಧ್ಯವಿದೆ.

ಹಾಸಿನ (Warp) ನೂಲುಗಳ ಮುಖಾಂತರ ಅಡ್ಡನೂಲುಗಳನ್ನು (Well) ಹೊಕ್ಕಿಸುವುದು ಹಾಗೂ ಹೊಕ್ಕಿಸಿದ ನಂತರ **'ಮಗ್ಗದ ತೊಟ್ಟಿಲು'** (ಇದು ಹಿಂದಕ್ಕೆ ಮುಂದಕ್ಕೆ ತೂಗಲ್ಪಡುತ್ತದಾದ್ದರಿಂದ ಇದಕ್ಕೆ ಈ ಹೆಸರು) ಬಡಿದು ಹೊಕ್ಕಿದ ನೂಲನ್ನು ಭದ್ರವಾಗಿ ಒಳಕಳಿಸುವುದು ನೇಯ್ಗೆಯ ಅರ್ಧ ಪ್ರಕ್ರಿಯೆ ಎನ್ನಬಹುದಾಗಿದೆ. ಇನ್ನರ್ಧ ಪ್ರಕ್ರಿಯೆಯಲ್ಲಿ ಅಡ್ಡ ನೂಲು ಹಿಂದೆ ಹಾಯುತ್ತದೆ, ಅದು ಹಾಗೆ

ಹಾಯುವ ಮುಂಚೆ ಹಾಸಿನ ನೂಲುಗಳ ವಿಭಾಗವನ್ನು ತಲೆಕೆಳಗು ಮಾಡಲಾಗುತ್ತದೆ. ಅರ್ಥಾತ್ ಮೇಲೆದ್ದಿರುವ ನೂಲುಗಳನ್ನು ಕೆಳಕ್ಕೆ ಕಳುಹಿಸುವುದು ಹಾಗೂ ಕೆಳಕ್ಕಿರುವ ನೂಲನ್ನು ಮೇಲಕ್ಕೆ ಒತ್ತುವುದು ಮಾಡಲಾಗುತ್ತದೆ. ನಂತರ ಮತ್ತೊಮ್ಮೆ ಮಗ್ಗದ ತೊಟ್ಟಿಲನ್ನು ಬಡಿದು ಹಿಂದಕ್ಕೆ ಹಾಯ್ದ ಅಡ್ಡನೂಲನ್ನು ಮತ್ತೊಮ್ಮೆ ಹಾಸಿನೊಳಗೆ ಬಂಧಿಸಲಾಗುತ್ತದೆ. ಹೀಗೆ ಅಡ್ಡ ನೂಲು ಒಮ್ಮೆ ಎಡಕ್ಕೆ ಒಮ್ಮೆ ಬಲಕ್ಕೆ ಹಾಯಿತೆಂದರೆ ನೇಯ್ಗೆಯ ಒಂದು ವೃತ್ತವು ಪೂರ್ಣವಾಯಿತೆಂದೇ ಅರ್ಥ. ಇಡೀ ಪ್ರಕ್ರಿಯೆ ಪುನರಾವರ್ತನೆಗೊಳ್ಳುತ್ತ, ಬಟ್ಟೆ ಸಿದ್ಧವಾಗುತ್ತ ಹೋಗುತ್ತದೆ.

ಅಡ್ಡ ನೂಲನ್ನು ಎಡಕ್ಕೆ ಬಲಕ್ಕೆ ಹಾಯಿಸುವುದು, ಜೊತೆಜೊತೆಗೆ ಉದ್ದ ನೂಲಿನ ವಿಭಾಗವನ್ನು ಮೇಲಕ್ಕೆ ಕೆಳಕ್ಕೆ ತಳ್ಳುವುದೇ ನೇಯ್ಗೆ. ಅಡ್ಡ ಹಾಗೂ ಉದ್ದದ ನೂಲುಗಳು ಹೀಗೆ ಹಾಸುಹೊಕ್ಕಾಗಿ ಬಂಧಿತವಾದಾಗಲೇ ಬಟ್ಟೆ ಸಿದ್ಧವಾಗುವುದು.

ನೇಕಾರರು ಎರಡು ರೀತಿಯಿಂದ ಈ ಕೆಲಸವನ್ನು ಸಾಧಿಸುತ್ತಾರೆ. ತಮ್ಮ ಕಾಲಿನ ಬಳಿ ಇರುವ ಪೆಡಲ್ ಒತ್ತುವ ಮೂಲಕ ಹಾಸಿನ ನೂಲಿನ ವಿಭಾಗವು ಮೇಲೆ ಕೆಳಗೆ ಆಗುವಂತೆ ಮಾಡುತ್ತಾರೆ. ಕೈಯಲ್ಲಿ ಹಿಡಿದಿರುವ ಹಗ್ಗವನ್ನು (ಈ ಹಗ್ಗವು ಮಗ್ಗದ ಶಟಲ್ ಅನ್ನು ಹಾರಿಸುತ್ತದೆ) ಎಡಕ್ಕೆ ಬಲಕ್ಕೆ ಜಗ್ಗುವ ಮೂಲಕ ಹೊಕ್ಕಿನ ನೂಲನ್ನು ಪೋಣಿಸುತ್ತ ಹೋಗುತ್ತಾರೆ. ಒಬ್ಬ ಒಳ್ಳೆಯ ನೇಕಾರ ತನ್ನ ಕಾಲು ಹಾಗೂ ಕೈಗಳ ಈ ಚಲನೆಯನ್ನು ಸಮರ್ಥವಾಗಿ ಸಂಯೋಜಿಸಿ ಕೊಂಡಿರುತ್ತಾನೆ. ಜೊತೆಗೆ ಮನಸ್ಸನ್ನೂ ಸಹಿತ ನೇಯ್ಗೆ ಮಾಡುತ್ತಿರುವ ನೇಕಾರರ ಗಮನವು ಮಗ್ಗದ ಹಾಸಿನ ಸಾವಿರಾರು ನೂಲುಗಳು ಹಾಗೂ ಕಣಿಕೆಯ ದಾರದ ಮೇಲೆ ಇರುತ್ತದೆ. ಎಲ್ಲಿಯೇ ಆದರೂ ನೂಲು ತುಂಡಾದರೆ ಅಥವಾ ಕಣಿಕೆ ಖಾಲಿಯಾದರೆ ನೇಕಾರ ಮಗ್ಗ ನಿಲ್ಲಿಸಿಕೊಂಡು ಸಮಸ್ಯೆಯನ್ನು ಪರಿಹರಿಸಿಕೊಂಡು ಮತ್ತೆ ಮುಂದುವರೆಯುತ್ತಾನೆ.

### ಕೈಮಗ್ಗ ಕ್ಷೇತ್ರ

ಕೈಮಗ್ಗ ನೇಕಾರಿಕೆಯೆಂಬುದು ಒಂದು ಪುರಾತನವಾದ ತಂತ್ರಜ್ಞಾನವಾಗಿದೆ. ಭಾರತ ದೇಶದಲ್ಲಿ ಈ ತಂತ್ರಜ್ಞಾನಕ್ಕೆ ಐದು ಸಾವಿರ ವರ್ಷಗಳ ಪರಂಪರೆಯಿದೆ. ಭಾರತ ದೇಶವು ಹತ್ತಿ ಕೈಮಗ್ಗ ಕ್ಷೇತ್ರಕ್ಕೆ ತವರು ಮನೆಯಿದ್ದಂತೆ. ಎರಡು ಸಾವಿರ ವರ್ಷಗಳ ಹಿಂದೆಯೇ ನಾವು ಹತ್ತಿ ಕೈಮಗ್ಗದ ಬಟ್ಟೆಗಳನ್ನು ಇತರ ದೇಶಗಳಿಗೆ ಉದಾಹರಣೆಗೆ ಹೇಳುವುದಾದರೆ, ಯೂರೋಪಿನ ರೋಮ್ ನಗರಕ್ಕೆ ರಫ್ತು ಮಾಡುತ್ತಿದ್ದವಂತೆ, ಈಗಲೂ ಇಷ್ಟೆಲ್ಲ ಅವನತಿಯ ನಂತರ ವಿಶ್ವದ ಮಿಕ್ಕೆಲ್ಲಾ ದೇಶಗಳಲ್ಲಿರುವುದಕ್ಕಿಂತ ಹೆಚ್ಚಿನ ಕೈಮಗ್ಗಗಳು ನಮ್ಮ ಒಂದು ದೇಶದಲ್ಲಿ ಇವೆ. ಕೈಮಗ್ಗ ಉದ್ದಿಮೆಯು ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಮಾಡುತ್ತಿದೆ. ವ್ಯವಸಾಯ ಕ್ಷೇತ್ರದ ನಂತರ ಗ್ರಾಮೀಣ ಪ್ರದೇಶದಲ್ಲಿ ಅತಿಹೆಚ್ಚು ಉದ್ಯೋಗ ಸೃಷ್ಟಿಮಾಡುತ್ತಿರುವುದು ಕೈಮಗ್ಗವೇ ಆಗಿದೆ. ಒಂದು ಅಂದಾಜಿನ ಪ್ರಕಾರ ಭಾರತ ದೇಶದಲ್ಲಿ ಈಗ ೪೩.೩೧ ಲಕ್ಷ ಜನರಿಗೆ ಕೈಮಗ್ಗ ಕ್ಷೇತ್ರವು ಉದ್ಯೋಗವನ್ನು ನೀಡುತ್ತಿದೆ. ಇವರಲ್ಲಿ ಹೆಚ್ಚಿನವರು ಗ್ರಾಮೀಣ ನೇಕಾರರು ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ನಮ್ಮ ದೇಶದ ಕೈಮಗ್ಗ ಬಟ್ಟೆಯ ಒಟ್ಟು ಉತ್ಪಾದನೆಯಲ್ಲಿ ದಕ್ಷಿಣಭಾರತದ್ದು ಅತಿದೊಡ್ಡ ಕೊಡುಗೆಯಾಗಿದೆ. ಉತ್ಪಾದನೆಯ ಅರ್ಧಕ್ಕಿಂತ ಹೆಚ್ಚಿನ ಪ್ರಮಾಣವ ದಕ್ಷಿಣಭಾರತದ ನಾಲ್ಕು ರಾಜ್ಯಗಳಿಂದ ಬರುತ್ತದೆ. ಕೈಮಗ್ಗ ಕೈಗಾರಿಕೆಯ ವಿಶೇಷತೆಯೆಂದರೆ, ಇಲ್ಲಿ ಉತ್ಪಾದನೆಯೂ ಚದುರಿದಂತಹದ್ದು, ಮಾರುಕಟ್ಟೆಯೂ ಸಹ ಚದುರಿದಂತದ್ದು, ಕೈಮಗ್ಗ ಕ್ಷೇತವು ಸಂಪೂರ್ಣವಾಗಿ ಪರಿಸರ ಸ್ನೇಹಿಯಾದ ಕೈಗಾರಿಕೆಯಾಗಿದೆ. ಇಲ್ಲಿ ಬಳಕೆಯಾಗುವ ಹೆಚ್ಚು ಕಡಿಮೆ ಎಲ್ಲ ಕಚ್ಚಾ ಸಾಮಗ್ರಿಗಳೂ ನೈಸರ್ಗಿಕ ಮೂಲದಿಂದ ಬಂದವು ಹಾಗೂ ಮಣ್ಣಿನಲ್ಲಿ ಬೆರೆತು ಮಣ್ಣಾಗುವಂತಹವುಗಳಾಗಿವೆ. ಉರುವಲು ನೀರು ಬಂಡವಾಳ ಹಾಗೂ ಮೂಲಸೌಲಭ್ಯಗಳು ಎಲ್ಲವೂ ಈ ಕೈಗಾರಿಕೆಯಲ್ಲಿ ಹಿತಮಿತವಾಗಿ ಬಳಕೆಯಾಗುತ್ತದೆ. ಕೈಮಗ್ಗ ಕೈಗಾರಿಕೆಯು ಮಾನವರ ಮೇಲಾಗಲೀ ಅಥವಾ ಪರಿಸರದ ಮೇಲಾಗಲೀ ದುಷ್ಪರಿಣಾಮ ಬೀರುವುದಿಲ್ಲ. ಇದೇ ಮಾತನ್ನು ಬಟ್ಟೆಯ ಗಿರಣಿಗಳ ಬಗ್ಗೆಯಾಗಲಿ, ಅಥವಾ ಯಾವುದೇ ಬೃಹತ್ ಕೈಗಾರಿಕೆಗಳ ಬಗ್ಗೆಯಾಗಲೀ ಹೇಳಲಿಕ್ಕೆ ಬರುವುದಿಲ್ಲ.

**ಕಲಬೆರಕೆ ಬಟ್ಟೆಯ ಸಮಸ್ಯೆ :**

ಕೈಮಗ್ಗದ ಬಟ್ಟೆ ರಾಸಾಯನಿಕ ಮೂಲದ (ಸಿಂಥೆಟಿಕ್), ಬಟ್ಟೆಗಳಿಗಿಂತ ಕೊಂಚ ದುಬಾರಿ. ಆದರೂ ಅದರ ಸುಗುಣಗಳಿಂದಾಗಿ ಅದಕ್ಕೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೇಡಿಕೆಯಿದೆ. ದೇಶವಿದೇಶಗಳ ಗ್ರಾಹಕರು ಕೈಮಗ್ಗದ ಪದಾರ್ಥಗಳನ್ನು ಕೊಳ್ಳಲು ಬಯಸುತ್ತಾರೆ. ಹಲವು ಕಾರಣಕ್ಕಾಗಿ ಅವರು ಹೀಗೆ ಮಾಡುತ್ತಾರೆ. ಕೈಮಗ್ಗದ ಬಟ್ಟೆಗಳು ವೈಶಿಷ್ಟ್ಯಪೂರ್ಣವಾದದ್ದು ಎಂಬುದು ಒಂದು ಕಾರಣವಾದರೆ, ಗ್ರಾಮೀಣ ನೇಕಾರರ ಬೆಂಬಲಕ್ಕೆ ನಿಲ್ಲಬೇಕು ಎಂಬುದು ಇನ್ನೊಂದು ಕಾರಣವಾಗಿದೆ. ಕೈಮಗ್ಗವು ಪರಿಸರ ಸ್ನೇಹಿಯಾದ ಕೈಗಾರಿಕೆ ಎಂಬ ಕಾರಣವೂ ಇದೆ. ಹೀಗೆ ಹಲವಾರು ಭಾವನಾತ್ಮಕ ಕಾರಣಗಳಿಗಾಗಿ ಗ್ರಾಹಕರು – ಕೊಂಚ ಹೆಚ್ಚಿಗೆ ಬೆಲೆ ತೆತ್ತರೂ ಪರವಾಗಿಲ್ಲ ಎಂದು, ಕೈಮಗ್ಗದ ಬಟ್ಟೆಗಳನ್ನು ಖರೀದಿಸುತ್ತಾರೆ.

ದುರಂತವೆಂದರೆ, ತಮ್ಮ ಉತ್ಪನ್ನಗಳಿಗೆ ಒಳ್ಳೆಯ ಬೇಡಿಕೆಯಿದ್ದರೂ ಸಹ ಕೈಮಗ್ಗದ ನೇಕಾರರು ಸಂಕಷ್ಟದಲ್ಲಿದ್ದಾರೆ. ಈ ವಿಚಿತ್ರ ಪರಿಸ್ಥಿತಿಗೆ ಕಾರಣ ಕಲಬೆರಕೆಯ ಸಮಸ್ಯೆಯೇ ಆಗಿದೆ. ಕೈಮಗ್ಗ ಹಾಗೂ ಖಾದಿ ಬಟ್ಟೆಯ ಹೆಸರಿನಲ್ಲಿ ವಿದ್ಯುತ್ ಮಗ್ಗಗಳ (ಪವರ್ ಲೂಮ್) ಒಟ್ಟೆಗಳು ಹಾಗೂ ಮಿಲ್ಲಿನ ಬಟ್ಟೆಗಳು ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುತ್ತಿದೆ.

ಕೈಮಗ್ಗದ ಬಟ್ಟೆಗಳನ್ನು ಗುರುತಿಸಲಿಕ್ಕಿರುವ ದಾರಿಯೆಂದರೆ ನೇಯ್ಗೆಯ ದೋಷವೇ ಆಗಿದೆ. ಏನು ಹಾಗೆಂದರೆ? ದೋಷವೆಂದರೆ ದೋಷವಲ್ಲ. ಕೈಗಳ ಮೂಲಕ ನೇಯ್ದ ಬಟ್ಟೆಗಳಾದ್ದರಿಂದ ಇವುಗಳ ನೇಯ್ಗೆಯಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳು ಉಳಿದಿರುತ್ತದೆ. ಇವೇ ಇವುಗಳ ವೈಶಿಷ್ಟ್ಯವು ಹೌದು. ಕಲಾತ್ಮಕತೆಯೂ ಹೌದು. ದೋಷಗಳ ವೈಶಿಷ್ಟ್ಯಗಳೂ ಹೌದು. ಕಲಾತ್ಮಕತೆಯೂ ಹೌದು. ದೋಷಗಳು ಎಂದು ನಾವು ಕರೆಯುವ ಸಂಗತಿಗಳ ಕಾರಣದಿಂದಾಗಿ ಕೈಮಗ್ಗದ ಬಟ್ಟೆಗಳಿಗೆ ಅವುಗಳ ಸೌಂದರ್ಯವು ಲಭ್ಯವಾಗಿರುವುದು. ಕೈ ಮಗ್ಗದ ಪ್ರತಿಯೊಂದು ತುಂಡು ಬಟ್ಟೆಯೂ ಮತ್ತೊಂದು ತುಂಡು ಬಟ್ಟೆಗಿಂತ ಕೊಂಚ ಭಿನ್ನವಾಗಿರುತ್ತದೆ.

ವಿದ್ಯುತ್ ಮಗ್ಗಗಳ ಬಟ್ಟೆಗಳಲ್ಲಿ ಏಕತಾನತೆಯಿರುತ್ತದೆ. ಎಲ್ಲ ಸ್ವಯಂಚಾಲಿತ ಯಂತ್ರ ಉತ್ಪಾದನೆಯಲ್ಲೂ ಏಕತಾನತೆಯಿರುತ್ತದೆ. ಈ ಏಕತಾನತೆಯನ್ನೇ ಅವುಗಳ ಶಕ್ತಿ ಎಂದು ತಿಳಿಯಲಾಗುತ್ತದೆ. ದುರಂತವೆಂದರೆ, ಕಲಬೆರಕೆ ಮಾಡಲೆಂದೇ ವಿದ್ಯುತ್ ಮಗ್ಗದ ಬಟ್ಟೆಗಳಲ್ಲಿ ನೇಯ್ಗೆಯ ದೋಷಗಳನ್ನು ಅಳವಡಿಸಲಾಗುತ್ತದೆ. ಹೀಗೆ ಮಾಡಿ ಅವುಗಳಲ್ಲಿ ಕೈಮಗ್ಗದ ಶೈಲಿಯನ್ನು ತರಲಾಗುತ್ತದೆ. ಹಾಗೂ ಕೈಮಗ್ಗದ ಬಟ್ಟೆಯೆಂಬ ಹೆಸರಿನಿಂದ ಅವುಗಳನ್ನು ಮಾರಾಟ ಮಾಡಲಾಗುತ್ತದೆ. ಕಲಬೆರಕೆಯನ್ನು ತಪ್ಪಿಸಲೆಂದು ಕೇಂದ್ರ ಸರ್ಕಾರವು ಕೈಮಗ್ಗ ಗುರುತು (ಹ್ಯಾಂಡ್‌ಲೂಮ್ ಮಾರ್ಕ್) ಎಂಬ ಹಣೆಪಟ್ಟಿಯೊಂದನ್ನು ಜಾರಿಗೆ ತಂದಿದೆ. ಏನೇ ಇರಲಿ, ಸ್ವಯಂಚಾಲಿತ ಯಂತ್ರಗಳ ಸ್ಪರ್ಧೆಯನ್ನು ಎದುರಿಸಿ ನಿಲ್ಲುವುದು ಕೈಮಗ್ಗ ನೇಕಾರರಿಗೆ ದಿನೇ ದಿನೇ ಕಷ್ಟದಾಯಕವಾಗಿ ಪರಿಣಮಿಸುತ್ತಿದೆ.

ಕೈಮಗ್ಗ ಕ್ಷೇತ್ರವನ್ನು ನೀವು ಬೆಂಬಲಿಸಿ ಕೈಮಗ್ಗವು ನಾಳಿನ ಉದ್ದಿಮೆಯಾಗಿದೆ. ಇದು ಸ್ವಚ್ಛ ಪರಿಸರಕ್ಕೆ ಸಲ್ಲುವ ಉದ್ದಿಮೆಯಾಗಿದೆ. ಸಮಾನತೆಯನ್ನು ಸಲಹಬಲ್ಲ ಉದ್ದಿಮೆಯಾಗಿದೆ.

## ಓದುಪಠ್ಯ :

### ೪. ಜೇಡರ ದಾಸಿಮಯ್ಯನ ವಚನಗಳು

**– ಡಾ. ವಿ.ಜಿ. ಪೂಜಾರ**

ದಾಸಿಮಯ್ಯ ಒಬ್ಬ ಶ್ರೇಷ್ಠ ಅನುಭಾವಿ ಚಿಂತಕ ಧರ್ಮಪ್ರಚಾರಕ ಸಮಾಜ ಸುಧಾರಕ ಆದ್ಯ ವಚನಕಾರ ತನ್ನ ವಚನಗಳಲ್ಲಿ ವ್ಯಕ್ತಪಡಿಸಿದ ಸ್ತ್ರೀ–ಪುರುಷ ಸಮಾನತೆ ಜಾತಿ ನಿರ್ಮೂಲನೆ ಏಕೋದೇವೋಪಾಸನೆ ಡಂಭಾಚಾರಗಳ ಖಂಡನೆ ಸರಳತೆ ವಾಸ್ತವತೆ ಸಮಾನತೆ ಮುಂತಾದ ವಿಚಾರಗಳು ತುಂಬಾ ಮೌಲ್ಯ ವಾದವೂ ಕೆಲ ವಚನಗಳನ್ನು ನೋಡೋಣ ಸರ್ವಶಕ್ತನಾದ ಶಿವನ ಸೃಷ್ಟಿಯ ಸ್ಥಿತಿಗೆ ಹೇಗೆ ಕಾರಣ ಅದರ ಸ್ಥಿತಿಗೆ ಕಾರಣ ಎಂಬ ಅಂಶವು ಈ ಕೆಳಕಂಡ ವಚನಗಳಲ್ಲಿ ಕಾಣುತ್ತೇವೆ.

**ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ.**
**ಸುಳಿದು ಸೂಸುವ ಗಾಳಿ ನಿಮ್ಮ ದಾನ.**
**ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ**
**ಸುತ್ತಿ ಸುರಿವ ಸಾಗರ ನಿಮ್ಮ ದಾನ** ಎಂದಿದ್ದಾನೆ.

**ಅರ್ಥವುಂಟೆಂದು ಅಹಂಕರಿಸಿ ಮಾಡುವನ ಭಕ್ತಿ**
**ತೊತ್ತಿನ ಕೂಟ, ತೊರೆಯನ ಮೇಳದಂತೆ.**
**ತನು–ಮನ–ಧನದಲ್ಲಿ ವಂಚನೆಯುಳ್ಳ**
**ಪ್ರಪಂಚಿಯ ಮನೆಯ ಕೂಳು**
**ಶುನಕನ ಬಾಯ ಎಲುವ ಪ್ರತಿಶುನಕ ತಿಂದಂತೆ ಕಾಣಾ ! ರಾಮನಾಥ.**

**ಕತ್ತೆ ಬಲ್ಲುದೆ ಕಸ್ತೂರಿಯ ವಾಸನೆಯ?**
**ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ?**
**ಭಕ್ತಿಯನರಿಯದ ವ್ಯರ್ಥಜೀವಿಗಳು**
**ನಿಮ್ಮವರನೆತ್ತ ಬಲ್ಲರೈ? ರಾಮನಾಥ.**

**ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದಡೆ**

**ಹೊಲೆಯೆಂಬುದು ಲೋಕವೆಲ್ಲ.**

**ಹಲವೆಲುವಿದ್ಧ ಬಾಯಿ ಒಲವರವ ನುಡಿದಡೆ**

**ಹೊಲೆಯರ ಬಾವಿಯಿಂದ ಕರಕಷ್ಟ ಕಾಣಾ! ರಾಮನಾಥ.**

ಒಲವರ ಪ್ರೀತಿಯ ಮಾತು

ಎಲವು ಬಾವಿಯ ಮೇಲಿದೆಯೆಂದು ದೂರ ಸರಿಯುವ ಜನರು ತಮ್ಮ ಬಾಯಿಯಲ್ಲಿಯೇ ಎಲವುಗಳಿವೆ ಎಂಬುದನ್ನು ತಿಳಿಯಬೇಕು. ಜಾತಿ–ಭೇದ ಮಾಡಬಾರದೆಂಬ ಭಾವ ಇಲ್ಲಿದೆ.

**ಕರ್ನಾಟಕ ಶರಣ ಕಥಾಮೃತ:**

ಮುದನೂರಿನಲ್ಲಿ ಕಾಮಯ್ಯ ಮತ್ತು ಶಂಕರಿ ಎಂಬ ದೇವಾಂಗ ದಂಪತಿಗಳಿಗೆ ಹುಟ್ಟಿದವನೇ ದಾಸಿಮಯ್ಯ. ಈತ ಬಾಲ್ಯ ಅಲ್ಲಿ ಕಳೆದು, ಆರಂಭದ ವಿದ್ಯಾಭ್ಯಾಸವನ್ನು ಅಲ್ಲಿಯೇ ಮಾಡುತ್ತಾನೆ. ಜೊತೆಗೆ ತನ್ನ ಕುಲಕಸುಬಾದ ಕೆಲಸವನ್ನು ಕಲಿತು ಅದನ್ನೇ ವೃತ್ತಿಯನ್ನಾಗಿ ಅವಲಂಬಿಸಿದಂತೆ ತೋರುತ್ತದೆ. ಆದರೆ ಆತ ಬೆಳೆಯುತ್ತಾ ಹೋದಂತೆ ಅಂತರಂಗದಲ್ಲಿ ಆಧ್ಯಾತ್ಮಿಕತೆಯನ್ನು ಬೆಳೆಸಿಕೊಳ್ಳುವನು.

ಮನೆ ದೇವರಾದ ರಾಮನಾಥನ ದೇವಾಲಯಕ್ಕೆ ನಿತ್ಯವೂ ಹೋಗಿ ಪೂಜೆಯನ್ನು ಮಾಡುತ್ತಿದ್ದನು. ಭಕ್ತಿಯಿಂದ ಹಾಡುತ್ತಿದ್ದನು. ಬಹುಶಃ ಈ ವೇಳೆಗಾಗಲೇ ಅವರ ಮನಸ್ಸು ಕನ್ನಡದ ವಚನಗಳ ಕಡೆಗೆ ತಿರುಗಿದ್ದಿತು. ಶಿವಜ್ಞಾನದ ಬೆಳಕನ್ನು ಪಡೆದು ಈ ಕತ್ತಲನ್ನು ಕಳೆಯಬೇಕೆಂಬ ಮಹತ್ತರವಾದ ಆಕಾಂಕ್ಷೆಯಿಂದ ಮನೆಬಿಟ್ಟು ಶ್ರೀಶೈಲಕ್ಕೆ ಬರುತ್ತಾನೆ. ಅಲ್ಲಿ ಚಂದ್ರಗುಂಡ ಶಿವಾಚಾರ್ಯರು ಗುರುವಾಗಿ, ಶಿವಯೋಗ ಸಾಧನೆಯಲ್ಲಿ ಆತನನ್ನು ತೊಡಗಿಸಿಕೊಂಡರು. ಆಧ್ಯಾತ್ಮಿಕತೆ ಆಳವಾಗಿ ಬೇರೂರಿಸಿಕೊಂಡ ದಾಸಿಮಯ್ಯನು ತನ್ನ ಊರಿಗೆ ಹೊರಟ ಸಂದರ್ಭದಲ್ಲಿ ಆತ ಮೊದಲಿನ ವ್ಯಕ್ತಿಯಾಗಿರಲಿಲ್ಲ, ಆಧ್ಯಾತ್ಮಿಕ ಶಕ್ತಿಯ ಕೇಂದ್ರವಾಗಿದ್ದ. ಜನಸಾಮಾನ್ಯರ ಉದ್ಧಾರದ ಕಡೆಗೆ ಗಮನಹರಿಸಿದ. ಧರ್ಮವನ್ನು ಜನತೆಯ ಬಳಿಗೆ ಕೊಂಡೊಯ್ಯಬೇಕು ಎಂಬ ಬಸವಣ್ಣನವರ ಸಾಹಸದ ಪೂರ್ವ ಪ್ರಯತ್ನವನ್ನು ದಾಸಿಮಯ್ಯನಲ್ಲಿ ಕಂಡೆವು.

ಶ್ರೀಶೈಲದಿಂದ ಹೊರಟ ಆತ ದಾರಿಯುದ್ದಕ್ಕೂ ಜನರನ್ನು ಉದ್ಧರಿಸುತ್ತಾ ಮುನ್ನಡೆದ. ಕಾಡು ಜನರಿಗೆ ಸಂಸ್ಕಾರವನ್ನಿತ್ತು ಅವರನ್ನು ಧರ್ಮ ಮಾರ್ಗದತ್ತ ತಿರುಗಿಸಿದ. ಹಿಂದೊಮ್ಮೆ ಸಂಸ್ಕಾರವನ್ನು ಪಡೆದು ಮತ್ತೆ ವಿಸ್ಮೃತಿಗೆ ಒಳಗಾಗಿದ್ದ ದೇವಾಂಗದವರಿಗೆ ದೀಕ್ಷೆಯನ್ನು ಕೊಟ್ಟು ಅವರನ್ನು ಧರ್ಮದೀಕ್ಷಿತನಾಗಿ ಮಾಡಿದ. ಧರ್ಮದ ಹೆಸರಿನಲ್ಲಿ ಮೇಲುಕೀಳುಗಳನ್ನು ಕಲ್ಪಿಸಿಕೊಂಡಿದ್ದ ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಆತ ಒಪ್ಪಲಿಲ್ಲ. ಧರ್ಮದಲ್ಲಿ ಎಲ್ಲರೂ ಸಮಾನ ಅಧಿಕಾರಿಗಳು, ಜಾತಿ ಮತಗಳ ಹಂಗಿಲ್ಲ, ಸ್ತ್ರೀ–ಪುರುಷರೆಂಬ ಭೇದವಿಲ್ಲ, ಅಧಿಕಾರ ಅಂತಸ್ತುಗಳ ಅಂತರವಿಲ್ಲ.

**"ಮಡದಿಯ ಪ್ರಾಣಕ್ಕೆ ಮೊಲೆ ಮೂಡಿ ಇದ್ದಿದ್ದೆ?**

**ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ?**

**ಕಡೆಯಲಿದ್ದ ಅಂತ್ಯಜನು ಹಿಡಿದಿದ್ದನೆ ಪ್ರಾಣದಲ್ಲಿ ಹಿಡಿಗೋಲ?**

**ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥ"**

ಎನ್ನುವ ವಚನದಲ್ಲಿ ಅದನ್ನು ಸ್ಪಷ್ಟವಾಗಿ ಹೇಳಿದ್ದಾನೆ ಮತ್ತು ಆ ತೊಡಕನ್ನು ಬಿಡಿಸುವ ಪ್ರಯತ್ನದಲ್ಲಿ ತೊಡಗಿದ್ದಾನೆ. ಜನಸಾಮಾನ್ಯರ ಉದ್ಧಾರಕ್ಕಾಗಿ ಕಂಕಣಕಟ್ಟೆ ಹೊರಟಿದ್ದ ತರುಣ ಸಾಧಕನ ಕೀರ್ತಿ ಸುತ್ತಲೂ ಹಬ್ಬಿತು.

ಆತನ ನೂತನ ವಿಚಾರಗಳು ಜನರನ್ನು ಆಕರ್ಷಿಸಿದವು. ಆ ವಿಚಾರಗಳ ಬೆಳಕನ್ನು ಮನೆ ಮನೆಗೆ ಕೊಂಡೊಯ್ಯುವ ಜಂಗಮನಾಗಿ ಸಂಚಾರವನ್ನು ಕೈಗೊಂಡು ಆತ ಪೊಟ್ಟಲಕೆರೆಗೆ ಬರುತ್ತಾನೆ. ಅದು ಚಾಲುಕ್ಯ ರಾಜ ಜಯಸಿಂಹನ ರಾಜಧಾನಿ. ಜಯಸಿಂಹನ ರಾಣಿ ಸುಗ್ಗಲೆ ಈತನ ಉಪದೇಶಕ್ಕೆ ಮಾರು ಹೋಗುತ್ತಾಳೆ. ಅವಳಿಗೆ ದೀಕ್ಷೆಯನ್ನಿತ್ತು ಶಿಷ್ಯಳನ್ನಾಗಿ ಅಂಗೀಕರಿಸಿ ಅನುಗ್ರಹಿಸುತ್ತಾನೆ. ದಾಸಿಮಯ್ಯನ ಅದೊಂದು ಪವಾಡವೇ ಅಲ್ಲಿ ನಡೆದಂತಾಗುತ್ತದೆ. ವಿರೋಧಿಗಳೆಲ್ಲ ಸೇರಿ ಆತನಿಗೆ ಮುಖಭಂಗ ಮಾಡಿ ಅವಮಾನಿಸಲು ನಿರ್ಧರಿಸಿರುತ್ತಾರೆ. ಆದರೂ ಅವರೆಲ್ಲರನ್ನೂ ತನ್ನ ವಾದದಿಂದ ಸೋಲಿಸಿದ್ದೇ ಅಲ್ಲದೆ ತನ್ನ ಪ್ರಭಾವದ ಛಾಪನ್ನು ಬೀರುತ್ತಾನೆ. ತನ್ನ ಗುರುವಿನ ಮಹೋನ್ನತಿಯನ್ನು ಕಂಡ ಸುಗ್ಗಳೆ ಸಂತೋಷಗೊಂಡಳು. ಜಯಸಿಂಹ ಮಹಾರಾಜನು ಪ್ರಭಾವಿತಗೊಂಡನು. ದಾಸಿಮಯ್ಯ ಸ್ವಲ್ಪಕಾಲ ನೆಲೆಗೊಂಡು ಎಲ್ಲರನ್ನೂ ಧರ್ಮಮಾರ್ಗದಲ್ಲಿ ನಿಯೋಜಿಸಿ ತನ್ನ ಊರಿನ ಹಾದಿ ಹಿಡಿಯುತ್ತಾನೆ. ತನ್ನ ಊರನ್ನೇ ಧರ್ಮಪ್ರಚಾರದ ಕೇಂದ್ರವನ್ನಾಗಿಟ್ಟುಕೊಂಡು, ಅರಿವು–ಆಚಾರಗಳಿಂದ ಸಾಧಿಸಿ ತೋರುವ ಅನುಭಾವಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟನು. ಆದರ್ಶವಾದ ಸಾಂಸಾರಿಕ ಜೀವನದಲ್ಲಿ ಇದ್ದು **"ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ"** ಎಂದು ನುಡಿದಂತೆ ನಡೆದು ತೋರಿಸಲು ಉದ್ದೇಶಿಸಿದ. ಶಿವಪುರದ ಮಲ್ಲಿನಾಥ ಮಹಾದೇವಿ ಅವರ ಪುತ್ರಿ 'ದುಗ್ಗಳೆ' ಸರ್ವ ವಿಧದಲ್ಲೂ ತಕ್ಕುದಾದ ಪತ್ನಿಯಾಗಲು ಅರ್ಹಳಾಗಿದ್ದಳು. ಅದನ್ನು ಪರೀಕ್ಷಿಸಿ ತಿಳಿದು ಅವಳನ್ನು ಮದುವೆಯಾದನು.

ಅವನ ಗೃಹಜೀವನ ಪ್ರಾರಂಭವಾಯಿತು. ಅದು ಪೂರ್ಣ ಆದರ್ಶಪ್ರಾಯವಾದ ಸಂಸಾರಿಕ ಜೀವನ. ಕಷ್ಟಪಟ್ಟು ದೇಹದಿಂದ ಬೆವರು ಸುರಿಸಿ ದುಡಿಯುವ, ಅದಕ್ಕೆ ಕುಲಕಸುಬಾದ ನೇಯ್ಗೆಯ ವೃತ್ತಿಯನ್ನು ಅವಲಂಬಿಸಿದ್ದನು. ಆದರೆ ಆ ದುಡಿಮೆ ಕೇವಲ ಹೊಟ್ಟೆಪಾಡಿನ ಉದ್ಯೋಗವಾಗಿತ್ತು. ಮುಂದೆ ಬಸವಣ್ಣನವರ 'ಕಾಯಕ' ಎಂಬ ಮಾತಿಗೆ ಕೊಟ್ಟ ಎಲ್ಲ ಅರ್ಥಗಳನ್ನು ಅದು ಒಳಗೊಂಡಿದ್ದಾಗಿತ್ತು. ನೇಯ್ಗೆಯ ಕಾಯಕದ ಜೊತೆಗೆ ಶಿವ ನಾಮಸ್ಮರಣೆಯೂ ಹಾಸುಹೊಕ್ಕಾಗಿ ಬೆರೆಯುವುದು. ಅಷ್ಟೇ ಅಲ್ಲದೆ ಆತ್ಮಾನುಸಂಧಾನದ ಆಧ್ಯಾತ್ಮಿಕ ಸಂಕೇತವಾಗಿ ನೇಯ್ಗೆಯ ಕಾಯಕವನ್ನು ಆತ ಪರಿವರ್ತಿಸಿಕೊಂಡಿದ್ದನೆಂಬುದನ್ನು ಈ ಕೆಳಗಿನ ವಚನದಲ್ಲಿ ಹೇಳಿದ್ದಾನೆ.

**"ಉಂಕಿಯ ನಿಗುಚಿ, ಸರಿಗೆಯ ಸಮಗೊಳಿಸಿ,**

**ಸಮಗಾಲ ನಿಕ್ಕಿ ಅಣಿಯೊಳು ಏಳ ಮೆಟ್ಟಿದೆ;**

**ಹಿಡಿಯ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು.**

**ಈ ಸೀರೆಯ ನೆಯ್ದವ ನಾನೋ ನೀನೋ ರಾಮನಾಥ"**

ಹೀಗೆ ನೇಯ್ಗೆಯಿಂದ ಹೊರಗೊಂದು ಸೀರೆ ಸಿದ್ಧವಾಗುತ್ತಿದ್ದಂತೆ ಅಂತರಂಗದಲ್ಲಿ ರಾಮನಾಥನಿಂದ ಬೇರೊಂದು ಸೀರೆಯ ವಿನ್ಯಾಸ ರೂಪುಗೊಳ್ಳುತ್ತಿತ್ತು. ಬಹಿರಂಗದಲ್ಲಿ ಕೈಗೊಂಡಿದ್ದ ನೇಯ್ಗೆಯ ಕಾಯಕದಿಂದ ಆತ ಜೇಡರ ದಾಸಿಮಯ್ಯ ಎನಿಸಿದರೆ; ಅಂತರಂಗದಲ್ಲಿ ದೇವರ ದಾಸಿಮಯ್ಯನಾಗಿದ್ದನು. ಈ ಎರಡೂ ಹೆಸರುಗಳಿಂದಲೂ ಆತ ಪ್ರಸಿದ್ಧನಾಗಿದ್ದಾನೆ. ಅವುಗಳಲ್ಲಿ ಎರಡನೇ ಹೆಸರು ಹೆಚ್ಚು ಪ್ರಚಲಿತವಾದದ್ದು.

# ಘಟಕ ೨.

## ಅಹಿಂಸೆ

ಅಹಿಂಸೆಯೇ ಪರಮ ಧರ್ಮ ಎನ್ನುತ್ತದೆ ಮಾನವನ ತಿಳಿವಳಿಕೆ. ಹೇಳುವುದು ಸುಲಭ; ಹೇಳಿದಂತೆ ಬಾಳುವುದು ಕಡುಕಷ್ಟ. ಹಿಂಸೆ ಕೇವಲ ದೇಹಕ್ಕೆ ಸಂಬಂಧಿಸಿದ್ದಲ್ಲ, ಮನಸ್ಸಿಗೂ ಅನ್ವಯಿಸಿದ್ದು. ದೈಹಿಕ ಹಿಂಸೆ ಕಣ್ಣಿಗೆ ಕಾಣುವುದು. ಮಾನಸಿಕ ಹಿಂಸೆ ಕಣ್ಣಿಗೆ ಕಾಣದ್ದು. ದೈಹಿಕ ಹಿಂಸೆಯ ಕ್ರೌರ್ಯ ಶಾಬ್ದಿಕ ಅಬ್ಬರದ್ದು. ಮಾನಸಿಕ ಹಿಂಸೆಯ ನೋವು ರಣಮೌನದ್ದು.

ಜಗತ್ತಿನಲ್ಲಿ ಎಲ್ಲ ಧರ್ಮಗಳು ಹಿಂಸೆಯನ್ನು ವಿರೋಧಿಸಿವೆ; ಜೀವದಯೆಯನ್ನು ಪ್ರತಿಪಾದಿಸಿವೆ. ವಚನ ಧರ್ಮದಲ್ಲಿಯೂ ಬಸವಣ್ಣನವರು "ದಯೆಯೇ ಧರ್ಮದ ಮೂಲವಯ್ಯಾ" ಎಂದರು. ದಯೆಯನ್ನು ಜೀವನಧರ್ಮವಾಗಿ ಬಾಳಿದ 'ಶರಣ ದಸರಯ್ಯ', ದಸರಯ್ಯನೂ ಒಬ್ಬ ವಚನಕಾರ. ಅಹಿಂಸೆಯನ್ನು ಅದರ ಪರಾಕಾಷ್ಠೆಯಲ್ಲಿ ಬದುಕಿದ್ದ ಶರಣ; ತರುಲತೆ ಸ್ಥಾವರ ಜೀವಂಗಳೆಲ್ಲ ದೇವರ ಕಾರುಣ್ಯದಿಂದೊಗೆದವು ಎಂದು ಭಾವಿಸಿದ್ದವನು.

ಒಮ್ಮೆ ಅವನು ಪೂಜೆಗೆ ಹೂವು ಕೀಳುತ್ತಿದ್ದಾಗ ಒಂದು ಹೂವಿನಗಿಡ 'ನನ್ನ ಹೂವು ಕೀಳುತ್ತೀಯಲ್ಲ. ನನಗೆ ನೋವಾಗುವುದಿಲ್ಲವೆ' ಎಂದು ಕೇಳಿದಂತಾಗುತ್ತದೆ. ಅಂದಿನಿಂದ ಅವನು ಗಿಡದಿಂದ ಹೂವು ಕಿತ್ತು ತರುವುದನ್ನು ಬಿಟ್ಟ, ಗಿಡದಿಂದ ಬಿದ್ದ ಹೂವುಗಳನ್ನು ಮಾತ್ರ ಆರಿಸಿ ತಂದು ದೇವರಿಗೆ ಅರ್ಪಿಸುತ್ತಿದ್ದ.

**ಉದುರಿ ಬೀಳುವನ್ನಕ್ಕ ನಿನ್ನ ಹಂಗು**

**ಉದುರಿ ಬಿದ್ದಲ್ಲಿ ಎನ್ನೊಡವೆ**

**ನಾ ಪೂಜಿಸದನ್ನಕ್ಕ ದೇವ**

**ಎನ್ನ ಪೂಜೆಗೊಳಗಾದಲ್ಲಿ ನೀ ಭಕ್ತ ನಾ ನಿತ್ಯ**

**ಇಂತೀ ಸರ್ವರ ದಯವಸ್ತು ಬೀಜವಲಾ**

**ಸರ್ವ ಮಲತ್ರಯದೂರ ಸರ್ವಾಂಗ ಸಂತೋಷ ನಿಗರ್ವಿ**

**ದಸರೇಶ್ವರಲಿಂಗವು ತಥಮಿಥ್ಯದವನಲ್ಲಾ**

ದಸರಯ್ಯನ ಈ ವಚನ ಅವನ ಜೀವನಧರ್ಮಕ್ಕೆ ಕನ್ನಡಿ ಹಿಡಿದಿದೆ.

ಇಲ್ಲಿ ಗಮನಿಸಬೇಕಾದ ಅಂಶ, ಪೂಜಿಸಿಕೊಂಡ ದೈವವೇ ಭಕ್ತನಾಗುವುದು. ಪೂಜೆ ಮಾಡಿದವನು ನಿತ್ಯನಾಗುವುದು. ಈ ಪಲ್ಲಟದ ಹಿಂದೆ ಇರುವ ನೈತಿಕ ಭಾವ ಅಹಮಿಕೆಯಿಂದ ಬೀಗುವುದಲ್ಲ; ಆತ್ಮವಿಶ್ವಾಸದಿಂದ ಬಾಗುವುದು. ಸರ್ವರೊಳಗಿರುವ ಆಣವ, ಮಾಯಾ, ಕಾರ್ಮಿಕಗಳೆಂಬ ಮಲತ್ರಯಗಳಿಂದ ದೂರವುಳಿದು ಸರ್ವಾಂಗ ಸಂತೋಷ ನಿಗರ್ವಿಯಾಗುವುದು.

ದಸರಯ್ಯನು ರಚಿಸಿರುವ ಹತ್ತು ವಚನಗಳನ್ನು ಗಮನಿಸಿದಾಗಲೂ ಅಲ್ಲಿ ಕಾಣಬರುವುದು ಈ ಬಗೆಯ ಮಾನಸಿಕ ಶುದ್ಧತೆಯ ನಡೆಯ ಚಿತ್ರಣ; ಅಹಿಂಸಾ ಧರ್ಮದ ಜೀವನ ದರ್ಶನ. ಗಾಂಧೀಜಿಯವರ ಬದುಕಿನಲ್ಲಿಯೂ ಅಹಿಂಸೆ ಒಂದು ವ್ರತ. ಅದು ಸ್ವಾತಂತ್ರ ಸಂಗ್ರಾಮದಲ್ಲಿ ಬಹುದೊಡ್ಡ ಅಸ್ತ್ರವಾಯಿತು. ಜಾಗತಿಕ ಶಾಂತಿಯನ್ನು ಹಂಬಲಿಸಿದ ಗಾಂಧೀಜಿಯವರು 'ವಿಶ್ವಶಾಂತಿಗಾಗಿ ನಡೆಯುವ ಸಮರದಲ್ಲಿ ಮಹಿಳೆಯೇ ಸೈನಿಕಳು' 'ಅಹಿಂಸೆಯೇ ಅವಳ ಆಯುಧ' ಎಂದು ಹೇಳಿದ್ದಾರೆ.

**– ಎಸ್.ಜಿ. ಸಿದ್ಧರಾಮಯ್ಯ**

# ೧. ಬುದ್ಧ

**– ದ. ರಾ. ಬೇಂದ್ರೆ (ಅಂಬಿಕಾತನಯದತ್ತ)**

೧

ಬುದ್ಧ ಬುದ್ಧ–
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ;
ಮಡದಿ ಮಗು ಮನೆ–ಮಾರು ರಾಜ್ಯ–ಗೀಜ್ಯ
ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ
ಹಿಂದೆ ಬಿದ್ದವು ಎಲ್ಲೋ ಕುದುರೆ ಕಾಲಾಳು
ಬಿಚ್ಚಿ ಉದಿರಿತು ಎಲ್ಲೊ ಮನದ ಬಾಳು
ಹೊರಟ ಹೊರಟೇ ಹೊರಟ, ಹೊರಟನೆತ್ತೋ
ಸಾಹಸಿಯ ಗೊತ್ತುಗುರಿ ಅವಗು ಗೊತ್ತೋ !

೨

ಕಾಮ–ಕ್ರೋಧವ ದಾಟಿ, ಮದ–ಮತ್ಸರವ ತುಳಿದು
ಮೋಹ–ಲೋಭವ ಮೆಟ್ಟಿ ಅಡಿ ಕಿತ್ತಿ ಇಟ್ಟ,
ಇದೊ ತಗ್ಗು, ಅದೊ ಗುಡ್ಡ ಅಗೊ ಮಲೆಯ ಬೆಟ್ಟ
ನೆಲ ತೆಳಗೆ ಬಿಟ್ಟ.

೩

ಏರಿದೇರಿದನೇರಿ ಗಾಳಿಗುದುರೆ ಸವಾರಿ
ಚಂದ್ರಕಿರಣವ ಮೀರಿ ಸೂರ್ಯ ಸೇರಿ
ಬೆಳಕನ್ನ ಹಿಂದೊಗೆದು ತಮದ ಬಸಿರನೆ ಬಗೆದು
ಆಸ್ಪರ್ಶ ಅವಕಾಶದಲ್ಲಿ ಇದ್ದ.
ಬುದ್ಧ–ಬುದ್ಧ–ಬುದ್ಧ
ಶಬ್ದ–ನಾದ–ಧ್ವನಿಯ ಸದ್ದ ಮೀರಿದ್ದ.

ಇಲ್ಲ ಎಂಬುವ ಕೊನೆಗೆ ಆತ್ಮ ಶುದ್ಧ
ಇದ್ದರೇನಿಲದಿದ್ದರೇನೆನಲು ಗೆದ್ದ.

೪

ಅಲ್ಲಿಂದ ಇಲ್ಲಿವರೆ ಹೊರಳಿ ನೋಡಿ
ಇದ್ದುದಿದ್ದಂತಿತ್ತು ಜನನ–ಮರಣದ ಜೋಡಿ
ಗೆದ್ದುದೇನೆಂದೆನುತ ಮರಳಿ ಜಿಗಿದ
ಭೂತಜಾತದ ಎದೆಯ ಸೀಳಿ ಸಿಗಿದ
ಅದೆ ತನ್ನ ಮನೆಯೆಂದು ಸಿದ್ಧ ಬಗೆದ.

೫

ಬುದ್ಧನೆಂಬುವ ಒಬ್ಬ ಎಂದೂ ಇದ್ದ
ಎನುವಂತೆ ಇಂದಿಗೂ ಇಲ್ಲೆ ಇಲ್ಲ
ಬುದ್ಧ ಹುಟ್ಟಿದ ಮೇಲೆ ಹಳೆ ಜಗವು ಸತ್ತು
ಇದ್ದು ಇಲ್ಲದ ಹಾಗೆ, ಹಾಗೆ ಇತ್ತು.
ಬುದ್ಧ ಸತ್ತನು ಎಂದು ಯಾರೆಂದರೂ
ಬುದ್ಧನ ಜಯಂತಿಗಿದೆ ಜಯವೆಂದಿಗೂ
ಬುದ್ಧನ ಸಮಾಧಿಯದು ಮಾನವನ ಹೃದಯ
ಅದುವೆ ಕಾಯುತ್ತಲಿದೆ ಕಲ್ಕಿ ಉದಯ.

- **ಗಂಗಾವತರಣ** – ಕವನ ಸಂಕಲನ: **ಸಂ.ವಾಮನ ಬೇಂದ್ರೆ**

## ೨. ನಿರ್ಮಲ ಧರ್ಮದಿಂದ ಪಾಲಿಸು

**– ಜನ್ನ**

ಅಭಯರುಚಿಯಭಯಮತಿಯೆಂ
ಬುಭಯಮನಾ ಪಾಪಕರ್ಮನೊಯ್ವೆಡೆಯೊಳ್ ಮ
ತ್ತಭಯರುಚಿ ತಂಗೆಗೆಂದಪ
ನಭೀತೆಯಾಗೆಲಗೆ ತಾಯೆ ಮರಣದ ದೆಸೆಯೊಳ್ ॥೧॥

ನಿಯತಿಯನಾರ್ ಮೀಱಿದಪರ್
ಭಯಮೇವುದೊ ಮುಟ್ಟಿದೆಡೆಗೆ ಸೈರಿಸುವುದೆ ಕೇಳ್
ನಯವಿದೆ ಪೆತ್ತ ಪರೀಷಹ
ಜಯಮೆ ತಪಂ ತಪಕೆ ಬೇಱೆ ಕೋಡೆರಡೊಳವೇ ॥೨॥

ಅಣ್ಣನ ಮಾತಂ ಮನದೊಳ್
ತಿಣ್ಣಂ ತಳೆದೆಂದಳನುಜೆ ಮಾಡಿದುದಂ ನಾ
ವುಣ್ಣದೆ ಪೋಕುಮೆ ಭಯಮೇ
ಕಣ್ಣ ಭವಪ್ರಕೃತಿವಿಕೃತಿ ನಾವಱಿಯದುದೇ ॥೩॥

ಎನಿತೊಳವಪಾಯಕೋಟಿಗ
ಳನಿತರ್ಕಂ ಗೇಹಮಲ್ತೆ ದೇಹಮಿದಂ ನೆ
ಟ್ಟನೆ ಪೊತ್ತು ಸುಖಮನಱಸುವ
ಮನುಜಂ ಮೊರಡಿಯೊಳೆ ಮಾದುಪಱಮನಱರಸದಿರಂ ॥೪॥

ಬೇಡಿದ ಕಾಡೊಳ್ ಮಱಿಯಾ
ಯ್ತೀಡಾಡುವಮಿದಱ ಪೊಱೆಯನೆನಗಂ ನಿನಗಂ

ಮೂಡುವ ಮುೞುಗುವ ದಂದುಗ
ಮಾಡಿದ ಹೊಲನುಂಡ ಮರ್ದು ಕಂಡ ವಿಚಾರಂ ॥೫॥

ಇಂತಿಂತೊರ್ವರನೊರ್ವರ್
ಸಂತೈಸುತ್ತುಂ ನೃಪೇಂದ್ರತನುಜಾತರ್ ನಿ
ಶ್ಚಿಂತಂ ಪೊಕ್ಕರ್ ಪಸಿದ ಕೃ
ತಾಂತನ ಬಾಣಸುವೊಲಿರ್ದ ಮಾರಿಯ ಮನೆಯಂ ॥೬॥

ತಳಮನುಡಿದಿಡುವ ಕಣ್ಣಂ
ಕಳೆದೇಱಿಪ ಕರುಳ ತೋರಣಂಗಟ್ಟುವ ಕಾ
ಲ್ಗಳನುರಿಪಿ ನೆತ್ತರಿಂ ಕೂ
ೞ್ಗಳನಡುತಿಹ ವೀರರೆತ್ತ ನೋೞ್ಪೊಡಮದಱೊಳ್ ॥೭॥

ತಾಳುಗೆಯನುರ್ಚಿ ನೆತ್ತಿಯ
ಗಾಳಂ ಗಗನದೊಳೆೞಲ್ವ ವಾರಿಯ ಬೀರರ್
ಪಾಳಿಯೊಳೆಸೆದರ್ ಪಾಪದ
ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆಱದಿಂ ॥೮॥

ಆಡು ಕುೞಿ ಕೋೞಿ ಕೋಣನ
ಕೂಡಿದ ಪಿಂಡೊಳಱಿ ಪೆಳಱಿ ಮಾರ್ದನಿಯಿಂದಂ
ಕೂಡೆ ಬನಮಟ್ಟುದುರ್ವರೆ
ಬೀಡೆಯಿನೆರ್ದೆಯೊಡೆದುದವಱ ಕೋಟಲೆಗಾಗಳಾ ॥೯॥

ದೆಸೆದೆಸೆಗೆ ನರಶಿರಂ ತೆ
ತ್ತಿಸಿ ಮೆಱೆದುವು ಮದಿಲೊಳಬ್ಬೆ ಪೇರಡಗಿನ ಪೆರ್
ಬೆಸನದೆ ಪೊಱಗಣ ಜೀವ
ಪ್ರಸರಮುಮಂ ಪಲವು ಮುಖದಿನವಳೋಕಿಪವೋಲ್ ॥೧೦॥

ಭೈರವನ ಜವನ ಮಾರಿಯ
ಮೂರಿಯವೊಲ್ ನಿಂದ ಮಾರಿದತ್ತಂ ಲಲಿತಾ
ಕಾರರ ಧೀರರ ಬಂದ ಕು
ಮಾರರ ರೂಪಿಂಗೆ ತಕ್ಕುಗೊಂಡಂತಿರ್ದಂ ॥೧೧॥

ಅರಸನ ಕೆಲಬಲದವರ್ಗಳ್
ಪರಸಿರೆ ಪರಸಿರೆ ನೃಪೇಂದ್ರನಂ ನೀವೆನೆ ಮಂ
ದರಧೀರನಭಯರುಚಿ ನೃಪ
ವರ ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ ॥೧೨॥

# ೨. ಅಂಕ

**– ಚದುರಂಗ.**

ಆರುಗೆಲಸ ಮುಗಿಸಿ ಎತ್ತುಗಳನ್ನು ಹುಲ್ಲುಗಾವಲಿನಲ್ಲಿ ಮೇಯಲು ಬಿಟ್ಟಿದ್ದ ಅಂಕನಿಗೆ ಬಸವೇಗೌಡರ ಸತ್ತುಹೋದ ಹೋರಿಯ ನೆನಪೇ ಮತ್ತೆ ಮತ್ತೆ ಮರುಕಳಿಸುತ್ತಿತ್ತು. ಅವನ ತಂಗಿಯ ಲಗ್ನಕ್ಕಾಗಿ ಸಾಲ ಮಾಡಿ ಗೌಡರಲ್ಲಿ ಊಳಿಗಕ್ಕೆ ಸೇರಿದ ಒಂದೆರಡು ತಿಂಗಳಲ್ಲಿ ಗೌಡರು ಹೋರಿಯನ್ನು ಸಾಕಲು ಲಗತ್ತಾದ ಆಳು ಸಿಕ್ಕಿದನೆಂದು ಮುಡುಕುತೊರೆ ಜಾತ್ರೆಯಲ್ಲಿ ಒಂದು ಬೀಜದ ಹೋರಿಯನ್ನು ಕೊಂಡು ತಂದಿದ್ದರು. ರೂಪಾಯಿ ಬಣ್ಣದ, ಎತ್ತರದ ಹೋರಿ. ಯಾರಾದರೂ ಎದುರಾದರೆ ಸಾಕು ತನ್ನ ಚೂಪು ಕೊಂಬುಗಳನ್ನು ಮೇಲೆ ಮಾಡಿ, ಬುಸುಗುಡುತ್ತ, ಕೆಕ್ಕರಿಸಿದ ಕಣ್ಣುಗಳಿಂದ ಕೆಂಡಗಳನ್ನೆ ಸುರಿಸುತ್ತ ನಿಂತಾಗ ನೋಡಿದವರ ಎದೆ ಝಲ್ಲೆನ್ನಬೇಕು. ಆಗ ಗೌಡರಿಗೆ ಹಿಗ್ಗು. ಪಕ್ಕದ ಊರಿನ ತನ್ನ ವೈರಿ ಶಿವನೇಗೌಡರ ಹೋರಿಗಿಂತಲೂ ಮಿಗಿಲಾದ ಹೋರಿಯನ್ನು ತಂದಿರುವೆನೆಂದು ಮೀಸೆಯ ಮೇಲೆ ಕೈಯಿಡುವನು. ಆದರೆ ತಂದ ಒಂದು ವರ್ಷದಲ್ಲಿ ಅದು ಸತ್ತು ಹೋಗಿ ಗೌಡರು ಕೆಲ ಸಮಯ ಮಂಕುಗೊಂಡಿದ್ದರು. ಮುಂದಿನ ಆರು ತಿಂಗಳಲ್ಲಿ ಶಿವನೇಗೌಡರ ಆಳು ಪರಾರಿಯಾಗಿ ಹೋರಿಯನ್ನು ನೋಡಿಕೊಳ್ಳಲು ಸರಿಯಾದ ಆಳು ದೊರಕದೆ ಅವರು ಹೋರಿಯನ್ನು ಮಾರಿಬಿಟ್ಟಿದ್ದು ಗೌಡರಿಗೆ ಕೊಂಚ ಸಮಾಧಾನ ಕೊಟ್ಟಿತ್ತು. ಅವರು ಅಂಕನ ಸಂಗಡ ಅಂದಿದ್ದರು: "ನಮ್ಮ ಹೋರಿ ಸತ್ತೋದರೂ ಚಿಂತಿಲ್ಲ ಬುಡೋ ಅಂಕ, ಸದ್ಯಕ್ಕೆ ಶಿವನೇಗೌಡನ ಗೂಳಿ ಮಾರಾಟ ಆಯ್ತಲ್ಲ, ಅಷ್ಟೇ ಸಾಕು."

ಕಾವೇರುತ್ತಿದ್ದ ಬಿಸಿಲು ಅಂಕನ ಮುಖದಲ್ಲಿ ವ್ಯಾಪಕವಾಗಿದ್ದ ಸಿಡುಬಿನ ಕುಳಿಗಳಲ್ಲಿ ಸೂಜಿಯ ಮೊನೆಯಂತೆ ಚುಚ್ಚಲು ಆರಂಭಿಸಿ ಮೊದಲೇ ಅಂದವಲ್ಲದ ಅವನ ಮುಖವನ್ನು ಇನ್ನಷ್ಟು ವಿಕಾರಗೊಳಿಸಿತ್ತು. ಅಪ್ಪ ಬದುಕಿದ್ದಾಗ ಅಂಕನಿಗೆ ಯಾವುದಾದರೂ ಹೆಣ್ಣನ್ನು ಗಂಟು ಹಾಕಬೇಕೆಂದು ಎಲ್ಲಿಲ್ಲದ ಸಾಹಸ ಮಾಡಿದ. ಆದರೆ ಅಂಕನ ದುರದೃಷ್ಟಕ್ಕೆ ಹೆಣ್ಣು ಗಳು ಒಪ್ಪುವುದು ಹಾಗಿರಲಿ, ಅವನ ಮೋರೆ ನೋಡಿದೊಡನೆ ಆ ಹೆಣ್ಣುಗಳ ತಂದೆ ತಾಯಿಂದಿರೇ ಮುಖ ತಿರುಗಿಸಿ ನಡೆಯುತ್ತಿದ್ದರು. ಅಪ್ಪ ಸತ್ತ. ಅವನನ್ನು ಗುಡ್ಡಕ್ಕ ಹಾಕಿದ ಮೇಲಂತೂ ಆತನನ್ನು ಕ್ಯಾರೆ ಎನ್ನುವವರಿರಲಿಲ್ಲ. ತಂಗಿ ಅಂತ ಚೆಲುವೆ ಎಂದು ಹೇಳಲಾಗದಿದ್ದರೂ ಅಂಕನ ಹಾಗೆ ಕುರೂಪಿಯೇನಲ್ಲ. ತಕ್ಕಮಟ್ಟಿಗೆ ಲಕ್ಷಣವಂತೆ ಎಂದೇ ಹೇಳಬೇಕು. ಆ ಹಳ್ಳಿಯ ಮಂದಿ "ಈ ಅಣ್ಣ ತಂಗಿ ಇಬ್ಬರೂವೇ ಒಂದೇ ತಾಯಿ ಹೊಟ್ಟೆಲೆ ಹುಟ್ಟವ್ರೆ ಅಂತ ನಂಬೋದೆ ಎಕ್ಕಾಸ" ಎಂದು ಸಾಮಾನ್ಯವಾಗಿ ಅಣಕವಾಡುತ್ತಿದ್ದರು. ಅಂಕನ ಬೆನ್ನಿನ ಹಿಂದೆ ನಗೆಯಾಗಿ ಪುಟಿಯುತ್ತಿದ್ದ ಇಂಥ ಮಾತುಗಳು ಒಮ್ಮೊಮ್ಮೆ ಅಂಕನಿಗೂ ಅರಿವಾಗಿ, ಅವನಿಗೆ ತಾಳಲಾರದಷ್ಟು ಯಾತನೆಯಾಗುತ್ತಿದ್ದುದುಂಟು. ಜತೆಗೆ ಅಂಕನದು ದೈತ್ಯಾಕಾರವಾದ್ದರಿಂದ ಊರಿನ ಹೆಂಗಸರು ತಮ್ಮ ಮಕ್ಕಳು ರಚ್ಚೆ ತೆಗೆದಾಗ "ಅಂಕ ಬತ್ತಾವ್ನೆ" ಅಂತ ಬೆಚ್ಚಿಸಿ ಅವು ಅಳು ನಿಲ್ಲಿಸುವಂತೆ ಮಾಡುತ್ತಿದ್ದರು!

ಇದರಿಂದಾಗಿ ತಂದೆ ತಾಯಿಯರನ್ನು ಕಳೆದುಕೊಂಡಿದ್ದ ಅಂಕ ಆ ಊರಿನಲ್ಲಿ ಒಬ್ಬೊಂಟಿಯಾಗೇ ಕಾಲ ನೂಕುವಂತಾಗಿತ್ತು. ಅವನ ತಂಗಿ ಗಂಡನ ಮನೆಯಿಂದ ತನ್ನ ಕೂಸಿನೊಂದಿಗೆ ಬಂದು ಕೆಲವು ದಿನ ಜತೆಗಿದ್ದಾಗ ಮಾತ್ರ ಅವನೊಳಗೆ ಜೀವರಸ ತುಂಬುವುದು. ಊರಿನ ಜನ ಅವನನ್ನು ಗೇಲಿ ಮಾಡಿ ಹಿಂಸಿಸಿದ ದಿನವೇ ಅಪರೂಪ ಎನ್ನಬಹುದು. ಜನ ಸಂಪರ್ಕ ಕಡಿಯುತ್ತ ಹೋದಂತೆ ಅವನು ಹೆಚ್ಚು ಅಂತರ್ಮುಖಿಯಾಗಿದ್ದ. ಯಾರಾದರೂ ಮಾತನಾಡಿಸಿದರೆ ಸಾಮಾನ್ಯವಾಗಿ ಅವನು ಬಾಯಿ ತೆರೆಯದೆ ಮೌನವಾಗಿರುತ್ತಿದ್ದ. ಒಂದು ವೇಳೆ ಉತ್ತರ ರೂಪವಾಗಿ ಬಾಯಿ ಬಿಚ್ಚಿದರೂ ಅದು ಒಂದು ಮಾತು, ಅರ್ಧ ಮಾತಿನಲ್ಲಿ ಮುಕ್ತಾಯಗೊಳ್ಳುವುದು. ಇದರಿಂದ "ಹಣೆಯಿಂದಾದ್ರೂವೆ ಚಿನ್ನ ತಗೀಬೌದು. ಈ ಪುಣ್ಯಾತ್ಮನಿಂದ ಮಾತ್ರ ಮಾತು ಹೊರಡಿಸೋದು ಯಾವ ರುಸ್ತುಮನಿಂದ್ಲೂ ಸಾಧ್ಯ ಆಗಕಿಲ್ಲ" ಎಂದು ಜನ ಆಡಿಕೊಳ್ಳುವಂತಾಗಿತ್ತು. ಜನರ ಜತೆ ಇದ್ದಾಗ ಅದು ಬೆಳಗಿನ ವೇಳೆಯಾಗಿದ್ದರೆ ಅವನು ಅವರ ಮಾತುಕತೆಯಲ್ಲಿ ಆಸಕ್ತಿ ತೋರದೆ, ದೃಷ್ಟಿಯನ್ನು ಮೇಲೆತ್ತಿ ಚಲಿಸುವ ಮೋಡಗಳನ್ನೇ ನಿಟ್ಟಿಸುತ್ತ ಕೂರುವನು. ರಾತ್ರಿಯ ವೇಳೆಯಾದರೆ ಆಕಾಶದಲ್ಲಿ ಹೊಳೆಯುವ ಚುಕ್ಕಿಗಳತ್ತ ಅವನ ನೋಟ. ಇದನ್ನು ಗಮನಿಸಿದ ಊರಿನ ಪುಂಡ ಪೋಕರಿಗಳು ಬೆಳಗಿನ ಸಮಯ ಆತ ಸಿಕ್ಕಿದರೆ "ಮ್ಯಾಡ" ಎಂದು ತೀಟೆ ಮಾಡುವರು. ರಾತ್ರಿಯ ಸಮಯವಾದರೆ "ಚುಕ್ಕಿ" ಎನ್ನುವರು.

ಆದರೆ ಬೇಸಾಯ ಮತ್ತಿತರ ಕೆಲಸ ಕಾರ್ಯಗಳಲ್ಲಿ ಆತ ತೋರುತ್ತಿದ್ದ ಅಪಾರ ಶ್ರದ್ಧೆ ಹಾಗೂ ಕಸಬುಗಾರಿಕೆ ಊರಿನ ಹತ್ತೂ ಸಮಸ್ತರ ಗುಪ್ತ ಗೌರವಕ್ಕೆ ಪಾತ್ರವಾಗಿತ್ತು. "ಬಾಕಿ ಇಚಾರ ವಕ್ಕಡೀಕೆ ಇರ್ಲಿ. ಅವ್ನು ಉಳೋದ ನೋಡ್ಲ ಅಪ್ಪಯ್ಯ. ಅದೇನು ಸೋಕಿಯಾಗಿ ಉಳ್ತಾನೆ. ನೇಗಿನ ತೆರೆ ಹೊಡೆಯೋನಾಗ, ಗುಳಾವ ನೆಲದಲ್ಲಿ ಅಷ್ಟು ನಾಟಾಗಿ ಇಳಿಸ್ಕಂಡು ಭೂಮಿ ಕೆರೆಯೋನು ಈ ಊರಲ್ಲಿ ಯಾವ ಬಡ್ಡಿ ಹೈದ ಇದ್ದಾನು ತೋರ್ಸು" ಎಂದು ಮೆಚ್ಚಿ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದರು.

ಆದರೆ ಅಂಕ ಇದ್ಯಾವುದನ್ನೂ ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡವನಲ್ಲ. ಬೇರೊಂದು ಬಗೆಯ ಚಿಂತೆ ಗಾಢವಾಗಿ ಅವನ ಮನಸ್ಸನ್ನು ಕೊರೆಯುತ್ತಿತ್ತು. ಅದು ಅವನ ಬೆಳ್ಳಿ ಲಿಂಗದ ಕಾಯಿಗೆ ಸಂಬಂಧಪಟ್ಟಿದ್ದು. ಅವನ ಹದಿನೆಂಟನೆಯ ವಯಸ್ಸಿನಲ್ಲಿ ಅವನ ತಂದೆ ಊರಿನ ಕುಶಲ ಅಕ್ಕಸಾಲಿಗ ವೀರಾಚಾರಿಯಿಂದ ಆ ಬೆಳ್ಳಿ ಕರಡಿಗೆಯನ್ನು ಮಾಡಿಸಿ, ಮಠಾಧೀಶರಿಂದ ವಿಧಿಪೂರ್ವಕ ಕೊಡಿಸಿದ್ದರು. ಮಾಟವಾದ ದಢೂತಿ ಬೆಳ್ಳಿ ಕರಡಿಗೆ ಅದರೊಳಗೆ ಶೋಭಿಸುವ ಕಪ್ಪು ಲಿಂಗ. ಆ ಬೆಳ್ಳಿ ಕರಡಿಗೆ ಅವನ ಕೊರಳಿನಿಂದ ಜೋತು ಬಿದ್ದು ಎದೆಯ ಮೇಲೆ ಒರಗಿದಾಗ ಅಂಕನಿಗೆ ಎಲ್ಲಿಲ್ಲದ ಹುಮ್ಮಸ್ಸು. ಈಗ ಅದೇ ಮಾಯವಾಗಿದೆ. ಅದರ ಸ್ಥಳದಲ್ಲಿ ಇರುವುದು ಒಂದು ಸಾಮಾನ್ಯ ಕೆಂಪು ಚೌಕುಳಿ ವಸ್ತ್ರದಲ್ಲಿ ಸುತ್ತಿಕಟ್ಟಿರುವ ಲಿಂಗ!

ಆ ಬೆಳ್ಳಿ ಲಿಂಗದ ಕಾಯಿ ಹೇಗೆ ಕಳೆದು ಹೋಯಿತೆನ್ನುವುದು ಇಂದಿಗೂ ಗೂಢವಾಗಿಯೇ ಉಳಿದಿದೆ. ಆ ದಿನಗಳಲ್ಲಿ ಗಂಡನ ಮನೆಯಿಂದ ತಂಗಿ ಬಂದಿದ್ದಳು. ಆ ದಿನ ಶನಿವಾರ, ಪ್ರತಿ ಶನಿವಾರ ಆ ಊರಿನ ಮುಖ್ಯ ಬೀದಿಗಳಲ್ಲಿ ಶನಿದೇವರ ಮೆರವಣಿಗೆ ವೇಳೆಗೆ ಒಂಬತ್ತು ಒಂಬತ್ತುವರೆಯ ಗಂಟೆಯ ಸಮಯಕ್ಕೆ ಶನಿಕಥೆ ಓದಿಸುವುದು ವಾಡಿಕೆ: ಆ ಪ್ರಕಾರ ಅಂದಿನ ಸಂಜೆಯೂ ಗಾಲಿಗಳ ಮೇಲೆ ಸಿದ್ಧಪಡಿಸಿದ ರಥದ ಮಂಟಪದೊಳಗೆ ನೀಲಿ ವರ್ಣದ ಶನಿರಾಜ ವಿರಾಜಮಾನನಾಗಿದ್ದ.

ಮುಂಭಾಗದಲ್ಲಿ ಅವನ ವಾಹನ ಕಾಕ ರಾಜನ ಮೂರ್ತಿ, ಶನೇಶ್ವರ ವಿಗ್ರಹವನ್ನು ಕಣಿಗಿಲೆ, ತುಳಸಿ ಮಲ್ಲಿಗೆ ಹಾರಗಳೇ ಅಲ್ಲದೆ, ಅಲ್ಲಲ್ಲಿ ಕೆಂಪು ದಾಸವಾಳ ಹೂಗಳನ್ನಿಟ್ಟು ಅಲಂಕರಿಸಿದ್ದರು.

ಅಂಕನ ತಂಗಿ ಜವನಿಗೆ ಶನಿದೇವರೆಂದರೆ ಬಹಳ ಭಕ್ತಿ, ಹಟ್ಟಿಯ ಮುಂದೆ ಬಿಜಯ ಮಾಡಿದ ಶನಿದೇವರಿಗೆ ಹಣ್ಣುಕಾಯಿ ಮಾಡಿಸಿದ್ದೇ ಅಲ್ಲದೆ, ತನ್ನ ಕೂಸನ್ನು ಅಣ್ಣನ ಪಕ್ಕದಲ್ಲಿ ಉರುಳು ಹಾಕಿ ಶನಿಕಥೆ ಕೇಳಲು ಗುಡಿಗೆ ತೆರಳಿದ್ದಳು. ಅವಳು ಮನೆಗೆ ಮರಳುವಾಗ ಮಧ್ಯರಾತ್ರಿ ಬಂದವಳೇ ತಾನೊಂದು ಚಾಪೆ ಹಾಸಿ, ಕೂಸನ್ನು ತನ್ನ ಪಕ್ಕದಲ್ಲಿ ಮಲಗಿಸಿಕೊಂಡು, ತಾನೂ ಕಣ್ಣು ಮುಚ್ಚಿ ನಿದ್ರಾವಶಳಾದಳು.

ಮಾರನೆಯ ದಿನ ಬೆಳಿಗ್ಗೆ ಎದ್ದಾಗ, ಮೈಮೇಲಿನ ಲಿಂಗದ ಕಾಯಿ ಕಾಣದೆ ಅಂಕ ಹೌಹಾರಿದ. “ಜವನಿ, ನಾತ್ರೆ ನಾ ಮನಗಿದ್ದಾಗ ಯಾರೋ ಬಡ್ಡಿ ಹೈಕಳು ನನ್ನ ಲಿಂಗದ ಕಾಯ ಹಾರಿಸ್ಕಂಡು ಹೋಗ್ರವೆ” ಎಂದು ತಂಗಿಯ ಸಂಗಡ ಹೇಳಿಕೊಂಡು ಪೇಚಾಡಿದ. “ನಿಂಗೆ ಅದ್ಯಂತ ದೈಯ್ಯನಿದ್ದೆ. ನಿನ್ನ ಲಿಂಗದ ಕಾಯ ಕಸಗಂಡು ಹೋಗೋವನ್ನೂ, ಎಚ್ಚರಾನೆ ಆಗಬ್ಯಾಡದಾ ನಿಂಗೆ” ಎಂದು ಆಕ್ಷೇಪಿಸಿ, “ಸಮಾಸು, ಊರಿನ ಪಂಚಾತಿಗಾರೂ ನ್ಯಾಯ ಒಪ್ಪು ನೋಡಾನಾ, ಈ ಊರಿನೋರೆ ಯಾರೋ ಪಟಿಂಗರು ಈ ಕೆಲ್ಸ ಮಾಡಿರಬೌದು” ಎಂದು ಸಲಹೆಯಿತ್ತಳು.

ತಂಗಿಯ ಸಲಹೆಯ ಮೇರೆಗೆ ಅಂಕ ಪಂಚಾಯತಿಗೆ ನ್ಯಾಯವನ್ನೇನೋ ಒಪ್ಪಿಸಿದ. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. “ಅಲ್ಲಕನೋ ಅಂಕ, ನಿನ್ನಲಿಂಗದ ಕಾಯ ಈ ರಾತ್ರೇನೇ ಯಾರೋ ಕದ್ದಿದ್ದಾರೆ ಅನ್ನೋ ಮಾತ ಹೆಂಗೆ ಒಪ್ಪೋದು? ನಿಂಗೋ ಯಮನಿದ್ದೆ. ಎಲ್ಲಿ ಅಂದ್ರೆ ಅಲ್ಲಿ ಮನಗಿ ಮೈ ಮರೀತಿ. ಹಂಗೆ, ಹೊಲದ ಹತ್ತಿರವೊ, ತ್ವಾಟದ ಬಾಜೂನಲ್ಲೊ, ಗದ್ದೆ ಸಮೀಪನೊ, ನೀನು ನಿದ್ದೆ ಮಾಡ್ತಿರೋವಾಗ, ಪರ ಊರಿನೋರು ಯಾರಾರು ಯಾಕೆ ಬಿಚ್ಚಿಕಂಡಿರಬಾರದು? ಎಂದು ಪಂಚಾಯಿತಿ ಯೋರು ಪ್ರಶ್ನೆ ಎತ್ತಿದಾಗ, ಅಂಕನಿಗೆ ಸಮರ್ಪಕವಾದ ಯಾವ ಉತ್ತರವೂ ಹೊಳೆಯಲಿಲ್ಲ.”

ಹುಲ್ಲುಗಾವಲಿನಲ್ಲಿ ಮೇಯುತ್ತಿದ್ದ ಎತ್ತುಗಳನ್ನು ಕೆರೆಗೆ ಅಟ್ಟಿಕೊಂಡು ಹೋಗಿ ನೀರು ಕುಡಿಸಿ ತಂದು ಕಟ್ಟಿ ನೆಲಕ್ಕೆ ಸಣ್ಣ ಗೂಟಗಳನ್ನು ಜಡಿದು, ಅಂಕ ಅವನ್ನು ಆ ಗೂಟಗಳಿಗೆ ಕಟ್ಟಿಹಾಕಿದ. ಎತ್ತುಗಳು ಹಾಗೆ ನೆಲಕ್ಕೆ ಒರಗಿ, ಮೆಲುಕು ಹಾಕುತ್ತ ನಿದ್ದೆ ಹೋದವು.

ಎತ್ತುಗಳೇ ನಿದ್ದೆ ಹೋದುವೆಂದರೆ ನಿದ್ದೆ ಮಾಡುವುದಕ್ಕೆ ಹುಟ್ಟಿದಂತಿದ್ದ ಅಂಕನನ್ನು ಕೇಳಬೇಕೆ? ನಿಂತಂತೆಯೇ ಅವನ ಕಣ್ಣುಗಳು ಬಾಡಿದವು. ಯಾವುದಾದರೂ ಮರದ ನೆರಳಿಗೆ ಹೋಗುವಷ್ಟು ಎಚ್ಚರವೂ ಅವನಲ್ಲೀಗ ಉಳಿದಿರಲಿಲ್ಲ. ಹೇಗೋ ತೂರಾಡುತ್ತ ಸಮೀಪದಲ್ಲೇ ಇದ್ದ ಹುಣಿಸೇ ಮರವನ್ನು ಸೇರಿ, ಅದರ ಕೆಳಗೆ ಮೈ ಚೆಲ್ಲಿ ಮಲಗಿದ.

ಅಂಕ ಎಂದೂ ಹುಣಿಸೇ ಮರದ ಕೆಳಗೆ ಮಲಗಿದ್ದಿಲ್ಲ. ಆ ಮರದಲ್ಲಿ ಬ್ರಹ್ಮ ರಾಕ್ಷಸ ವಾಸವಾಗಿರುವುದೆಂದು ಪ್ರತೀತಿ ಇದ್ದುದರಿಂದ, ಅದರ ಕೆಳಗೆ ಮಲಗಲು ಹೆದರುತ್ತಿದ್ದ. ಸಾಮಾನ್ಯವಾಗಿ ಅವನು ಮಲಗುತ್ತಿದ್ದುದು ಅನತಿ ದೂರದಲ್ಲಿದ್ದ ಹಲಸಿನ ಮರದ ಕೆಳಗೆ ಹಿಂದಿನ ರಾತ್ರಿ ಊರಿನಲ್ಲಿ

ತೊಗಲು ಬೊಂಬೆ ಆಟ ನಡೆದಿದ್ದುದರಿಂದ, ಅವನಿಗೆ ಇಂದು ತೂಕಡಿಕೆ ಹೆಚ್ಚಿ ಹಲಸಿನ ಮರದ ಹತ್ತಿರ ಹೋಗುವಷ್ಟು ತಾಳ್ಮೆಯಿಲ್ಲದೆ, ಹುಣಿಸೇ ಮರದ ಕೆಳಗೆ ವಿರಮಿಸಿದ್ದು. ಅವನು ಮಲಗುವಾಗ ಆಳದಲ್ಲಿ ತಾನು ಹುಣಿಸೇ ಮರದ ಕೆಳಗೆ ಮಲಗುತ್ತಿರುವೆನೆಂಬ ಅರಿವು ಆಗದೇ ಇರಲಿಲ್ಲ. ಆದರೆ ಆ ಹಂತದಲ್ಲಿ ಬ್ರಹ್ಮ ರಾಕ್ಷಸನ ಭೀತಿಗಿಂತಲೂ ನಿದ್ದೆಯ ಸೆಳವೇ ಪ್ರಬಲವಾಗಿದ್ದುದರಿಂದ, ನಿರ್ವಾಹವಿಲ್ಲದೆ ನಿದ್ದೆಯಲ್ಲಿ ವಿವಶನಾಗಿದ್ದ.

ಕೊಂಟಿನ ಹಾಗೆ ಬಿದ್ದಿದ್ದ ಅಂಕ, ತನ್ನ ಶರೀರವನ್ನು ದೀರ್ಘವಾಗಿ ನೀಡಿ, ಅಂಗಾತ ಮಲಗಿ ನಿದ್ದೆ ಹೋಗಿದ್ದ. ಸೊಂಟದ ಕೆಳಭಾಗದಲ್ಲಿ ದಟ್ಟಿಪಂಚೆ ಸುತ್ತಿದ್ದ ಅವನು, ಸೆಕೆ ತಾಳಲಾರದೆ, ಕವಚವನ್ನು ಬಿಚ್ಚಿ, ಅದನ್ನು ತಲೆದಿಂಬು ಮಾಡಿ ಮಲಗಿದ್ದುದರಿಂದ ಅವನ ಸೊಂಟದ ಮೇಲ್ಭಾಗದ ದೇಹವೆಲ್ಲ ನೆಳಲು, ಗಾಳಿಗಳ ತಂಪಿಗೆ ಒಡ್ಡಿಕೊಂಡಂತಿತ್ತು.

ಅಂಕ ಮಲಗಿದ್ದಂತೆ ಗೌಡರು ತಮ್ಮ ಎರಡನೇ ಮಗಳು ಗಿರಿಜಮ್ಮನೊಡನೆ ಊರಿನ ಕಡೆಯಿಂದ ಸಂಪಿಗೆ ಮರದ ಓಣಿಯಲ್ಲಿ ನಡೆದು ಬರುತ್ತಿದ್ದರು. ಬಸವೇಗೌಡರಿಗೆ ನಾಲ್ವರು ಹೆಣ್ಣು, ಇಬ್ಬರೂ ಗಂಡು ಮಕ್ಕಳಿದ್ದರು. ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬ ವಿದ್ಯಾವಂತನಾಗಿ ದೂರದ ಊರಿನಲ್ಲಿ ಕಾಲೇಜು ಅಧ್ಯಾಪಕನಾಗಿದ್ದೂ, ಇನ್ನೊಬ್ಬ ಎಸ್.ಎಸ್.ಎಲ್.ಸಿ ದಾಟಲಾರದೆ ಹೋದದ್ದು ಗೌಡರಿಗೇನೂ ವ್ಯಥೆಯನ್ನುಂಟುಮಾಡಿರಲಿಲ್ಲ. ತಮಗೂ ವಯಸ್ಸಾಗುತ್ತಿದ್ದುದರಿಂದ ತಮ್ಮ ಆಸ್ತಿಯ ಮೇಲುಸ್ತುವಾರಿ ನೋಡಿಕೊಳ್ಳಲು ಇನ್ನೊಬ್ಬರ ಸಹಾಯ ಅಗತ್ಯವಾಗಿತ್ತು. ಆದ್ದರಿಂದಲೇ ಎರಡನೇಯ ಮಗ ನಪಾಸಾದದ್ದು ಒಳ್ಳೆಯದೇ ಆಯಿತು ಎಂದುಕೊಂಡರು. ಆದರೆ ಆ ತರುಣ ಒಂದೆರಡು ವರುಷ ತಂದೆಗೆ ಸಹಾಯಕನಾಗಿದ್ದವನು ರಾಜಕೀಯ ಸುಳಿಗೆ ಸಿಕ್ಕಿ, ಹೆಚ್ಚು ವೇಳೆಯನ್ನು ಪೇಟೆಯಲ್ಲಿ ಕಳೆಯತೊಡಗಿದ್ದು ಗೌಡರಿಗೆ ದೊಡ್ಡ ಆಘಾತವಾಗಿತ್ತು. ನಾಲ್ವರು ಹೆಣ್ಣು ಮಕ್ಕಳಲ್ಲಿ ಮೂವರಿಗೆ ಲಗ್ನವಾಗಿ ಗಂಡಂದಿರ ಮನೆ ಸೇರಿದ್ದರು. ಎರಡನೆಯವಳಾದ ಗಿರಿಜೆಯನ್ನು ಸಹ ಗೌಡರು ಅನುಕೂಲಸ್ಥರ ಮನೆಗೆ ಲಗ್ನ ಮಾಡಿಕೊಟ್ಟಿದ್ದರು. ಆದರೆ ಅವಳ ಅತ್ತೆ ಮಾವಂದಿರ ತೀರದ ಹಣದ ದಾಹಕ್ಕೆ ಬಲಿಯಾಗಿ ತನ್ನ ತೌರಿಗೆ ಮರಳಿದ್ದಳು. ಮೊದಮೊದಲು ಮಗಳಿಗೆ ಬಂದ ದುರ್ದೆಶೆಗೆ ಪರಿತಪಿಸಿದ್ದರು. ಈಚೀಚೆಗೆ ಅವರ ಆಸ್ತಿಯನ್ನೂ ನೋಡಿಕೊಳ್ಳುವತ್ತ ಆಕೆ ವಹಿಸುತ್ತಿದ್ದ ಮುತುವರ್ಜಿಯನ್ನು ಗಮನಿಸಿ, “ಇಂಥ ಹೆಣ್ಣ ಬಾಳಿಸಿಕೊಳ್ಳೋಕ್ಕೆ ಆ ಮುಂಡೇ ಮಕ್ಕಳಿಗೆ ಲಭ್ಯ ಇಲ್ಲ” ಎನ್ನುವರು. “ಬುಡ್ಲ, ಇದ್ದೂ ಒಂದು ಗಂಡು ಮಗ ಅಂತ ಸಾಕ್ತಿನಿ. ನಮಗಿರೋ ಆಸ್ತಿಗೆ ಇದೊಂದು ಜೀವ ಭಾರವಾ?” ಎಂದು ವಾರಿಗೆಯವರಿಗೆ ಹೇಳುವರು.

ಗೌಡರು ಗಿರಿಜೆಯೂ ಅಂಕ ಮಲಗಿದ್ದ ಜಾಗಕ್ಕೆ ಬರುವ ಹೊತ್ತಿಗೆ, ಅಲ್ಲಿ ಒಂದು ವಿಶೇಷ ನಡೆದಿತ್ತು. ಒಂದು ಗೋಧಿ ನಾಗರಹಾವು ಹುಣಿಸೇಮರದ ಬುಡದಿಂದ ಹರಿದು ಬಂದು ಅಂಕನ ಹೊಟ್ಟೆಯ ಮೇಲೇರಿ, ಹೊಕ್ಕಳಿನ ಸುತ್ತ ತೆಕ್ಕೆ ಹಾಕಿ ಮಲಗಿತ್ತು. ಅವನ ದೇಹದ ಆ ಭಾಗ ಅದಕ್ಕೆ ತಣ್ಣಗೆ ಹಿತವಾಗಿರಬೇಕು. ಹಾಗೇ ಮಲಗಿದ್ದು ತಲೆಯೆತ್ತಿ ನೋಡಿತು. ಅಂಕನ ಎದೆಯ ಮೇಲೆ ರೋಮ ಹೊಡೆ ಹೊಡೆಯಾಗಿ ಬೆಳೆದಿತ್ತು. ಸರ್ಪಕ್ಕೆ ಅದು ಹುಲ್ಲು ಎಂಬ ಭಾವನೆ ಬಂದಿರಬೇಕು. ಅದು ತನ್ನ ತಲೆಯನ್ನು ಆ ಕೂದಲಿನ ಹೊಡೆಯೊಳಗೆ ತೂರಿ ಆಟವಾಡಲು ಪ್ರಾರಂಭಿಸಿತು.

ಹಾವು ಹೊಟ್ಟೆಯ ಮೇಲೆ ಮಲಗಿದಾಗಲೂ ಅಂಕನಿಗೆ ಎಚ್ಚರವಾಗಿರಲಿಲ್ಲ. ಈಗ ಎದೆಯ ಕೂದಲಿನಲ್ಲಿ ಹೆಡೆಯಾಡುವಾಗ, ಗುರುಗುಟ್ಟಿದಂತಾಗಿ, ಕಣ್ಣು ತೆರೆದ. ಮೈ ಮೇಲೆ ಸರಸವಾಡುತ್ತಿದ್ದ ಹಾವನ್ನು ಕಂಡು ನಡುಗಿದ. ಹಾಗೆ ನಡುಗಿದಾಗ ಅವನ ದೇಹ ಅಲುಗಾಡಿತು. ಆ ಕಂಪನಕ್ಕೆ ಹಾವು ಹೆಡೆ ಬಿಚ್ಚಿತು. ಇದು ಹಾವೋ ಬ್ರಹ್ಮ ರಾಕ್ಷಸನೋ ಎಂಬ ಸಂದಿಗ್ಧದಲ್ಲಿ ಅವಕ್ಕಾದ ಅಂಕ; ಹಾವಿನ ಹೆಡೆಯನ್ನೇ ಕಣ್ಣು ಮಿಟುಕಿಸದೆ ನೋಡಿದ. ಹಾವು ಕೂಡ ತನ್ನ ಹೆಡೆಯನ್ನು ಅತ್ತ ಇತ್ತ ಆಡಿಸುತ್ತ ಅಪಾಯ ಸಂಭವಿಸಿದರೆ ಮೇಲೆಗರಲು ಸಿದ್ಧತೆ ಮಾಡಿದಂತಿತ್ತು. ಅಂಕ ಹಾವಿನ ಹೆಡೆಯನ್ನೇ ನೋಡನೋಡುತ್ತಿರುವಂತೆ ಭೀತಿಯಿಂದ ಕಣ್ಣೆವೆಗಳು ಮುಚ್ಚಿಕೊಂಡವು. ದೇಹ ಸಣ್ಣಗಾಗಿ ಮರಗಟ್ಟಿ ನಿಶ್ಚೇಷ್ಟಿತವಾಯಿತು. ಈಗ ಹಾವಿಗೆ ಏನನ್ನಿಸಿತೋ, ಅವನ ಹೊಕ್ಕಳಿನ ಸುತ್ತ ಸಿಂಬಿಯಾಗಿದ್ದ ತನ್ನ ದೇಹದ ಮೇಲೆ ಮುಖವಿಟ್ಟು ತೆಪ್ಪಗೆ ವಿರಮಿಸಿತು.

ಅಂತರಂಗದ ಆಳದಲ್ಲಿ ಅಂಕನ ಮನಸ್ಸು ಅಂಕೆ ತಪ್ಪಿ ಹರಿದಾಡಿತು. ಸೆಖೆಯ ಕಾಲದಲ್ಲಿ ತನ್ನ ತಂಗಿಯ ಪಕ್ಕಕ್ಕೆ ಬೆತ್ತಲೆ ಮಲಗಿದ ಕೂಸು ತೆವಳುತ್ತ ಬಂದು ತನ್ನ ಕಿಬ್ಬೊಟ್ಟೆಯ ಮೇಲೇರಿ ಮೆದುವಾಗಿ ಮಲಗುತ್ತಿದ್ದ ಸನ್ನಿವೇಶ ಅನಾವರಣಗೊಂಡಿತ್ತು.

ಹುಣಿಸೇ ಮರವನ್ನ ಸಮೀಪಿಸಿದ ಗೌಡರೂ ಗಿರಿಜೆಯೂ ತಮ್ಮ ಕಣ್ಣನ್ನು ತಾವೇ ನಂಬಲಾರದೆ ಬೆರಗಾಗಿ ನಿಟ್ಟಿಸುತ್ತ ನಿಂತರು. ಹಾವು ಅಂಕನನ್ನ ಕಚ್ಚಿ ಕೊಂದುಹಾಕಿದೆ ಎಂಬುದೇ ಅವರ ಮನದಲ್ಲಿ ತಟ್ಟನೆ ಸುಳಿದ ಆಲೋಚನೆ!

ಹಾವು ಅವರಿಬ್ಬರನ್ನು ಸೂಕ್ಷ್ಮವಾಗಿ ಗಮನಿಸಿರಬೇಕು. ಅದು ಅಂಕನ ಕಿಬ್ಬೊಟ್ಟೆಯಿಂದ ಇಳಿದು ಸರಸರನೆ ಹುಣಿಸೇ ಮರದತ್ತ ಹರಿದು ಹೋಯಿತು.

ಗೌಡರು ಆತುರ ಕಾತರಗಳಿಂದಲೇ ಅಂಕನ ಬಳಿಸಾರಿ, ಕಿಬ್ಬೊಟ್ಟೆ, ಎದೆ, ಕೈಗಳನ್ನೆಲ್ಲ ಪರೀಕ್ಷಿಸಿದರು. ಯಾವಭಾಗದಲ್ಲೂ ಗಾಯದ ಕುರುಹಾಗಲಿ, ರಕ್ತದ ಕಲೆಯಾಗಲಿ ಕಾಣಿಸಲಿಲ್ಲ. ಅವನ ಮೂಗಿನ ಹೊಳ್ಳೆಗಳಿಗೆ ಕೈಯೊಡ್ಡಿ ನೋಡಿದರು. ಉಸಿರಾಟ ನಡೆದೇ ಇತ್ತು. ದೇಹವು ಬೆಚ್ಚಗಿತ್ತು. ಆಸಾಮಿ ಬದುಕಿದ್ದಾನೆಂದು ಖಾತರಿ ಮಾಡಿಕೊಂಡರು. ಗಿರಿಜೆಯನ್ನು ಉದ್ದೇಶಿಸಿ, "ಸದ್ಯ, ಈ ಅಂಕ ಸತ್ತಿಲ್ಲ ಗಿರಿಜ. ಇವನೊಬ್ಬ ಇರೋದು ಹತ್ತಾಳಿನ ಬಲ ನನಗೆ" ಅಂದೋರು, ಅಂಕನನ್ನು ಚುಚ್ಚಿ ಎಬ್ಬಿಸುತ್ತ, "ಅಂಕ ಅಂಕ... ಏಳೋ, ಏಳೋ... ಇದ್ಯಾವ ದೈಯ್ಯನಿದ್ದೆಯೋ ನಿನಗೇ... ಹಾವು ಮೈ ಮೇಲೆ ಮನಗಿದ್ರೂವೆ ಗ್ಯಾನಪಾನವೆ ಇಲ್ಲವಲ್ಲೊ!" ಎಂದರು. ಯಾವುದೋ ಲೋಕದಿಂದ ಎದ್ದು ಬಂದವನಂತೆ ಎಚ್ಚರಗೊಂಡ ಅಂಕನ ದೃಷ್ಟಿ ಮೊದಲು ಹರಿದಿದ್ದು ತನ್ನ ಕಿಬ್ಬೊಟ್ಟೆಯ ಕಡೆಗೆ, ಅಲ್ಲಿ ಹಾವಿಲ್ಲವೆಂದು ಖಚಿತಗೊಂಡ ಬಳಿಕ ಮೆಲ್ಲನೆ ಎದ್ದು ನಿಂತ.

"ಹಿಂಗೇ ತಾನೆ ನೀನು ಲಿಂಗದ ಕಾಯಿ ಕಳಕಂಡಿರೋದು!" ಎಂದು ಗೌಡರು ನಗೆಯಾಡಿದರು. ಯಾವುದೋ ಹೆಂಗಸು ಕಿಸಕ್ಕನೆ ನಕ್ಕಂತಾಯಿತು. ಅಂಕ ತಲೆ ತಗ್ಗಿಸಿ ನಿಂತಿದ್ದುದರಿಂದ ಗೌಡರ ಮಾತುಗಳು ಮಾತ್ರ ಅವನ ಕಿವಿಯೊಳಗೆ ಹೊಕ್ಕಿದ್ದು, ಗೌಡರೊಬ್ಬರೆ ಅಲ್ಲಿ ಬಂದು ನಿಂತಿರುವರೆಂದು

ಭಾವಿಸಿದ್ದ. ತಲೆಯೆತ್ತಿ ನೋಡಿದಾಗ, ಅವನ ಬೆನ್ನಹಿಂದೆ ನಿಂತಿದ್ದ ಗಿರಿಜೆ ಕಣ್ಣಿಗೆ ಬಿದ್ದು, ನಾಚಿ ಹಿಡಿಯಾದ. "ಆ ಹಾವು ಕಪ್ಪೆ ನುಂಗಿರಬೇಕು!" ಎಂದು ವ್ಯಾಖ್ಯಾನ ಮಾಡಿದಳು ಗಿರಿಜೆ.

ಅಂತೂ ತಮ್ಮ ಕಣ್ಣು ಮುಂದೆಯೇ ನಡೆದು ಹೋದ ವಿಚಿತ್ರ ಘಟನೆ ಆ ಮೂವರ ಮನವನ್ನು ಕಲಕಿತ್ತು. ಅದೇ ಗುಂಗಿನಲ್ಲಿ ಅಲ್ಲಿಂದ ಹೆಜ್ಜೆ ಕಿತ್ತರು. ಬಹು ಬೇಗ ಆ ಸಂಗತಿಯನ್ನು ಮರೆತು ಬೇರೆ ಯೋಚನೆಯಲ್ಲಿ ತೊಡಗಲು ಸಾಧ್ಯವಾದದ್ದು ಗೌಡರೊಬ್ಬರಿಗೆ, ಅಂಕನನ್ನು ಉದ್ದೇಶಿಸಿ.

"ಅಂಕ, ನೀನೊಂದು ಭಾರಿ ಗಂಡಾಂತರದಿಂದ ಪಾರಾದೆ ಬುಡು. ಹಾವು ಮೈ ಮ್ಯಾಲೆ ಬಂದ್ರೂವೆ, ಅದು ಕಚ್ಚದೆ ಹೋಗಿರೋದು ನಿನ್ನ ಅದ್ರಷ್ಟ ಅಲ್ಲವಾ? ಇಂತೋವೆಲ್ಲ ಬದುಕ್ನಲ್ಲಿ ನಡೀತಾ ಇರ್ತವೆ. ಇವನ್ನೇ ಒಂದು ಬ್ರಹ್ಮರಾಕ್ಷಸ ಮಾಡಿ, ಸುಮ್ಮಕೆ ಕುಂತರೆ ಆದತಾ?" ಎಂದು ತಮ್ಮ ಹೇಳಿ,

"ನನ್ನ ಸಿನೇಯಿತ ಕಾಗದ ಬರೆದವ್ನೆ– ನಮ್ಮ ಊರಲ್ಲಿ ಒಂದು ಪರಮಾಶಿ ಹೋರಿ ಅದೆ; ಒಂದೇ ಗಂಟ್ನಲ್ಲಿ ಹಣ ಕೊಡೋದಾದ್ರೆ, ಯಾಪಾರ ಕುದುರಿಸಬೌದು, ಅಂತ... ಅದಕ್ಕೆ ಈವೊತ್ತು ಸಂಜೆಗೆ ಮೂಡ್ಲಾಗೆ ಹೊಂಟಿವ್ನಿ, ಮರಳಿ ಬರೋದು ಮೂರು ನಾಕು ದಿನ ಹಿಡಿಬೌದು" ಎನ್ನುತ್ತಿದ್ದಂತೆ, ಕಲಸು ಕಾತರ ಬೆರೆತ ಸ್ವರದಲ್ಲಿ "ಮೂರು ನಾಕು ದಿನ?" ಎಂದು ಉದ್ಗರಿಸಿದಳು ಗಿರಿಜೆ.

"ಅಯ್ಯೋ, ನೀನು ಅಂಕ ಎರಡಾಳು ಇರೋವಾಗ ಮೂರು ನಾಕು ದಿನ ಅಲ್ಲ, ಮೂವತ್ತು ದಿನ ಆದರೆ ತಾನೆ ಯಾವ ಚಿಂತೆ?" ಎಂದು ಮಾತಿನಲ್ಲಿ ಅವರಿಬ್ಬರ ಬೆನ್ನು ತಟ್ಟಿದರು ಗೌಡರು...

ಅಂದು ಸಂತೆಯ ದಿನವಾದ್ದರಿಂದ ಊರಿನ ಬಹುಪಾಲು ಮಂದಿ ಆರು ಮೈಲಿ ದೂರದಲ್ಲಿ ಕಟ್ಟುತ್ತಿದ್ದ ಸಂತೆಗೆ ಹೊರಟು ಹೋಗಿದ್ದರು. ಬಿಡುವಿಲ್ಲದ ದುಡಿಮೆಯಿಂದ ಹಂಚಿಕಡ್ಡಿಯಂತಾಗಿದ್ದ ಗೌಡರ ಹೆಂಡತಿ, ಕೆಲವು ತಿಂಗಳಿಂದ ಬಿಟ್ಟು ಬಿಟ್ಟು ಬರುತ್ತಿದ್ದ ಜ್ವರದಿಂದ ತೀರ ನಿಶ್ಯಕ್ತಳಾಗಿದ್ದಳು. ಆಳು ಕಾಳುಗಳಿಗೆ ಬಿಸಿ ಹಿಟ್ಟು, ಕಡಲೆ ಕಾಳು ಎಸರು ಉಣಬಡಿಸಿದ ಗಿರಿಜೆ ಅವರು ಆ ದಿನ ಇಂಥಿಂಥ ಕೆಲಸ ಮಾಡಬೇಕೆಂದು ನೇಮಿಸಿ ಕಳಿಸಿದ್ದಳು. ಜೋಳದ ಹೊಲದಲ್ಲಿ ತೆನೆ ಕಾಯಲು ಅಂಕನನ್ನು ಗೊತ್ತು ಮಾಡಿದಳು.

ಮೃಗಶಿರೆಗೆ ಮುನ್ನವೆ ಜೋಳ ತೆನೆ ತುಂಬಿ ಗಾಳಿಯಲ್ಲಿ ವೈಯ್ಯಾರದಿಂದ ತೂಗುತ್ತ ಕಟಾವಿಗೆ ಸಿದ್ಧವಾಗುತ್ತಿತ್ತು. ಅಂಕ ತೂಗುವ ತೆನೆಗಳಲ್ಲಿ ದೃಷ್ಟಿ ನೆಟ್ಟು ವೀಕ್ಷಿಸುತ್ತಿದ್ದ. ಯಾವ ಮಾಯದಲ್ಲೂ ಪುಟಾಣಿ ಹಕ್ಕಿಗಳ ಗುಂಪೇ ಬಂದು, ಒಂದು ಭಾಗದ ತೆನೆಗಳ ಮೇಲೆ ಕುಳಿತು ಜೋಳದ ಕಾಳುಗಳನ್ನು ಹೆಕ್ಕಿ ತಿನ್ನಲಾರಂಭಿಸಿದವು. ಒಡನೆಯೇ ಕೈಯಲ್ಲಿದ್ದ ಡಬ್ಬವನ್ನು ಬಡಿದು ಜೋರಾಗಿ ಸದ್ದು ಮಾಡಿದ. ಹಕ್ಕಿಗಳು ಪುರ್ರನೆ ಹಾರಿ ಹೋದವು.

ಅಂಕನಿಗೆ ಇದೇ ಕೆಲಸವಾಯಿತು. ಅವನು ರವೆಯಷ್ಟು ಎಚ್ಚರ ತಪ್ಪಿದರೆ, ಹಕ್ಕಿಗಳು ತಟಕ್ಕನೆ ದಾಳಿಯಿಡುತ್ತಿದ್ದವು. ಅವನು ಈ ಕಾಯಕದಲ್ಲಿ ತೊಡಗಿದ್ದಾಗ ನೆರೆಯೂರಿನ ಇಬ್ಬರು ರೈತರು ಅದೇ ಹೊಲದ ಪಕ್ಕದ ಕಾಲುದಾರಿಯಲ್ಲಿ ಏನೋ ಹರಟುತ್ತ ಹೋಗುತ್ತಿದ್ದರು. ಅಂಕನನ್ನು ಕಂಡು ನಿಂತರು. ಅಂಕನಿಗೆ ಅವರಿಬ್ಬರೂ ಹೊಸಬರೇನಲ್ಲ, ಪರಿಚಿತರೇ. ಅವರಲ್ಲಿ ಒಬ್ಬ ಅಂದ;

"ನಮ್ಮ ಅಂಕನದೇ ನಿಸೂರು ಅಲ್ಲವೇನಣ್ಣ?"

"ಅದೆಂಗೆ?"–ಇನ್ನೊಬ್ಬ ಕೇಳಿದ.

"ಇನ್ನೇನು. ಅರಸನ ಅಂಕೆ ಇಲ್ಲ, ದೆವ್ವದ ಕಾಟ ಇಲ್ಲ, ಹೆಂಗಸಿನ ಸಾವಾಸ ಮೊದಲೇ ಇಲ್ಲ. ಇವನಿಗೆ ಯಾವುದಪ್ಪ ತಾಪತ್ರಯ?" ಎಂದ.

"ಹಂಗೆ ಇರಬೇಕು ಬುಡು... ಈ ಹೆಣ್ಣಿನಿಂದಲೇ ನೋಡು, ಎಲ್ಲ ಫಜೀತಿ, ಎಲ್ಲಾ ರಾಮಾಯಣ. ಮೊನ್ನೆ ನೋಡಿದ್ಯೋ ಇಲ್ಲವೋ ನಮ್ಮ ಭಾವ ತ್ವಾಟದ ಗುಡ್ಡಲ್ಲಿ ಆಮಾಚಿನ ಸಿಕ್ಕಿ ಬಿದ್ದು ದಂಡ ತೆತ್ತದ್ದೂ ಅಲ್ಲದೆ, ಮಾನ ಮಾದೆ ಎಲ್ಲಾನು ಕಳಕೊಂಡಿದ್ದ!

"ತೆಗೆ, ತೆಗೆ–ಮಾನ ಕಳಕೊಂಡಮ್ಯಾಲೆ ಅದೂ ಒಂದು ಬದುಕಾ...? ವಿಷ ತಕ್ಕೊಂಡು ಪ್ರಾಣ ಬಿಡೋದು ಲೇಸು."

ಅವರವರೇ ಹೀಗೆ ಮಾತಾಡಿಕೊಂಡು, "ಹೋಗಿ ಬರ್ತೀವೊ ಅಂಕ" ಎಂದು ತಮ್ಮ ಊರಿನತ್ತ ಮುಖವಾದಾಗ, ಕೊಂಚ ದನಿ ತಗ್ಗಿಸಿ–

"ಅಲ್ಲಕನೋ, ನಾವು ಒಕ್ಕುಳ ಮಾತಾಡಿದ್ರೂವೆ ಆ ಮಾರಾಯ ಅಂಕ ಕತ್ತು ಕುಣಿಸಿದ್ದನೇ ವಿನಾಯಿಸಿ, ಒಂದು ಮಾತನಾದ್ರೂ ಆಡಬರದೆ"?

"ಹಯ್ಯೋ ಕಾಲದಿಂದ ಅವನ ಸೊಬಾವ ಹಂಗೇಯ, ಅದೂ ಒಂದು ತರಕೆ ಒಳ್ಳೇದೆ ಬುಡು" ಎಂದು ಇನ್ನೊಬ್ಬ ಸಮಜಾಯಿಸಿ ಹೇಳಿದ.

ಅವರ ಮಾತುಗಳನ್ನು ಆಲಿಸುತ್ತಿರುವಂತೆಯೆ, ಅಂಕ ಹಕ್ಕಿಗಳನ್ನು ಓಡಿಸುವುದರಲ್ಲಿ ನಿರತನಾಗಿದ್ದ. ಅವರಿಬ್ಬರೂ ಹೊರಟು ಹೋದ ನಂತರ, ನೀಲಿ ಕವಚದ ಜೇಬಿನಿಂದ ಬೀಡಿಯೊಂದನ್ನು ತೆಗೆದು ಹಚ್ಚಿ ಸೇದುತ್ತ, ಆಕಾಶದತ್ತ ದೃಷ್ಟಿ ಹಾಯಿಸಿದ. ಅಲ್ಲಲ್ಲಿ ಹೆಪ್ಪುಗಟ್ಟುತ್ತಿದ್ದ ಮೋಡಗಳು ಆಕಾಶದ ನೀಲಿಮೆಯನ್ನು ಮುಚ್ಚುವ ವ್ಯರ್ಥ ಸಾಹಸಕ್ಕೆ ಕೈ ಹಚ್ಚಿದಂತಿತ್ತು.

ಸೇದಿ ಮುಗಿಸಿದ ಬೀಡಿಯ ತುಂಡನ್ನು ಅಂಕ ಬಿಸಾಡುತ್ತಿದ್ದಂತೆ, ಅವನೆದುರಿಗೆ ಸುಯ್ಯೆಂದು ಮರಿಗಿಳಿಗಳ ದಂಡು ಅವನ ಕಣ್ಣಿಗೆ ಹಸಿರು ಬಣ್ಣವನ್ನು ತುಂಬಿದಂತಾಯಿತು. ಅವನು ಜೋಳದತ್ತ ಮುಖ ಮಾಡಿ ಕುಳಿತಿದ್ದುದರಿಂದ, ಅವನ ಬೆನ್ನಿನ ಹಿಂದೆ ಗಿರಿಜೆ ಬಂದು ನಿಂತಿದ್ದುದು ತಕ್ಷಣ ತಿಳಿಯಲಿಲ್ಲ. ಗಿರಿಜೆ ಕೈ ಬಳೆಗಳನ್ನು ಸಣ್ಣಗೆ ಸದ್ದು ಮಾಡಿದಳು. ಬೆಚ್ಚಿ ಬಿದ್ದು ಅಂಕ ಎದ್ದು ನಿಂತ.

ಜೋಳದ ತೆನೆಯೊಂದರಿಂದ ಕಾಳುಗಳನ್ನು ಉದುರಿಸಿ, ಬಾಯಿಗೆ ಎಸೆದುಕೊಳ್ಳುತ್ತ,

"ಅಂಚಿನಲ್ಲಿ ಕಾಣೋ ಹಂಗೆ ಹೊಲದ ಎಲ್ಲಾ ಕಡೇಲೂ ಜೋಳ ಒಂದೇ ಸಮಕೆ ಹುಲುಸಾಗಿ ಬೆಳೆದಿದ್ದದೋ, ಇಲ್ಲ ಮದ್ಯ ಮದ್ಯ ತೆಳ್ಳಗಾಗಿದ್ದದೊ–ನೋಡವ..." ಎಂದವಳೇ ಗಿರಿಜೆ ಜೋಳದ ಹೊಲದೊಳಗೆ ನುಗ್ಗಿದಳು. ಅಂಕ ಅವಳನ್ನು ಹಿಂಬಾಲಿಸಲಿಲ್ಲ. ಸುಮ್ಮನೆ ನಿಂತಲ್ಲೆ ನಿಂತಿದ್ದ.

ಜೋಳ ಎತ್ತರವಾಗಿ ಬೆಳೆದಿದ್ದುದರಿಂದ ಸ್ವಲ್ಪ ದೂರ ಮುಂದುವರಿದ ಬಳಿಕ ಆಕೆ ಕಾಣಲಿಲ್ಲ. ಅವಳು ತನ್ನ ಕೈಯನ್ನು ಮೇಲೆತ್ತಿ, "ಈಗ ನನ್ನ ಕೈ ಕಾಣಿಸ್ತದ?" ಎಂದು ಕೇಳಿದಳು. "ಕಾಣಿಸ್ತದೆ" ಎಂದ ಅಂಕ. ಇನ್ನೆಲ್ಲೂ ಕೈ ಕಾಣಿಸಿ "ಈಗ?" ಎಂದಳು. ಅಂಕ "ಕಾಣಿಸ್ತದೆ" ಎಂದು ಓಗೊಟ್ಟ ಬೇರೆಲ್ಲೂ ನಡೆದು ಕೈ ಎತ್ತಿ ಈಗ ಎಂದಾಗ ಹೊರಗಿನಿಂದಲೇ ಅಂಕ "ಕಾಣಿಸದೆ" ಎನ್ನುವ ಉತ್ತರ...

ಹೀಗೆ ಪ್ರಶ್ನೆ ಉತ್ತರಗಳು ನಡೆಯುತ್ತಿರುವಾಗ, ಹಕ್ಕಿಗಳ ಒಂದು ದೊಡ್ಡ ಹಿಂಡು ಕಾಣಿಸಿಕೊಂಡುದ್ದರಿಂದ, ಅಂಕ ಡಬ್ಬವನ್ನು ಡಬ ಡಬನೆ ಬಡಿದು ಶಬ್ದ ಮಾಡಿದ. ಗಂಟಲು ಜೋರು ಮಾಡಿ ಹೊ ಎಂದು ಕೂಗುತ್ತ ಅತ್ತಿಂದಿತ್ತ ಅಡ್ಡಾಡಿದ.

ಹೊಲದೊಳಕ್ಕೆ ತನ್ನನ್ನು ಹಿಂಬಾಲಿಸಿ ಬರುವನೆಂದು ನಿರೀಕ್ಷಿಸಿ ಬೇಸರಗೊಂಡಿದ್ದ ಗಿರಿಜೆಗೆ ಈ ಅಬ್ಬರದಿಂದ ಸಿಡಿಮಿಡಿಯಾಯಿತು. ಬುಸು ಬುಸುಗುಡುತ್ತ ಹೊಲದೊಳಗಿಂದ ಹೊರ ಬಂದವಳೇ,

"ನೀನು ಯಾವ ಸೀಮೆ ಹೊಲ ಕಾಯ್ತಿದ್ದೀಯೆ.." ಜಾತಿ ಹೊಲಕ್ಕೆ ಬಿದ್ದು ವಕ್ಕಡೀಕೆ ಹೂಟಿಯಾಡಿ, ತನ್ನ ಕೋರೆ ಹಲ್ಲಿನಿಂದ ಮಣ್ಣು ಬಗೆದು, ಎಷ್ಟೋ ಜ್ವಾಳವಾ ಮಗ್ಗಾ ಮಲಗಿಸದೆ ಒಂಟಿಗ ಇರೋ ಹಂಗೆ ಕಾಡ್ತಿದೆ. ಇಲ್ಲಿ ನೀನು ಹೊರಗಡೇನೆ ನಿಂತುಕೊಂಡು ಡಬ್ಬ ಬಡಿದು ಹಕ್ಕಿ ಓಡಿಸಿಕೊಂಡು ಜ್ವಾಳ ಕಾಯ್ತಿನಿ ಅಂತ ಕಾಲ ಕಳೀತಿದ್ದೀಯಲ್ಲ, ಏನು ಹೇಳಾನ! ಎಂದು ಆಕ್ಷೇಪಿಸಿದಳು.

"ಜಾತಿ ರಾತ್ರೆ ಬಿದ್ದಿರಬೌದು."

ಅಂಕನದು ಮೂರೆ ಮಾತು. ಇದರಲ್ಲಿ ತನ್ನ ತಪ್ಪಿಲ್ಲ; ರಾತ್ರಿಯ ಕಾವಲುಗಾರ ಬೇರೆಯವನು ಎಂದು ಅರ್ಥ ಬರುವ ಮಾತು.

ಗಿರಿಜೆ ಏನು ಹೇಳಲೂ ತೋಚದೆ "ನೀನೊಂದು ಕಲ್ಲು ಬಂಡೆ" ಎಂದು ಒಳಗೆ ಗೊಣಗಿದಳು. ಅವಮಾನ, ಸಿಟ್ಟು, ಕೇಶ, ದುಮ್ಮಾನಗಳಿಂದ ಅವನನ್ನೊಮ್ಮೆ ದಿಟ್ಟಿಸಿ, ಹೊಲದ ಪಕ್ಕದ ಇಳಿಜಾರಿನಲ್ಲಿ ಸರ ಸರ ನಡೆದು ಹೋದಳು. ತಲೆ ತಗ್ಗಿಸಿ ನಿಂತಿದ್ದ ಅಂಕ ದೃಷ್ಟಿ ಎತ್ತಿ, ಅವಳು ಸಾಗುತ್ತಿರುವುದನ್ನೇ ನೋಡಿದ. ಅವಳು ದೂರ ದೂರ ಹೋದಂತೆ ಅತ್ತ ಇತ್ತ ತೊನೆಯುವ ಅವಳ ಉದ್ದನೆ ಜಡೆಯಲ್ಲಿ ಅವನ ನೋಟ ಕೇಂದ್ರೀಕೃತವಾಗಿ, ಒಂದು ಕರಿ ನಾಗರ ಹರಿದು ಹೋಗಿರುವಂತೆ ಭಾಸ. ಅವನ ಒಡಲಾಳದೊಳಗೆ ಏನಾಗುತ್ತದೆ ಎಂಬುದು ಅವನಿಗೆ ತಿಳಿಯಲಾರದಷ್ಟು ಗೋಜಲು! ಇತ್ತ ಹಕ್ಕಿಗಳ ಗುಂಪು ಯಥಾ ಪ್ರಕಾರ ಜೋಳದ ತೆನೆಗಳ ಮೇಲೆ ಎರಗಿ ಕುಳಿತು ಕಾಳುಗಳನ್ನು ಹೆಕ್ಕಿ ತಿನ್ನಲು ಪ್ರಾರಂಭಿಸಿದವು. ಅಂಕ ಡಬ್ಬ ಬಡಿದು ಸದ್ದು ಮಾಡಿದ. ಪುಟ್ಟ ಹಕ್ಕಿಗಳು ಮೇಲೆ ಹಾರಿ ಮತ್ತೆ ಬಂದು ತೆನೆಗಳ ಮೇಲೆ ಕುಳಿತವು. ಅಂಕ ಮತ್ತೆ ಶಬ್ದ ಮಾಡಿದ. ಅವು ಆ ಕ್ಷಣಕ್ಕೆ ಮಾತ್ರ ಮೇಲೆ ಹಾರಿ ಮತ್ತೆ ಬಂದು ಕುಳಿತುಕೊಂಡವು. ಹದಗೆಟ್ಟಿದ್ದ ಮನಸ್ಥಿತಿಯಲ್ಲಿ ತೊಳಲಾಡುತ್ತಿದ್ದ ಅಂಕ, ಕವಣೆಯಲ್ಲಿ ಕಲ್ಲಿಟ್ಟು ಬೀರಿದ. ಕೆಲವು ಹಕ್ಕಿಗಳು ಮೇಲೆ ಹಾರಿದವು. ಇನ್ನು ಕೆಲವು ತೆನೆಗಳ ಮೇಲೆ ಕುಳಿತೇ ಇದ್ದವು. ಬೀಸಿದ ಕಲ್ಲು ಜೋಳದ ತೆನೆಯೊಂದಕ್ಕೆ ತಗುಲಿ, ಅದನ್ನು ಚೆಲ್ಲಾಪಿಲ್ಲಿ ಮಾಡಿ, ಅನಂತರ ಒಂದು ಹಕ್ಕಿಗೆ ಘಾಸಿ ಮಾಡಿ, ಅದನ್ನು ನೆಲಕ್ಕೆ ಕೆಡವಿತು.

ಅಂಕ ಜೋಳದ ಹೊಳದೊಳಗೆ ನುಗ್ಗಿ, ಆ ಹಕ್ಕಿ ಎಲ್ಲಿ ಬಿದ್ದಿರಬಹುದೆಂದು ತಡಕಾಡಿದ ಹೊಲದ ಎಡಭಾಗದಲ್ಲಿ ಜೋಳದ ಎರಡು ಸಾಲುಗಳ ನಡುವೆ ಹಕ್ಕಿ ನೆಲಕ್ಕೊರಗಿತ್ತು. ಹಕ್ಕಿ ಸತ್ತಿರಲಿಲ್ಲ. ಅದರ ರೆಕ್ಕೆಗೆ ಪೆಟ್ಟಾಗಿ, ಹೆಚ್ಚಿನ ಗರಿಗಳು ಉದುರಿ ಬಿದ್ದಿದ್ದವು. ರೆಕ್ಕೆ ದೇಹಕ್ಕೆ ಅಂಟಿದ್ದ ಸಂದಿನಿಂದ ರಕ್ತ ಜಿನುಗುತ್ತಿತ್ತು... ಆ ಹಕ್ಕಿ ಬದುಕಿ ಉಳಿಯುವುದೊ ಸಾಯುವುದೋ ಹೇಳಲಾರದಂಥ ಸ್ಥಿತಿ.

ಆ ಅಂಕ ನೆಲದಲ್ಲಿ ಕುಕ್ಕರಿಸಿದ. ದಯಾರ್ದ್ರನಾಗಿ ಆ ಪುಟಾಣಿ ಹಕ್ಕಿಯನ್ನೇ ನೋಡುತ್ತ ಕುಳಿತ.

**ಓದು ಪಠ್ಯ:**

## ೪. ಭಿಕ್ಷುಕನಿಗೆ ರೊಟ್ಟಿ ದಾನ ಮಾಡಿದದು

**– ವಿ.ಹೆಚ್. ಗವಿಸ್ವಾಮಿ**

ರಾಜಾಸ್ಥಾನದ ಇತಿಹಾಸದಲ್ಲಿ ಅತ್ಯಪೂರ್ವವಾಗಿರುವ ಒಂದು ದೃಶ್ಯವನ್ನು ಎಷ್ಟು ಸಲ ನೋಡಿದರೂ ನೋಡಲೇ ಬೇಕೆನಿಸುತ್ತದೆ. ಅದಕ್ಕೆ ಬೇಸರವೆಂಬುದೇ ಬರುವುದಿಲ್ಲ. ಪ್ರತಾಪಸಿಂಹನಂತಹ ಮಹಾರಾಣನು, ಸತೀ ಪುತ್ರ ಸಮೇತನಾಗಿ ಉದಯಪುರವನ್ನು ಬಿಟ್ಟು ಬಿಡಾಡಿಯಾಗಬೇಕಾಗಿ ಬಂದಿದ್ದರೂ ಸ್ವತಂತ್ರವಾಗಿರುವುದೇ ಲೇಸೆಂದು ಸಹಿಸಿದ ಕಷ್ಟಪರಂಪರೆಗಳನ್ನು ನೆನೆದರೆ ರೋಮಾಂಚನವಾಗುತ್ತಿದೆ.

ಮರಗಳ ಗುಂಪು ಅರಮನೆಯಾಗಿಯೂ, ತರಗೆಲೆಗಳೇ ಹಂಸತೂಲಿಕ ತಲ್ಪವಾಗಿಯೂ ಗಡ್ಡೆ ಗೆಣಸುಗಳೇ ಪಂಚಭಕ್ಷಗಳಾಗಿಯೂ ಪ್ರತಾಪನ ಸಂಪತ್ತಾಗಿದ್ದುವು. ಹಿಂದಣ ವಾರವೇ 'ನಿನ್ನ ರಾಜ್ಯವು ನನಗಿರಲಿ; ನನ್ನ ಸಾಮಂತನಾಗಿರು' ಎಂದು ಅರಬ್ಬರು ಬರೆದಿದ್ದ ಒಂದು ಪತ್ರವು ಪ್ರತಾಪನಿಗೆ ತಲುಪಿದ್ದಿತು. ತನ್ನ ಪತ್ನಿಯ ಮತ್ತು ಮಕ್ಕಳ ದುರ್ದೆಶೆಯನ್ನು ಕಾಣುತ್ತ ಪ್ರತಾಪನು ಒಳಗೊಳಗೇ ಬಂದು ಬೂದಿಯಾಗಿದ್ದನು; ಆದರೂ ಇದುವರೆಗೆ ಆ ಪತ್ರಕ್ಕೊಂದುತ್ತರವನ್ನು ಬರೆದಿರಲಿಲ್ಲ.

ಮರಗಳೊಳಗೆ ಮರೆಯಾಗಿದ್ದ ಈತನ ಗುಡಿಸಲಿನ ಹಿಂಬದಿಯಲ್ಲಿ ಒಬ್ಬ ಬಡ ಭಿಕ್ಷುಕನು ನಿಂತಿದ್ದು, ಒಳಗೆ ನಡೆಯುತ್ತಿದ್ದ ಸಂಭಾಷಣೆಯನ್ನು ಆಲಿಸುತ್ತಿದ್ದನು. ಪ್ರತಾಪನ ಮಗುವಿಗೆ ಆಹಾರಕ್ಕಾಗಿ ಕೊಟ್ಟಿದ್ದ ರೊಟ್ಟಿಯನ್ನು ಕಾಡುಬೆಕ್ಕು ಕಚ್ಚಿಕೊಂಡು ಹೋಗಿತ್ತು. ಮಗುವಿನ ಅಳುವಿಗೆ ಪಾರವಿರಲಿಲ್ಲ. ತಾಯಿ "ಮಗು, ಹಿಂದೆ ಒಬ್ಬ ರಾಜನ ಕೃಪೆಯಿಂದ ಹೀಗೆಯೆ ಅವನ ರೊಟ್ಟಿಯನ್ನು ಬೆಕ್ಕು ಎತ್ತಿಕೊಂಡಾಗ, ಅವನು ಅತ್ತಿರಲಿಲ್ಲ. ನೀನೇಕೆ ಅಳಬೇಕು?" ಎಂದು ಸಮಾಧಾನ ಹೇಳಿದ್ದರೂ, ಹಸಿವು ಮಗುವನ್ನು ಮತ್ತೂ ಬಾಧಿಸಿದ್ದಿತು. ಪ್ರತಾಪನೂ ಪತ್ನಿಯೂ ಎರಡು ದಿನಗಳಿಂದಲೂ ನಿರಾಹಾರಿಗಳಾಗಿದ್ದರು; ರೊಟ್ಟಿಯನ್ನು ಮಕ್ಕಳಿಗೆ ಹಂಚಿಕೊಟ್ಟು ತಾವು ನೀರು ಕುಡಿದು ಇದ್ದರು. ಇನ್ನು ಮನೆಯಲ್ಲಿ ರೊಟ್ಟಿ ಇರಲಿಲ್ಲ. ಆಗಲೇ – ಚಂಪಾವತಿಯು ತಮ್ಮನನ್ನು ತಾನೇ ಸಮಾಧಾನಪಡಿಸುವೆನೆಂದು ಎತ್ತಿಕೊಂಡು ನಡೆದಳು. ಪ್ರತಾಪನೂ ರಾಣಿಯು ಮಾತ್ರ ಅಲ್ಲಿ ಉಳಿದರು. ಕುಟೀರದ ಹಿಂದ ಭಾಗದಲ್ಲಿ ಚಂಪಾವತಿಯು ತಮ್ಮನಿಗೆ ಸಮಾಧಾನ ಹೇಳುತ್ತ "ಒಂದು ಚೂರು ರೊಟ್ಟಿಗಾಗಿ ಎಷ್ಟು ಅಳುವೆ? ಸಾಕುಮಾಡು. ನಾನೇ ರೊಟ್ಟಿಯನ್ನು ಕೊಡುವೆನು ಮನೆಯಲ್ಲಿ ಬೇರೆ ರೊಟ್ಟಿಯಿಲ್ಲ. ನನ್ನೊಡನೆ ಇದ್ದ ರೊಟ್ಟಿಯನ್ನು ನಾವಿಬ್ಬರೂ ತಿನ್ನುವೆಯಂತೆ!" ಎನ್ನುತ್ತ ತಾನೂ ತಿನ್ನದೆ ಅಡಗಿಸಿಟ್ಟ ತನ್ನ ಪಾಲಿನ ರೊಟ್ಟಿಯನ್ನು ತಂದು ತಮ್ಮನಿಗೆ ಕೊಡುವೆನೆಂದು ಬಯಸಿದ್ದಳು.

ಆಗಲೇ ಮುಂಬಾಗಿಲಲ್ಲಿ ಆ ಭಿಕ್ಷುಕನು ಕಾಣಿಸಿಕೊಂಡು – ಅಮ್ಮಾ ಭಿಕ್ಷೆ ನೀಡಿರಿ! ಕೂಗಿದನು. ಮಹಾರಾಣನಾಗಿ ಸಾವಿರಾರು ಜನರಿಗೆ ಅನ್ನದಾನ ಮಾಡುತ್ತಲೂ ಲಕ್ಷಾವಧಿ ಸೈನಿಕರನ್ನು ಸಾಕುತ್ತಲೂ ಇದ್ದ ಪ್ರತಾಪನೂ, ಅಂತಯೆ ಅವನ ಸಹಧರ್ಮಿಣಿಯಾಗಿದ್ದ ರಾಣಿಯೂ ಈ ಭಿಕ್ಷುಕನ ಮಾತನ್ನು

ಕೇಳಿ, ಇನ್ನಷ್ಟು ಕೊರಗಿದರು. ಏನು ಮಾಡಬಹುದು? ಅಯ್ಯಾ ಭಿಕ್ಷುಕನೇ ನಾವೇ ಉಣ್ಣದೆ ಎರಡು ದಿನಗಳಾದುವು. ಮಕ್ಕಳಿಗೆ ತಿನ್ನುವುದಕ್ಕೆ ಏನೂ ಇಲ್ಲದೆ, ಇದ್ದ ರೊಟ್ಟಿಯ ತುಂಡನ್ನೂ ಬೆಕ್ಕು ಕಚ್ಚಿಕೊಂಡು ಮಗು ಅಳುತ್ತಿರುವುದನ್ನು ಕೇಳಿಯೂ ಸುಮ್ಮನಿರಬೇಕಾಗಿದೆ. ಏನು ಮಾಡಲಿ? ಯಾವ ರೀತಿಯಲ್ಲಿಯೂ ಉಪಚರಿಸಲಾರೆವು, ಕ್ಷಮಿಸಬೇಕು: ಎಂದು ರಾಣಿಯು ದೈನ್ಯದಿಂದ ನುಡಿದು ತಲೆಬಾಗಿದಳು. 'ದೈವೇಚ್ಛೆ! ಚಿಂತೆಯಿಲ್ಲವಮ್ಮಾ! ಎಂದು ಹೇಳುತ್ತಾ ಭಿಕ್ಷುಕನು ನಿಟ್ಟುಸಿರು ಬಿಡುತ್ತಾ ಹೊರಟನು.

ಇಂಥಾ ಮಾತುಗಳನ್ನು ಹಿಂಬದಿಯಲ್ಲಿದ್ದ ರಾಣನ ಮಗಳು ಕೇಳಿದ್ದು, ಅಲ್ಲಿಗೆ ಓಡುತ್ತ ಬಂದು – 'ಊಟದ ಹೊತ್ತಿಗೆ ಬೇಡ ಬಂದ ಭಿಕ್ಷುಕನನ್ನು ಹೀಗೆ ಬರಿಗೈಯಲ್ಲಿ ಕಳಿಸಿದುದು ಧರ್ಮವೇ?' ಎಂದು ತಾಯಿಗೆ ವಂದಿಸಿ ಹೇಳಿ, ತಾನೇ ಭಿಕ್ಷುಕನನ್ನು ಕರೆದಳು. ಅವನು ಬರುತ್ತಲೆ "ಸ್ವಾಮಿ ಈಗ ಬಡತನದಲ್ಲಿದ್ದೇವೆ. ಆದರೂ, ನಮ್ಮಲ್ಲಿಗೆ ತಮ್ಮಂತವರು ಬರುವುದೇ ಒಂದು ಭಾಗ್ಯವು. ತಮಗೆ ಸ್ವೀಕಾರ ಯೋಗ್ಯವೆಂದು ಕಂಡು ಬಂದರೆ, ನಾನು ಇಟ್ಟ ಒಂದು ರೊಟ್ಟಿಯಿದೆ. ಅದು ನನಗಂತೂಬೇಡ. ತಮ್ಮನನ್ನು ಸಮಾಧಾನ ಮಾಡಲು ಇಟ್ಟಿದ್ದೇನೆ. ಅವನು ಅದನ್ನು ತಮಗೆ ನೀಡಲು ಬರುವನು, ದಯೆಯಿಟ್ಟು ಅದನ್ನು ಸ್ವೀಕರಿಸಬೇಕು; ಎನ್ನುತ್ತ ತಮ್ಮನಿಂದ ಆ ರೊಟ್ಟಿಯನ್ನು ಭಿಕ್ಷುಕನ ಜೋಳಿಗೆಗೆ ಹಾಕಿ ನಗಾಡಿದಳು, ತಮ್ಮನೂ ನಗಾಡಿದನು. ರಾಣನೂ ರಾಣಿಯೂ ಚಕಿತರಾದರು.

ಆ ಭಿಕ್ಷುಕನು ನಿಂತಲ್ಲೇ ನಿಟ್ಟುಸುರುಬಿಟ್ಟು – 'ಧನ್ಯನಾದೆನು, ಪ್ರತಾಪ ಸಿಂಹಾ, ಧನ್ಯನಾದೆ! ತಮಗೇ ಹೊಟ್ಟೆಗಿಲ್ಲದಷ್ಟು ಸಂಕಟದಲ್ಲೂ ನಿಮ್ಮ ಮಕ್ಕಳು ಸಹ ಧರ್ಮಪ್ರಾಣರಾಗಿದ್ದು, ನಮ್ಮ ಬಾಯ ತುತ್ತನ್ನು ದಾನ ಮಾಡಿ ಭಿಕ್ಷುಕರನ್ನು ಸತ್ಕರಿಸಲು ಬಲ್ಲವರೆಂದ ಬಳಿಕ – ನೀವೇ ಧನ್ಯರು! ಇಷ್ಟು ಧರ್ಮನಿಷ್ಠೆಯುಳ್ಳ ಕಾರಣವೇ ಮಿಕ್ಕ ರಜಪೂತರಂತೆ ನೀವಿನ್ನೂ ಅರಬ್ಬರ ಚರಣಾಶ್ರಿತರಾಗಿಲ್ಲ. ಮೊಗಲ ಪಾಚ್ಛಾಯನು ಇದನ್ನು ತಿಳಿದರೆ, ನಿಮ್ಮನ್ನೆಂದೂ ಊರೂರು ತಿರುಗುತ್ತಿರುವಂತೆ ರಾಜ್ಯ ಭ್ರಷ್ಟರನ್ನಾಗಿ ಮಾಡುತ್ತಿರಲಿಲ್ಲ. ಇತರ ರಜಪೂತ ದೇಶಪ್ರೇಮ ಕುಲಧರ್ಮಾನು ರಾಗಗಳನ್ನು ತಿಳಿದವನಾಗಿ, ನೀವೂ ಅವರಂತೆಯೇ ಎಂದು ತಿಳಿದು, ಇಂತಹ ಬಾಳಿಗೆ ಈಡಾದನು. ನಿಮ್ಮ ರಾಜ್ಯವನ್ನು ನೀವು ಪುನಃ ಕೂಡಲೇ ಪಡೆದುಕೊಳ್ಳುತ್ತೀರಿ. ಅಲ್ಲದೆ, ಇನ್ನೊಂದು ಮೊಗಲ ಸೈನ್ಯಗಳು ಈ ರಾಜ್ಯದ ಮೇಲೆ ನುಗ್ಗವು" ಎಂದು ಭಿಕ್ಷುಕನೆಂದನು.

ರಾಣಾ ರಾಣಿಯರು ಮೌನವಾದರು.

ರಾಣನ ಮಗಳು – 'ಅದೇನಯ್ಯ, ಹಾಗೆ ಎಲ್ಲವನ್ನೂ ತಿಳಿದಂತೆ ಹೇಳುವೆ!' ಎಂದು ಪ್ರಶ್ನಿಸಿ ನಗಾಡಿದಳು. ಅಲ್ಲದೆ ಈ ಭಿಕ್ಷುಕನು ಭವಿಷ್ಯವಾದಿಯಾಗಿ ಯಾಕೆ ನುಡಿದಿರಬಾರದು? ಎಂದು ಮನಸ್ಸಿನಲ್ಲಿಯೇ ಅಂದುಕೊಂಡರು. ಅವರು ನಗಾಡಿದುದು ದುಃಖದ ಯಾವ ಕೊರಗೂ ಇಲ್ಲದ ಅಪ್ಪಟ ಛಾಯೆಯ ಅರೆ ನಗು, ರಾಣಾ ರಾಣಿಯರೂ ಭಿಕ್ಷುಕನನ್ನೂ ಆಕಾಶವನ್ನೂ ದಿಟ್ಟಿಸಿ ಮನಸ್ಸಿನಲ್ಲಿ ವಂದಿಸಿದರು.

ಸಣ್ಣ ಅಮರನಿಗೆ ಹಸಿವೆನೋ ಮನಃ ಚುಚ್ಚುತ್ತಿರಬೇಕು. ಅವನು ಭಿಕ್ಷುಕನ ಬಳಿ ನಿಂತಿದ್ದು, ಭಿಕ್ಷುಕನನ್ನೂ ಅವನ ಕೈಯಲ್ಲಿ ತೂಗಾಡುತ್ತಿದ್ದ ಜೋಳಿಗೆಯಲ್ಲಿ ತಾನೆ ಮಡಗಿದ್ದ ರೊಟ್ಟಿಯನ್ನೂ

ನೋಡುತ್ತ ನಿಂತನು. ಭಿಕ್ಷುಕನು – "ಅಪ್ಪಾ, ನೀನೂ ನಾನೂ ಈ ರೊಟ್ಟಿ ತಿನ್ನೋಣ" ಎಂದನು. ಮಗು - "ನೀವು ತಿನ್ನುವಷ್ಟು ಅನುಗ್ರಹ ಮಾಡಿದರೆ, ನಮ್ಮೆಲ್ಲರ ಹೊಟ್ಟೆ ತುಂಬಿ ಹಸಿವು ಬಾರದು" ಎಂಬ ಅರ್ಥದಲ್ಲಿ ಸಂಜ್ಞೆಗಳ ಮೂಲಕ ತಿಳಿಸಿದನು.

ರಾಣನು – ತಾವು ಇಲ್ಲೇ ಇರುವಿರಾ? ಎಂದು ಕೇಳಿದನು. ಆಗ ಭಿಕ್ಷುಕನು – ರಾಣಾ, ಇಲ್ಲಿರುವುದು ಸನ್ಯಾಸಿಗಳಿಗೆ ಆಗದು. ಆದರೆ ನೀನು ಸನ್ಯಾಸವನ್ನು ಸ್ವೀಕರಿಸದವರಲ್ಲಿ ಮಹಾತ್ಮನು, ಅಕ್ಬರನು ಮೊಗಲ ಬಾದಷಹನಾಗಿಲ್ಲದಿದ್ದಲ್ಲಿ ನಿನ್ನಂತಹ ರಾಣನಾಗಲು ಭಗವಂತನಲ್ಲಿ ಬೇಡಿಕೊಂಡು ನಿನ್ನ ಜತೆಯಲ್ಲಿಯೇ ಇರುತ್ತಿದ್ದನು. ಅಕ್ಬರನುನಿಮ್ಮ ಪರಿವಾರದೊಳಗೇ ಸೇರಿದ್ದರೆ, ಮಹಾ ಮೊಗಲನಾಗಿ ಅವನಿಗೆ ಈಗ ದೊರೆವ ಮನ್ನಣೆಗಿಂತ ಹೆಚ್ಚಿನ ಕೀರ್ತಿಯು, ಕುಂದಿಲ್ಲದೆ ಶಾಶ್ವತವಾಗಿ ಉಳಿಯುತ್ತಿತ್ತು. ಈಗ ನಿಮ್ಮ ಹಗೆಯಾಗಿಯೇ ಅವನ ಕೀರ್ತಿಯು ಉಳಿಯುವುದು, ಅವನನ್ನೆಷ್ಟು ಬಾಧಿಸುವುದು! ಎಂದು ಬಿಸುಸುಯ್ದನು.

ರಾಣನು – ಅಕ್ಬರನು ನನ್ನ ವೈರಿಯಾಗಿದ್ದುದಕ್ಕೆ ನಾನೇನೂ ಅವನನ್ನು ದ್ವೇಷಿಸಲಿಲ್ಲ. ಅವನ ಕರ್ತವ್ಯವನ್ನು ಅವನು ತನ್ನ ಧರ್ಮದಂತೆ ಮಾಡುತ್ತಿರುವನು ತಪ್ಪೇನು?

ಭಿಕ್ಷುಕ – ನಿಮಗೆ ಅವನಲ್ಲಿ ಅಷ್ಟು ಕ್ಷಮೆಯೇ?

ರಾಣನು – ಆತ್ಮ ಸಾಕ್ಷಿಯಾಗಿಯೂ ಹಾಗೆಯೆ! ಈ ಮಾತು ಮುಗಿದಾಗಲೆ, ಭಿಕ್ಷುಕನು ರಾಣನನ್ನು ಶಿರಸಾ ವಂದಿಸಿದನು. "ನಿಜವಾಗಿಯೂ ನೀವು ಮಹಾತ್ಮರು" ಎಂದನು. ಮುಂದೆ ಭಿಕ್ಷುಕನು ಬೇರೆ ಮಾತಾಡದೆ, ತನ್ನ ವೇಷ ಕಳಚಿ, ತಾನೇ ಅಕ್ಬರ್ ಬಾದಷಹನೆಂಬುದನ್ನು ಅವರೆಲ್ಲರೂ ತಿಳಿಯುವಂತೆ ಮಾಡಿದನು.

ಎಲ್ಲರೂ ಮೌನರಾದರು. ಏನಾಶ್ಚರ್ಯ! ಅಕ್ಬರನೂ ಬಾದಷಹರೊಳಗೆ ಮಹಾತ್ಮನೇ. ಅಂದಿನಿಂದ ಮುಂದೆ ಪ್ರತಾಪನ ರಾಜ್ಯವನ್ನು ಅಕ್ಬರನು ಪೀಡಿಸಲಿಲ್ಲ.

# ಘಟಕ ೩.

## ವಾಸ್ತು ಶಿಲ್ಪ

**ಆಶಯ**

**ವಾಸ್ತುಶಿಲ್ಪ ಎಂದರೆ ಸಾಮಾನ್ಯವಾಗಿ ಕಟ್ಟಡಗಳು ಮತ್ತು ರಚನೆಗಳನ್ನು ವಿನ್ಯಾಸಗೊಳಿಸುವ ಹಾಗೂ ನಿರ್ಮಿಸುವ ಕಲೆ. ವಾಸ್ತುಶಿಲ್ಪ ಎನ್ನುವುದು ಸಾಮಾನ್ಯ ಸ್ವರೂಪದ ರಚನೆಯ ಅಂಶಗಳಿಂದ ಕೂಡಿರುತ್ತದೆ. ವಾಸ್ತುಶಿಲ್ಪ ಕಲೆ ಮತ್ತು ವಿಜ್ಞಾನದ ಸಂಯೋಜನೆಯಿಂದ ಕೂಡಿರುತ್ತದೆ.**

**ಸಂಗೀತವು ಒಂದು ಕಲೆ. ಚಿತ್ರ ರಚನೆಯು ಒಂದು ಕಲೆ. ಪ್ರತಿಮಾ ಶಿಲ್ಪವು ಒಂದು ಕಲೆ. ಅದೇ ರೀತಿ ವಾಸ್ತುಶಿಲ್ಪವೂ ಒಂದು ಕಲೆ, ಅಲ್ಲದೆ ವಿಜ್ಞಾನವೂ ಹೌದು. ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನಗಳ ಮುನ್ನಡೆಯಿಂದ ಕಟ್ಟಡದ ರಚನೆ ಹಾಗೂ ನಿರ್ಮಾಣಗಳಲ್ಲಿ ಅನೇಕ ಬದಲಾವಣೆಗಳು ಆಗಿವೆ ಹಾಗೂ ಆಗುತ್ತಲಿವೆ. ಸೌಂದರ್ಯದಿಂದ ಮೈದಳೆದ ವಾಸ್ತುಶಿಲ್ಪವು ಜನರಿಗೆ ಆನಂದವನ್ನುಂಟು ಮಾಡುವುದು. ಪ್ರಾಚೀನ ವಾಸ್ತುಶಿಲ್ಪದಲ್ಲಿ ವಿಜ್ಞಾನಕ್ಕಿಂತ ಕಲೆಯ ಭಾಗವು ಹೆಚ್ಚು. ಈಗಿನ ನವೀನ ಮಾದರಿಯ ವಾಸ್ತುಶಿಲ್ಪದಲ್ಲಿ ಅಲಂಕಾರವೂ ಕಡಿಮೆ ಅಥವಾ ಇಲ್ಲವೇ ಇಲ್ಲವೆಂದು ಹೇಳಬಹುದು. ಇದು ನವ ವಾಸ್ತುಶಿಲ್ಪದ ಒಂದು ಲಕ್ಷಣ. ವಾಸ್ತುಶಿಲ್ಪದ ಬೆಳವಣಿಗೆ ಆದಿಯಿಂದ ಇಲ್ಲಿಯವರೆಗೆ ಬೆಳೆಯುತ್ತಾ, ಬದಲಾಗುತ್ತಾ, ಸಮೀಕರಣಗೊಳ್ಳುತ್ತಾ ಬಂದು ಅತ್ಯಂತ ಆಧುನಿಕ ವಿಜ್ಞಾನವಾಗಿ ಬೆಳೆದುನಿಂತಿದೆ.**

## ೧. ಬೇಲೂರಿನ ಶಿಲಾಬಾಲಿಕೆಯರು

**– ಡಿ.ವಿ. ಗುಂಡಪ್ಪ**

ಶ್ರವಣಕ ಸಿಲುಕದ ಲಲಿತಾ
ರವ ಸುಖವಂ ರಸನೆಗೊದವದಮೃತ ದ್ರವಮಂ
ಎವೆಯಿಕ್ಕದ ನಯನಗಳಿಂ
ಸವಿವುದು ನೀವೆಂಬ ಮಾಯಗಾತಿಯರಿವರಾರ್
ಶೃಂಗಾರ ವಲ್ಲರಿಯೆ ಲತೆಯೊಡನೆ ಬಳುಕಿ ನೀಂ
ನೃತ್ಯಲಾಸ್ಯದಿನಾರನೊಲಿಸುತ್ತಿರುವೆ
ಮಾಧುರ್ಯ ಮಂಜೂಷೆ ಮಧುರತರ ಮೌನದಿಂ
ದಾರ ಚರಿತಗಳ ಶುಕಿಗುಸಿರುತಿರುವೆ
ಮುಗ್ಧಮೋಹನವದನೆ ಮುಕುರದೊಳ್ ನೋಡಿ ನೀ
ನಾರ ನೆನದಿಂದು ನಸುನಗುತಲಿರುವೆ
ಪ್ರಣಯಪ್ರರೋಹೆ ನೀಂ ಪ್ರಿಯತರಾಕೃತಿಯಿಂದೆ
ರುಷೆಯನಿಂತಾರೊಳಭಿನಯಿಸುತ್ತಿರುವೆ
ಶಿಲ್ಪಿವರ ಕುವರಿಯರೆ ಸೌಂದರ್ಯ ಮುದ್ರಿಕೆಯರೆ
ದೇವದೇವನ ಸೇವೆಗೈತರ್ಪ ಸಾಧುಕುಲಮಂ
ಭಾವ ವಿನ್ಯಾಸ ವೈಕೃತಿಗಳಿಂ ಬೆರಗುವಡಿಸಿ
ಚಂಚಲತೆಗಡೆಯೆನಿಸಿ ನೀವಿಂತು ನಿಲ್ಲುವುದೇಕೆ
ಇನ್ನೆವರಮೊಲಿದು ಬಾರದ ನಿಮ್ಮ ಮನದಿನಿಯ
ನಿನ್ನು ಬಹನೆಂದು ನೀಂ ತಿಳಿವುದೆಂತು
ಅಗಣಿತ ಪ್ರೇಕ್ಷಕರೊಳಿಲ್ಲದಾ ಪ್ರೇಮಿ ಯೀ
ವಿಷಮ ಸಮಯದಿ ನಿಮಗೆ ದೊರೆವುದೆಂತು
ನಿಮ್ಮ ವದನದ್ಯುತಿಗೆ ಮರುಳಾಗಿ ಸೋಲದನ

ರಸಜೀವಿಯೆನ್ನುತಾದರಿಪುದೆಂತು
ನಿಮ್ಮ ನೂಪುರರವಕೆ ಬೆರಗಾಗಿ ನಿಲ್ಲದನ
ಭಾವಜ್ಞನೆಂದು ನೀಂ ಬಗೆವುದೆಂತು?
ರೂಪಮಿಲ್ಲದನೇನೊ ನಿಮ್ಮಿನಿಯನಲ್ಲದಿರೆ ತಾಂ
ರೂಪವಿಭವದಿನಿತ್ತಲೈತಂದು ಮರೆಯೆ ನಿಮ್ಮ
ಲಾಸಲಾವಣ್ಯಗಳ್ ಧರೆಯಿಂದೆ ಪಾರ್ವುವೆನುತೆ
ಮರೆಯಿಂದ ಕಂಡು ನಿಮ್ಮೊಲವಿಂದೆ ನಲಿವನೇನೋ
ಶ್ರುತಗಾನಮಭಿರಾಮಮಾದೊಡಶ್ರುತಗಾನ
ಮಭಿರಾಮತರಮೆನುತೆ ರಸಿಕರೊಸೆವರ್
ರಾಮಣೀಯಕ ಕುಲಮೆ ನಿಮ್ಮೆದೆಯ ನುಡಿ ಕಿವಿಯ
ನಾನದೊಡಮೆಮ್ಮೆದೆಯ ಸೇರಲರಿಗುಂ
ಅದರಿಂದಮಲ್ತೆ ನಿಮ್ಮಭಿಮತಂಗಳನರಿತು
ಜಾಣರೆನಿಬರೊ ನಿಮ್ಮ ಪೊಗಳಿ ನಲಿವರ್
ವರ್ಷಶತಕಗಳಿಂದೆ ಕುಂದದಿಹ ಲಾವಣ್ಯ
ದಂತರಂಗವ ನಿಂತು ಬಗೆವೆನೀಗಳ್
ಬಿದಿಯ ಕರಚಾತುರಿಯೊಳನಿತಿನಿತು ಸುಳಿದು ಸರಿವ
ಮನುಜ ಮಾನಸದೊಳತಿ ಚಿತ್ರದಿಂ ಚರಿಸಿ ಮೆರೆವ
ಭುವನ ಜೀವನ ಸಸ್ಯಕಮೃತಬಿಂದುಗಳನೆರೆವ
ಪರತತ್ವಮಾಧುರಿಯನಿನಿಸು ನೀ ತೋರ್ಪಿರಲ್ತೆ
ಆನಂದ ನಿಧಿಯಾ ಪರಾತ್ಪರನೆನಲ್ ಜಗದೊ
ಳಾನಂದವೀವರಂ ಕಳೆಯಲಹುದೇಂ
ಪ್ರೇಮಮಯ ಮೂರ್ತಿಯಾ ಪರದೇವನೆನುತಿರಲ್
ಪ್ರೇಮಾಂಕುರಗಳಂ ಮುರಿಯಲಹುದೇಂ

ಸೌಂದರ್ಯ ಸರ್ವಸ್ವನಿಧಿಯಾತನೆನುತಿರಲ್
ಸುಂದರಾಕಾರರೊಳ್ ಮುಳಿಯಲಹುದೇಂ
ಜೀವನಾಧಾರನವನೆನುತ ಪೊಗಳುತ್ತಿರಲ್
ಜೀವನೋಜ್ವಲೆಯರಂ ಪಳಿಯಲಹುದೇಂ
ಜಗದುದಯ ಕಾರಣನ ಮೈಮೆಗಳನರಿತು ನೆನೆದು
ಜಗದ ಯಾತ್ರೆಯ ನಡೆವ ಜನಕೆ ನಿಮ್ಮಂದದಿಂದಂ
ಸೊಗಮಿನಿಸುತೋರಿ ಸಂಸ್ಕೃತಿಪಥಂ ಸುಗಮಮನಿಸಲ್
ಅದುವೆ ದೇವಂಗೆ ನೀಮೆಸಗುವಾ ಸೇವೆಯಲ್ತೆ
ವಿಶ್ವತಂತ್ರ ರಹಸ್ಯ ಬೋಧನೋತ್ಸಾಹಮಿದು
ವಿಶ್ವಶಿಲ್ಪಿಯ ಸಭೆಯೊಳುಚಿತಮೆನಿಕುಂ
ವಿಗತ ಸೌಮನಸರುಂ ವಿಪರೀತ ಚರಿತರುಂ
ವಿಮುಖತೆಯನಾನಲರಿಂದೆ ನಿಮಗೇಂ
ಮೊಳಗುಗೆಲೆ ಸರಳೆಯರೆ ನಿಮ್ಮ ಮೃದು ಪದವನನು
ಕರಿಪ ವಾದಿತ್ರಗಳ್ ಸೂಕ್ಷ್ಮದಿಂದೆ
ನೆಳಲನಿತ್ತೀ ಲತಾವಳಿ ನಿಮ್ಮನಾದರಿಸು
ಗೆಂದಿಗುಂ ತಂಬೆಲರ ಸುರಭಿಯಂದೆ
ನಗುತ ನಲಿಯುತ ಮೆರೆದು ಹಾವಭಾವಗಳನೆಸೆದು
ಮಂಜು ಜಲ್ಪವ ತೋರಿ ಮುಗ್ಧ ವೀಕ್ಷಣವ ಬೀರಿ
ಕಠಿನರಾಗದ ಕಾಲದೌಷ್ಟ್ಯದಿಂ ಕುಂದುವಡದೆ
ಶುಷ್ಕಹೃದಯರ್ಗೆ ನೀಂ ಸೌಹೃದವ ನೀಡುತಿಹುದೌ
ಅವ್ಯಕ್ತ ನಿನದದಿಂದಕಲಂಕಿತಾಂಗದಿಂ
ದನ್ಯೂನ ತರುಣತೆಯಿನಮಿತಯಶದಿಂ
ಚಿರಕಾಲಮೆಸವುದೌ ಚಿತ್ತವೇಧನಿಯರಿರ

ಕುದಿವ ಲೋಕಕ ಮುದದ ತಣಿವ ಬೀರಿ
ಸೌಂದರ್ಯಮೇ ವಿಶ್ವತತ್ತ್ವಮಾ ಪರತತ್ತ್ವ
ಭಾಸಮೇ ಸೌಂದರ್ಯಮೆನುತ ಸಾರಿ
ನಿಮಗೆ ಜನ್ಮವನಿತ್ತ ಚಿತ್ರಚತುರರ ಚಿತ್ತ
ದೇಕಾಗ್ರ ಭಕ್ತಿದೀಪಿಕೆಯ ಬೆಳಗಿ
ಪೊಳೆಯಿರೌ ಸರಸ ಜೀವನಮಂತ್ರ ಗುರುಗಳೆನಿಸಿ
ಪಳಿಯಿರೌ ಮಧುರಭಾವವ ಪಳಿವ ವಿಕೃತಮತಿಯಂ
ಕಳೆಯಿರೌ ರಸಕಲಾ ವಿಮುಖತೆಯ ಜನದ ಮನದಿಂ
ಬೆಳೆಯಿರೌ ಪ್ರೇಮ ಧರ್ಮೋದ್ಧರಣ ವಿಧಿಯೊಳೆಂದುಂ

**– ಡಿ. ವಿ. ಗುಂಡಪ್ಪ**

# ೨. ವಾಸ್ತು ಸಂಪತ್ತು, ಶಿಲ್ಪ ಸಂಪತ್ತು, ಚಿತ್ರ ಸಂಪತ್ತು

**– ಹೆಚ್.ಎನ್. ಗೋಪಾಲರಾವ್**

ವಾಸ್ತು ಎಂದರೆ ಕಟ್ಟಡ, ಅದರ ನಿರ್ಮಾಣದ ಕಲೆಯೇ ವಾಸ್ತುಕಲೆ. ಜನರು ವಾಸ ಮಾಡುವ ಕಟ್ಟಡಗಳು, ಬಹುಜನೋಪಯೋಗಿಯಾದ ಕಟ್ಟಡಗಳು, ಕೋಟೆಗಳು, ದೇವಾಲಯಗಳು – ಈ ಎಲ್ಲಾ ಪ್ರಕಾರದ ಕಟ್ಟಡಗಳ ನಿರ್ಮಾಣವೂ ವಾಸ್ತುಶಿಲ್ಪದ ಕಕ್ಷೆಯಲ್ಲೇ ಬರುತ್ತವೆ. ಪ್ರಾಚೀನ ಕಾಲದ ಜನವಸತಿಯ ಕಟ್ಟಡಗಳು ಈಗ ಉಳಿದುಬಂದಿಲ್ಲವಾದ್ದರಿಂದ, ಉಳಿದು ಬಂದಿರುವ ದೇವಾಲಯಗಳ ಹಿನ್ನೆಲೆಯಲ್ಲೇ ವಾಸ್ತುಶಿಲ್ಪದ ಅಧ್ಯಯನವನ್ನು ಮಾಡಬೇಕಾಗಿದೆ. ಪ್ರಾಚೀನ ಕಾಲದ ಮಾನವನ ವಸತಿಯು ಬಹುಬೇಗ ಹಾಳಾಗುವ ಮರ, ಮಣ್ಣುಗಳಿಂದ ನಿರ್ಮಾಣವಾಗಿರಬೇಕು. ಆದ್ದರಿಂದ ಅವುಗಳು ಉಳಿದುಬಂದಿಲ್ಲ. ಕರ್ನಾಟಕದ ಇತಿಹಾಸಾರಂಭದ ಕಾಲದಲ್ಲಿ ಇಟ್ಟಿಗೆಯಲ್ಲಿ ಕಟ್ಟಡಗಳ ನಿರ್ಮಾಣವಾಗುತ್ತಿತ್ತು ಎಂಬುದು ಉತ್ಖನನಗಳಿಂದ ತಿಳಿದುಬಂದಿದೆ. ಸನ್ನತಿ, ಬನವಾಸಿಗಳಲ್ಲಿ ನಡೆದಿರುವ ಉತ್ಖನನಗಳಿಂದ ಮೌರ್ಯ ಮತ್ತು ಶಾತವಾಹನರ ಕಾಲದಲ್ಲಿ ಇಟ್ಟಿಗೆಯಿಂದ ಸ್ತೂಪ, ಚೈತ್ಯ, ವಿಹಾರ ಇತ್ಯಾದಿಗಳನ್ನು ನಿರ್ಮಿಸಲಾಗುತ್ತಿತ್ತು ಎಂದು ತಿಳಿದಿದೆ. ಸನ್ನತಿಯಲ್ಲಿ ಬೌದ್ಧ ಸ್ತೂಪಗಳಿದ್ದ ಗುರುತುಗಳು ಕಂಡಿವೆ. ಅವುಗಳೆಲ್ಲವೂ ಇಟ್ಟಿಗೆಯ ರಚನೆಗಳು, ಸ್ತೂಪಕ್ಕೆ ಶಿಲ್ಪ ಫಲಕಗಳನ್ನು ಸುತ್ತಲೂ ಅಳವಡಿಸಲಾಗುತ್ತಿತ್ತು.

ದೇವಾಲಯ ವಾಸ್ತುವಿನ ದೃಷ್ಟಿಯಿಂದ ಕರ್ನಾಟಕದಲ್ಲಿ ಕಂಡುಬರುವ ಮೊದಲ ದೇವಾಲಯ ತಾಳಗುಂದದಲ್ಲಿರುವ ಪ್ರಣವೇಶ್ವರನದು. 'ಅಲ್ಲಿನ ದೇವರನ್ನು ಸಾತವಾಹನರು ಪೂಜಿಸುತ್ತಿದ್ದ ವಿಷಯ, ಅದೇ ದೇವಾಲಯದ ಬಾಗಿಲುವಾಡದ ಮೇಲಿರುವ ಕದಂಬರ ಕಾಲದ ಶಾಸನದಿಂದ ತಿಳಿಯುತ್ತದೆ. ಆದರೆ ಬಾಗಿಲುವಾಡದ ವಿನಾ ದೇವಾಲಯದ ಉಳಿದ ಯಾವ ಭಾಗವೂ ಸಾತವಾಹನರ ಅಥವಾ ಕದಂಬರ ಕಾಲದ್ದಲ್ಲ. ಕದಂಬ ರವಿವರ್ಮನ ಗುಡ್ನಾಪುರ ಶಾಸನದ ಪ್ರಕಾರ ಆ ಕಾಲಕ್ಕೆ ಜೈನ ಬಸದಿಗಳ ನಿರ್ಮಾಣವೂ ಆಗಿತ್ತು. ಹಲಸಿಯಲ್ಲಿ ಕದಂಬ ಮೃಗೇಶವರ್ಮನು ತನ್ನ ತಂದೆ ಶಾಂತಿವರ್ಮನ ಸ್ಮರಣಾರ್ಥವಾಗಿ ಕಟ್ಟಿಸಿದ ಜಿನಾಲಯವು ಈಗಲೂ ಇದೆ. ದುಃಸ್ಥಿತಿಯಲ್ಲಿರುವ ೫ನೆಯ ಶತಮಾನದ ಈ ಬಸದಿಯೇ ಸದ್ಯಕ್ಕೆ ಉಳಿದುಬಂದಿರುವ ಪ್ರಾಚೀನ ಕಟ್ಟಡ. ಸಾಮಾನ್ಯವಾಗಿ ಕದಂಬರ ಕಾಲದಲ್ಲಿ ಚೌಕಾಕಾರದ ತಲವಿನ್ಯಾಸದ ಮೇಲೆ ಸರಳವಾದ ಗೋಡೆಗಳು, ಗೋಡೆಗಳ ಮೇಲೆ ಅಡ್ಡಡ್ಡಲಾಗಿ ಅಲಂಕರಣದ ಕೆತ್ತನೆ, ಗರ್ಭಗೃಹದ ಮೇಲೆ ಮೆಟ್ಟಿಲು ಮೆಟ್ಟಿಲಾಗಿ ಕಿರಿದಾಗುವ ಗೋಪುರಗಳನ್ನು ಕಾಣಬಹುದು. ಇದನ್ನು ಕದಂಬ ನಾಗರ ಶೈಲಿ ಎಂದೂ ಕರೆಯಲಾಗುತ್ತದೆ.

ಕದಂಬರಿಗೆ ಸಮಕಾಲೀನರಾಗಿ ಕರ್ನಾಟಕದ ದಕ್ಷಿಣ ಭಾಗವನ್ನು ಆಳಿದ ಗಂಗರ ಕಾಲದ ಹಲವು ದೇವಾಲಯಗಳು ಉಳಿದಿವೆ. ಕೆಲವು ದೇವಾಲಯಗಳು ಜೀರ್ಣೋದ್ಧಾರವಾಗಿವೆ. ಕೆಲವು ವಿನಾಶದ ಅಂಚಿನಲ್ಲಿವೆ. ನೆಲಮಂಗಲ ತಾಲ್ಲೂಕಿನಲ್ಲಿ ದಡಿಗ ಎಂಬುವವನು ಕಟ್ಟಿಸಿದ ದಡಿಗೇಶ್ವರ ದೇವಾಲಯ ಈಗ ಉಳಿದಿಲ್ಲ. ಬೆಂಗಳೂರು ಜಿಲ್ಲೆಯ ಮಣ್ಣೆ, ಗಂಗವಾರ, ಮಂಡ್ಯ ಜಿಲ್ಲೆಯ

ನರಸಮಂಗಲ, ಕೋಲಾರ ಜಿಲ್ಲೆಯ ಕೇಂದ್ರಸ್ಥಳ, ತುಮಕೂರು ಜಿಲ್ಲೆಯ ಅರಳಗುಪ್ಪೆ ಮತ್ತಿತರ ಸ್ಥಳಗಳಲ್ಲಿ ಗಂಗರ ಕಾಲದ ದೇವಾಲಯಗಳು ಉಳಿದಿವೆ. ಇವರ ಕಾಲದಲ್ಲಿ ಮೊದಲಿಗೆ ಇಟ್ಟಿಗೆಯನ್ನೇ ಉಪಯೋಗಿಸಿ, ದೇವಾಲಯಗಳು ನಿರ್ಮಾಣವಾಗಿದ್ದರೂ, ಆನಂತರ ಕಲ್ಲಿನ ಬಳಕೆಯಾಗಿದೆ. ಚತುರಸ್ರಾಕಾರದ ತಳವಿನ್ಯಾಸದ ಮೇಲೆ ನಿರ್ಮಾಣವಾಗುತ್ತಿದ್ದ ದೇವಾಲಯಗಳಲ್ಲಿ ಗರ್ಭಗೃಹದ ಜೊತೆಗೆ ಸುಖನಾಸಿ ಮತ್ತು ನವರಂಗಗಳಿರುತ್ತಿದ್ದವು. ಗಂಗರ ಕಾಲದ ದೇವಾಲಯಗಳ ಎತ್ತರ ಕಡಿಮೆ. ನವರಂಗದಲ್ಲಿ ಮಾತ್ರ ಕಂಬಗಳ ಬಳಕೆ; ತಳಭಾಗ ಚೌಕ ಮತ್ತು ಮೇಲ್ಭಾಗ ವೃತ್ತಾಕಾರ. ಗರ್ಭಗುಡಿಯ ಮೇಲೆ ಕ್ರಮೇಣ ಕಿರಿದಾಗುವ ಆಯತಾಕಾರದ ಗೋಪುರದ ಮೇಲೆ ಕಲಶವಿರುತ್ತದೆ. ದೇವಾಲಯದ ಹೊರಗಡೆಯ ವ್ಯಾಳಿಗಳ ಸಾಲು, ಕುಬ್ಬರ ಸಾಲು, ಕಿರುಕಂಬಗಳು, ನೃತ್ಯ, ಭಂಗಿಯ ಶಿಲ್ಪಗಳು ಇರುತ್ತವೆ. ಏನೇ ಅಲಂಕರಣವಿದ್ದರೂ ಗಂಗರ ಕಾಲದ ದೇವಾಲಯಗಳ ರಚನೆ ಸರಳವಾದುದು. ಮಣ್ಣೆಯಲ್ಲಿರುವ ಕಪಿಲೇಶ್ವರ ದೇವಾಲಯದ ದ್ವಾರಪಾಲಕರು ಮತ್ತು ಜಾಲಂಧ್ರಗಳ ಕೆತ್ತನೆ ಅತ್ಯಂತ ಸುಂದರ. ಮಣ್ಣೆ, ನರಸಮಂಗಲ ಮತ್ತಿತರ ಸ್ಥಳಗಳಲ್ಲಿರುವ ಹಲವು ದೇವಾಲಯಗಳ ತಳಪಾಯವು ಇಟ್ಟಿಗೆಯಿಂದ ನಿರ್ಮಿತವಾಗಿರುವುದು ವೈಶಿಷ್ಟ್ಯ ಪೂರ್ಣ.

ಮಣ್ಣೆಯಲ್ಲೇ ಒಂದು ಬಸದಿಯೂ ಶಿಥಿಲಾವಸ್ಥೆಯಲ್ಲಿ ಉಳಿದಿದೆ. ಗಂಗವಾರದ ಸಿಂಹಸ್ತಂಭವು ಯಾವುದೇ ಪಲ್ಲವಶೈಲಿಯ ಸ್ತಂಭಗಳ ನೆನಪು ಮಾಡುತ್ತದೆ. ಗಂಗರ ಕಾಲದ ಯಾವುದೇ ದೇವಾಲಯದ ವಿಸ್ತಾರ ಕಡಿಮೆ. ಸಣ್ಣ ಪ್ರಮಾಣದ ದೇವಾಲಯಗಳ ಸರಳತೆ ಮತ್ತು ಅಚ್ಚುಕಟ್ಟುತನಗಳು ಗಮನ ಸೆಳೆಯುತ್ತವೆ. ಗಂಗರ ಕಾಲದ ಹಲವು ದೇವಾಲಯಗಳು ಚೋಳರ ಕಾಲದಲ್ಲಿ ಹಲವು ಸೇರ್ಪಡೆ ಮತ್ತು ಬದಲಾವಣೆಗಳೊಂದಿಗೆ ಸ್ವರೂಪದಲ್ಲಿ ಮಾರ್ಪಾಡುಗಳನ್ನು ಹೊಂದಿವೆ. ಅವುಗಳಲ್ಲಿ ಕೋಲಾರದ ಕೋಲಾರಮ್ಮ, ಬೇಗೂರಿನ ನಾಗೇಶ್ವರ ಮತ್ತು ಚೋಳೇಶ್ವರ ದೇವಾಲಯಗಳನ್ನು ಹೆಸರಿಸಬಹುದು.

ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣವು ಬಾದಾಮಿ ಚಾಲುಕ್ಯರ ಕಾಲದಲ್ಲಿ ಅನೇಕ ಪ್ರಯೋಗಗಳೊಂದಿಗೆ ಅಧಿಕ ಸಂಖ್ಯೆಯಲ್ಲೇ ಆಗಿದೆ. ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳು ಬಾದಾಮಿ ಚಾಲುಕ್ಯರ ಪ್ರಮುಖ ನೆಲೆಗಳು. ಬಾದಾಮಿ ಅವರ ರಾಜಧಾನಿ. ಪಟ್ಟದಕಲ್ಲು ರಾಜಮನೆತನದ ಪ್ರಿಯವಾದ ಸ್ಥಳ. ಐಹೊಳೆ ಆ ಕಾಲದ ವರ್ತಕ ಶ್ರೇಣಿಯ ನೆಲೆ. ಬಹುಶಃ ಇವೇ ಕಾರಣಗಳಿಂದಾಗಿ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ದೇವಾಲಯಗಳ ನಿರ್ಮಾಣ ಕೇಂದ್ರೀಕೃತವಾಗಿರಬೇಕು. ಗುಹಾಲಯಗಳು ಆ ಕಾಲದ ಅದ್ಭುತ ನಿರ್ಮಾಣಗಳು. ಒಂದು ಶೈವ, ಎರಡು ವೈಷ್ಣವ ಮತ್ತು ಒಂದು ಜೈನ ಗುಹಾಲಯಗಳು ಇಲ್ಲಿವೆ. ಒಂದು ಗುಹೆಯ ವಿನ್ಯಾಸದಂತೆ ಮತ್ತೊಂದು ಗುಹೆಯ ವಿನ್ಯಾಸವಿಲ್ಲ. ಶೈವ ಮತ್ತು ವೈಷ್ಣವ ಗುಹೆಗಳಲ್ಲಿನ ಉಬ್ಬುಶಿಲ್ಪಗಳಂತೂ ಭಾವ ಪೂರ್ಣವಾಗಿವೆ. ಹದಿನೆಂಟು ಕೈಗಳ ಮಹಾನಟ, ನೃತ್ಯಭಂಗಿಯ ಗಣಪತಿ, ಮಹಿಷ ಮರ್ದಿನಿ, ಕಾರ್ತಿಕೇಯ, ಹರಿಹರ, ಅರ್ಧನಾರೀಶ್ವರ, ಭೂವರಾಹ, ನರಸಿಂಹ, ವಿಷ್ಣು, ತ್ರಿವಿಕ್ರಮ ಇತ್ಯಾದಿ ಉಬ್ಬು ಶಿಲ್ಪಗಳು ಅದ್ವಿತೀಯವೆನಿಸಿವೆ: ಎರಡನೇಯ ವಿಷ್ಣು ಗುಹಾಲಯದ ನಿರ್ಮಾಣವು ಕ್ರಿ. ಶ. ೫೭೮ರಲ್ಲಿ ಆಗಿದೆ. ಬಾದಾಮಿಯಲ್ಲಿರುವ ಮಾಲೆಗಿತ್ತಿಯ ಶಿವಾಲಯ, ಮೇಲಿನ ಶಿವಾಲಯ, ಜಂಬುಲಿಂಗ ದೇವಾಲಯ, ಭೂತನಾಥ ದೇವಾಲಯ – ಇತ್ಯಾದಿ

ದೇವಾಲಯಗಳು ಬಾದಾಮಿ ಚಾಲುಕ್ಯರ ಕಾಲದ ಅಮೂಲ್ಯ ವಾಸ್ತುಗಳು. ಇವುಗಳಲ್ಲಿ ಕೆಲವು ಕದಂಬ ನಾಗರ ಶೈಲಿಯಲ್ಲೂ, ಕೆಲವು ದ್ರಾವಿಡ ಶೈಲಿಯಲ್ಲೂ ನಿರ್ಮಾಣವಾಗಿವೆ. ಸರಳತೆ, ಹಿತಮಿತ, ಅಲಂಕರಣ, ಭಾವಪೂರ್ಣ ಗಾಂಭೀರ್ಯತೆಗಳು ಈ ದೇವಾಲಯಗಳ ವೈಶಿಷ್ಟ್ಯ. ಐಹೊಳೆಯಲ್ಲಿ ಎರಡು ಗುಹಾಲಯಗಳಿವೆ. ಇವುಗಳೆಂದರೆ ರಾವಳಫಡಿ ಮತ್ತು ಜೈನ ಗುಹಾಲಯ. ಕೊರೆಯಲ್ಪಟ್ಟ ಈ ಗುಹೆಗಳಲ್ಲೂ ಉಬ್ಬುಶಿಲ್ಪಗಳು ಗಮನಾರ್ಹವಾಗಿವೆ. ೬ನೆಯ ಶತಮಾನದಲ್ಲಿ ನಿರ್ಮಾಣವಾಗಿರುವ ರಾವಳಫಡಿ ಗುಹಾಲಯದೊಳಗಿನ ಮಹಾನಟ, ಸಪ್ತಮಾತೃಕೆಯರು, ಹರಿಹರ, ಅರ್ಧನಾರೀಶ್ವರ ಶಿಲ್ಪಗಳು ಬಹುಮುಖ್ಯವಾದುವು. ಬಾದಾಮಿ ಚಾಲುಕ್ಯರ ಕಾಲದ ಗುಹಾಲಯಗಳಲ್ಲಿ ಸಣ್ಣ ಗರ್ಭಗೃಹ ಮತ್ತು ಅದರ ಮುಂದಿನ ಸ್ತಂಭಸಹಿತ ವಿಶಾಲ ಮಂಟಪಗಳೇ ಮುಖ್ಯ ರಚನೆಗಳು, ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ಐಹೊಳೆಯ ಗೌಡರಗುಡಿ, ಲಾಡಖಾನ್ ದೇವಾಲಯ, ದುರ್ಗ ದೇವಾಲಯ, ಕೊಂತಿಗುಡಿ, ಮೇಗುತಿ ದೇವಾಲಯ ಇತ್ಯಾದಿಗಳು ಪ್ರಯೋಗಾತ್ಮಕವೆನಿಸಿವೆ. ಐಹೊಳೆಯಲ್ಲಿ ೧೨೫ಕ್ಕೂ ಹೆಚ್ಚು ದೇವಾಲಯಗಳಿವೆ ಎಂದು ತಿಳಿಯಲಾಗಿದೆ. ಗೌಡರಗುಡಿ, ಲಾಡಖಾನ್ ಮತ್ತು ದುರ್ಗ ದೇವಾಲಯಗಳು ದೇವಾಲಯದ ನಿರ್ಮಾಣದ ಮೊದಲ ಹಂತದ ಉದಾಹರಣೆಗಳು ಎಂದು ತಿಳಿಯಲಾಗಿದೆ. ದೀರ್ಘ ಚತುರಸ್ರಾಕಾರದ ಮಂಟಪದ ನಡುವೆಯೇ ದೇವಕೋಷ್ಠವಿರುವ ಗೌಡರಗುಡಿ, ಮಂಟಪದ ಹಿಂದಿನ ಮಧ್ಯದ ಅಂಕಣವನ್ನೇ ಗರ್ಭಗುಡಿಯಾಗಿ ಹೊಂದಿರುವ ಲಾಡಖಾನ್ ದೇವಾಲಯ, ಗಜಪೃಷ್ಠಾಕಾರ ವಿನ್ಯಾಸದ ಗರ್ಭಗುಡಿಯನ್ನುಳ್ಳ ಸಾಂದಾರ ದುರ್ಗ ದೇವಾಲಯದಲ್ಲಿ ಗರ್ಭಗುಡಿಯ ಮುಂದೆ ಸುಖನಾಸಿ ಮತ್ತು ಮುಖಮಂಟಪಗಳಿವೆ. ಎತ್ತರದ ಅಧಿಷ್ಠಾನದ ಮೇಲೆ ನಿರ್ಮಿತವಾಗಿರುವ ಪ್ರದಕ್ಷಿಣಾ ಪಥವನ್ನೂ ಉಳ್ಳ ದುರ್ಗ ದೇವಾಲಯವು ಔತ್ತರೇಯ ನಾಗರ ಶೈಲಿಯ ನಿರ್ಮಾಣವೆಂದು ತಿಳಿಯಲಾಗಿದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ದೇವಾಲಯ ನಿರ್ಮಾಣದ ಪ್ರಯೋಗಶಾಲೆಯಾಗಿದ್ದುದು ಪಟ್ಟದಕಲ್ಲು. ಪಟ್ಟದಕಲ್ಲಿನಲ್ಲಿ ಒಂದೇ ಆವರಣದಲ್ಲಿ ದ್ರಾವಿಡ, ಕದಂಬನಾಗರ ಮತ್ತು ವೇಸರ ಶೈಲಿಯ ಹಲವಾರು ದೇವಾಲಯಗಳಿವೆ. ಅತಿ ಸರಳವಾದ ರಚನೆಯಿಂದ ಆರಂಭಿಸಿ, ಅತ್ಯಂತ ವಿಶಾಲವಾದ ಮತ್ತು ಭವ್ಯವೆನಿಸುವ ದೇವಾಲಯಗಳ ರಚನೆ ಪಟ್ಟದಕಲ್ಲಿನಲ್ಲಿ ಒಂದೆಡೆಯೇ ಆಗಿರುವುದು ವಿಶೇಷವಾಗಿದೆ. ಪಾಪನಾಥ, ಜಂಬುಲಿಂಗ, ಕಾಶಿ ವಿಶ್ವನಾಥ, ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾರ್ಜುನ, ಗಳಗನಾಥ ಇತ್ಯಾದಿ ದೇವಾಲಯಗಳು ಒಂದರಂತೆ ಮತ್ತೊಂದಿಲ್ಲ. ದ್ರಾವಿಡ ಶಿಖರ, ನಾಗರ ಶಿಖರಗಳೆಲ್ಲವನ್ನೂ ಇಲ್ಲಿ ಒಂದೆಡೆಯೇ ಕಾಣಬಹುದು. ಇವೆಲ್ಲವೂ ಬಹುತೇಕ ಬಾದಾಮಿಯ ಚಾಲುಕ್ಯರ ಕಾಲದಲ್ಲೇ ನಿರ್ಮಾಣವಾಗಿವೆ. ಇಂತಹುದೇ ದೇವಾಲಯಗಳ ಸಂಕೀರ್ಣವನ್ನು ಆಂಧ್ರಪ್ರದೇಶದ ಮೆಹಬೂಬ್ ನಗರ ಜಿಲ್ಲೆಯ ಆಲಂಪುರದಲ್ಲಿ ಕಾಣಬಹುದು. ಬಾದಾಮಿಯ ಚಾಲುಕ್ಯರು ಮತ್ತು ಆನಂತರದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಆಲಂಪುರದಲ್ಲಿ ದೇವಾಲಯ ನಿರ್ಮಾಣದ ಪ್ರಯೋಗಗಳನ್ನು ಮಾಡಿದ್ದಾರೆ.

ಬಾದಾಮಿ ಚಾಲುಕ್ಯರ ನಂತರ ರಾಷ್ಟ್ರಕೂಟರೂ ದೇವಾಲಯಗಳ ನಿರ್ಮಾಣದಲ್ಲಿ ಹಿಂದೆ ಬೀಳಲಿಲ್ಲ. ಕರ್ನಾಟಕದಲ್ಲೂ ಅನೇಕ ರಾಷ್ಟ್ರಕೂಟರ ದೇವಾಲಯಗಳನ್ನು ಗುರುತಿಸಲಾಗಿದೆ. ಆದರೆ ರಾಷ್ಟ್ರಕೂಟರ ವಾಸ್ತುಶಿಲ್ಪಕ್ಕೆ ಎಲ್ಲೋರದ ಕೈಲಾಸ ದೇವಾಲಯಕ್ಕಿಂತ ಬೇರೊಂದು ಉತ್ತಮ ಉದಾಹರಣೆಯನ್ನು ನೀಡುವುದು ಕಷ್ಟ. ಗುಡ್ಡವೊಂದನ್ನು ಕಡಿದು ಬಂಡೆಯನ್ನು ಬೇರ್ಪಡಿಸಿಕೊಂಡು

ಮೊದಲು ಹೊರಭಾಗವನ್ನೂ, ನಂತರ ಗುಹೆಯಂತೆ ಒಳಭಾಗವನ್ನೂ ಕೊರೆದು ಮಾಡಿರುವ ದ್ರಾವಿಡ ಶೈಲಿಯ ಈ ದೇವಾಲಯವು ಅದ್ಭುತಕ್ಕೊಂದು ಉದಾಹರಣೆಯಾಗಿದೆ. ಗರ್ಭಗೃಹದಲ್ಲಿನ ಲಿಂಗಸಹಿತ ಇಡೀ ದೇವಾಲಯವು ಏಕಶಿಲೆಯ ನಿರ್ಮಾಣ, ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳೆಲ್ಲವನ್ನೂ ಹೊಂದಿರುವ ಕೈಲಾಸ ದೇವಾಲಯದ ಹೊರಭಿತ್ತಿಯ ಶಿಲ್ಪಗಳಂತೂ ಪ್ರಮಾಣಬದ್ಧ, ಭಾವಪೂರ್ಣ ಮತ್ತು ವೈವಿಧ್ಯಮಯವಾದುವು.

ರಾಷ್ಟ್ರಕೂಟರ ನಂತರ ಕರ್ನಾಟಕವನ್ನಾಳಿದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಪ್ರೌಢಾವಸ್ಥೆಯನ್ನು ತಲುಪಿತು. ತಲವಿನ್ಯಾಸವು ಚೌಕ ಅಥವಾ ಆಯತಾಕಾರದಲ್ಲಿದ್ದು ವಿಸ್ತಾರವು ಹೆಚ್ಚಿತು. ಮಾಡಿನ ತೂಕವನ್ನು ತಡೆಯಲು ಹೆಚ್ಚು ಕಂಬಗಳು ಬೇಕಾದವು. ಭಿತ್ತಿಯಲ್ಲಿ ಕಿರುಗಂಬಗಳನ್ನು ಕೆತ್ತಲಾಯಿತು. ಹೆಚ್ಚು ಅಲಂಕಾರ ಶಿಲ್ಪಗಳ ರಚನೆಯಾಯಿತು. ಕಂಬಗಳ ಮೇಲೂ ಶಿಲ್ಪಗಳು ಸ್ಥಳ ಪಡೆದವು. ವಿಸ್ತಾರವಾದ ಅಲಂಕಾರಯುಕ್ತ ಬಾಗಿಲುವಾಡಗಳನ್ನು ಬಳಸಲಾಯಿತು. ಗರ್ಭಗೃಹ, ಅಂತರಾಳ ಅಥವಾ ಸುಖನಾಸಿ, ನವರಂಗ ಹಲವು ಕಂಬಗಳ ತೆರೆದ ಮುಖಮಂಟಪಗಳಿಂದಾಗಿ ದೇವಾಲಯಗಳೂ ವಿಸ್ತಾರವಾದವು. ದೇವಾಲಯಗಳು ಸಾಮಾಜಿಕ ಕೇಂದ್ರಗಳೂ ಆದುವು. ಮೊದಲಿಗೆ ಧಾರ್ಮಿಕವಾಗಿ ಕೇವಲ ಆಯಾ ಕಾಲದ ಅವಶ್ಯಕತೆಗಳಿಗೆ ತಕ್ಕಂತೆ ಮಾರ್ಪಾಡು ಹೊಂದಿದ ದೇವರ ನೆಲೆಗೆ ಪ್ರಾಧಾನ್ಯತೆ ನೀಡಿದ ದೇವಾಲಯಗಳು, ನಂತರ ಸಾಮಾಜಿಕವಾಗಿ ಶಿಲ್ಪ, ನೃತ್ಯ, ಸಂಗೀತ ಇತ್ಯಾದಿ ಕಲೆಗಳ ಕೇಂದ್ರಗಳಾದುವು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕುರುವತ್ತಿ, ಡಂಬಳ, ಲಕ್ಕುಂಡಿ, ಗದಗ, ಬಾಗಳಿ, ಕುಕ್ಕನೂರು, ಸಿರಿವಾಳ, ಇಟಗಿ, ಲಕ್ಷ್ಮೇಶ್ವರ, ನಾಗಾವಿ, ಬಳ್ಳಿಗಾವೆ, ಬಿಜಾಪುರ ಮುಂತಾದ ಸ್ಥಳಗಳಲ್ಲಿ ೫೦೦ಕ್ಕೂ ಹೆಚ್ಚು ದೇವಾಲಯಗಳು ನಿರ್ಮಾಣವಾಗಿವೆ. ಶೈವ, ವೈಷ್ಣವ ದೇವಾಲಯಗಳಲ್ಲದೆ ಅನೇಕ ಬಸದಿಗಳೂ ಈ ಕಾಲದಲ್ಲಿ ನಿರ್ಮಾಣವಾಗಿವೆ. ತುಂಗಭದ್ರಾ ನದಿಯ ಉತ್ತರ ಭಾಗದ ಕರ್ನಾಟಕದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳು ಹೆಚ್ಚಾಗಿ ಕಾಣುತ್ತವೆ. ಕಲ್ಯಾಣ ಚಾಲುಕ್ಯರ ಸಮಕಾಲೀನರಾಗಿ ಅವರ ಸಾಮಂತರಾಗಿಯೇ ಆಳಿದ ಹೊಯ್ಸಳರು ಕರ್ನಾಟಕದ ವಾಸ್ತು ಶಿಲ್ಪಕ್ಕೆ ಸಲ್ಲಿಸಿರುವ ಕಾಣಿಕೆ ಅಮೋಘವಾದುದು. ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಪ್ರದೇಶದ ಡಂಬಳದ ದೊಡ್ಡ ಬಸಪ್ಪ ದೇವಾಲಯದ ಗರ್ಭಗೃಹದ ನಕ್ಷತ್ರಾಕಾರ ತಲವಿನ್ಯಾಸವು, ಆನಂತರ ಹೊಯ್ಸಳರ ಕಾಲದಲ್ಲಿ ಹೆಚ್ಚು ಪ್ರಚಲಿತಗೊಂಡಿತು. ನಕ್ಷತ್ರಾಕಾರದ ತಲವಿನ್ಯಾಸದಿಂದ ಹೊರಭಿತ್ತಿಯ ವಿಸ್ತಾರ ಹೆಚ್ಚಿತು. ಇದರಿಂದಾಗಿ ಅಲಂಕರಣಕ್ಕೆ ಮತ್ತಷ್ಟು ಸ್ಥಳ ದೊರೆತಂತಾಯಿತು. ಗೋಡೆಗಳ ಗಾತ್ರ ಹೆಚ್ಚಿದ್ದರಿಂದ ದೇವಾಲಯದ ಎತ್ತರ ಕಡಿಮೆಯಾಯಿತು. ಹೊಯ್ಸಳರು ಸುಮಾರು ೨೫೦ಕ್ಕೂ ಹೆಚ್ಚು ಸಣ್ಣ ಮತ್ತು ದೊಡ್ಡ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಆರಂಭ ಕಾಲದ ಸರಳತೆ ಮಾಯವಾಗಿ, ದೇವಾಲಯಗಳಲ್ಲಿ ಅಲಂಕರಣ ಹೆಚ್ಚಿತು. ಎಲ್ಲೂ ಎಡೆಬಿಡದಂತೆ ಕುಸುರಿಗೆಲಸದಿಂದ ಅಲಂಕರಣಗೊಂಡ ಶಿಲ್ಪಗಳು ದೇವಾಲಯವನ್ನು ಅಲಂಕರಿಸಿದವು. ಮದನಿಕೆಯರ ವಿಗ್ರಹಗಳು ಮಹತ್ವದ ಸ್ಥಾನ ಪಡೆದವು. ಇವೆಲ್ಲವು ದೇವಾಲಯ ಸೌಂದರ್ಯವನ್ನು ಹೆಚ್ಚಿಸಲು ಅವಶ್ಯಕವಾಗಿದ್ದುವು. ಅಂತೆಯೇ ಕಡಿಮೆ ಎತ್ತರದ ದೇವಾಲಯಕ್ಕೆ ಭವ್ಯತೆಯನ್ನು ದೊರಕಿಸಲು ಎತ್ತರವಾದ ವೇದಿಕೆ ಅಥವಾ ಜಗತಿಗಳೂ ಅವಶ್ಯಕವಾದುವು. ಎತ್ತರವಾದ ಜಗತಿಯ ಪ್ರದಕ್ಷಿಣಾ ಪಥದ ಸಹಿತ ನಿರ್ಮಾಣವಾದ ನಕ್ಷತ್ರಾಕಾರದ

ತಲವಿನ್ಯಾಸವು ದೇವಾಲಯಗಳ, ವಿಮಾನವು ಗರ್ಭಗೃಹದ ತಲವಿನ್ಯಾಸಕ್ಕೆ ತಕ್ಕಂತೆ ನಿರ್ಮಾಣವಾದುವು. ಹೊಯ್ಸಳರ ಕಾಲದಲ್ಲಿ ನಕ್ಷತ್ರಾಕಾರದ ತಲವಿನ್ಯಾಸವಿಲ್ಲದ ದೇವಾಲಯಗಳೂ ಅಪರೂಪಕ್ಕೆ ನಿರ್ಮಾಣವಾಗಿವೆ. ಅವುಗಳಲ್ಲಿ ದೊಡ್ಡಗದ್ದವಳ್ಳಿಯ ಲಕ್ಷ್ಮೀ ದೇವಾಲಯ ಒಂದು. ಹೊಯ್ಸಳ ದೇವಸ್ಥಾನಗಳಲ್ಲಿ ಬಹಳ ಮುಖ್ಯವಾಗಿರುವುವೆಂದರೆ ಬೇಲೂರು, ಹಳೇಬೀಡು, ಸೋಮನಾಥಪುರ, ತಲಕಾಡು, ಜಾವಗಲ್, ಬೆಳವಾಡಿ, ಅರಸಿಕೆರೆ, ನುಗ್ಗೇಹಳ್ಳಿ, ವಿಘ್ನಸಂತೆ ಕೋರಮಂಗಲ, ಅಮೃತಾಪುರ, ಕಿಕ್ಕೇರಿ ಮತ್ತಿತರ ಸ್ಥಳಗಳಲ್ಲಿರುವಂತಹುವು.

ಆರಂಭದಲ್ಲಿ ಒಂದೇ ಗರ್ಭಗೃಹವಿದ್ದ ದೇವಾಲಯಗಳು, ಕ್ರಮೇಣ ಒಂದೇ ದೇವಾಲಯದಲ್ಲಿ ಒಂದಕ್ಕಿಂತ ಹೆಚ್ಚು ದೇವತೆಗಳಿಗೆ ಸ್ಥಳ ಮಾಡಿಕೊಡಬೇಕಾದ ಸಂದರ್ಭ ಬಂದಾಗ ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟ ದೇವಾಲಯಗಳಾಗಿ ನಿರ್ಮಾಣವಾದುವು. ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಕಾಲದಲ್ಲಿ ತ್ರಿಕೂಟ ದೇವಾಲಯಗಳ ನಿರ್ಮಾಣ ಹೆಚ್ಚಾಗಿ ಆಗಿದೆ.

ವಿಜಯನಗರ ಕಾಲದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಹೆಚ್ಚಾಗಿ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ಹೆಚ್ಚು ಭಾರವನ್ನು ತಡೆಯಬಲ್ಲ ಕಲ್ಲಿನ ಗುಣದಿಂದಾಗಿ ದೇವಾಲಯಗಳ ಎತ್ತರ ಹೆಚ್ಚಾಯಿತು. ವಿಸ್ತಾರವೂ ಹೆಚ್ಚಿತು. ನವರಂಗ ಮತ್ತು ಮುಖಮಂಟಪಗಳು ವಿಶಾಲವಾದುವು. ಕಂಬಗಳ ಎತ್ತರವೂ ಹೆಚ್ಚಿತು. ಅವಶ್ಯಕತೆಗೆ ತಕ್ಕಂತೆ ದೇವಾಲಯದ ಜೊತೆಗೇ ಕಲ್ಯಾಣ ಮಂಟಪ, ಯಜ್ಞಶಾಲೆ, ಪಾಕಶಾಲೆ, ಊಟೋಪಚಾರಗಳಿಗೆ ವಿಶಾಲವಾದ ಪ್ರಾಂಗಣದಲ್ಲಿ ತೆರೆದ ಮಂಟಪಗಳು ನಿರ್ಮಾಣವಾದುವು. ಎತ್ತರದ ವಿಮಾನಗಳನ್ನು ದ್ರಾವಿಡ ಶೈಲಿಯಲ್ಲಿ ಕಂಬಗಳು, ಅಶ್ವಾರೋಹಿ ಯೋಧನ ಶಿಲ್ಪವಿರುವ ಕಂಬಗಳು ನಿರ್ಮಾಣವಾದುವು. ಎತ್ತರದ ವಿಮಾನಗಳನ್ನು ದ್ರಾವಿಡ ಶೈಲಿಯಲ್ಲಿಯೇ ನಿರ್ಮಿಸಲಾಯಿತು. ಕಂಬಗಳ ರಚನೆ ಸಂಕೀರ್ಣವಾಯಿತು. ಕಿರುಗಂಬಗಳ ಸಹಿತ ಕಂಬಗಳು, ಅಶ್ವಾರೋಹಿ ಯೋಧನ ಶಿಲ್ಪವಿರುವ ಕಂಬಗಳು ನಿರ್ಮಾಣವಾದವು.

ದೇವಾಲಯದ ಹೊರಭಿತ್ತಿಯಲ್ಲಿ ಶಿಲ್ಪಗಳು ಕೆತ್ತಲ್ಪಟ್ಟರೂ, ಕುಸುರಿಗೆಲಸ ಕಡಿಮೆಯಾಯಿತು. ವಿಜಯನಗರದ ಕಾಲದ ಬೃಹತ್ ದೇವಾಲಯಗಳನ್ನು ಹಂಪಿ, ಕೋಲಾರ, ರಂಗಸ್ಥಳ, ವಿರೂಪಾಕ್ಷಿ ಮತ್ತಿತರ ಸ್ಥಳಗಳಲ್ಲಿ ಹೆಚ್ಚಾಗಿ ಕಾಣಬಹುದು. ಕರ್ನಾಟಕದ ಎಲ್ಲೆಡೆ ವಿಜಯನಗರ ಕಾಲದಲ್ಲಿ ದೇವಾಲಯಗಳ ನಿರ್ಮಾಣವಾಗಿದೆ. ಅಲ್ಲದೆ ಹಿಂದಿನ ಅನೇಕ ದೇವಾಲಯಗಳ ಜೀರ್ಣೋದ್ಧಾರವಾಗಿದೆ. ದೇವಾಲಯಗಳ ಸುತ್ತಲೂ ಎತ್ತರದ ಪೌಳಿ ಗೋಡೆಯನ್ನು ಹಾಕಿ, ಭವ್ಯವಾದ ದ್ವಾರವನ್ನು ಎತ್ತರದ ಗೋಪುರದ ಸಹಿತ ನಿರ್ಮಿಸುವುದು ಅಂದಿನ ಪದ್ಧತಿಯಾಗಿದ್ದಂತೆ ತೋರುತ್ತದೆ.

ವಿಜಯನಗರದ ಅರಸರ ಕಾಲದಲ್ಲೇ ಕರ್ನಾಟಕದ ಉತ್ತರದ ಹಲವೆಡೆ ಮುಸಲ್ಮಾನ್ ಧರ್ಮದ ಬಹಮನೀ ಸುಲ್ತಾನರು ಆಳುತ್ತಿದ್ದರು. ಅವರ ಪ್ರಭಾವದಿಂದ ಕರ್ನಾಟಕದ ವಾಸ್ತು ಶಿಲ್ಪವನ್ನು ಮುಸ್ಲಿಂ ಶೈಲಿಯೂ ಆಕ್ರಮಿಸಿತು. ಹಾಗೆ ಸಂಯೋಜಿತವಾದ ಇಂಡೋಸಾರ್ಸೆನಿಕ್ ಶೈಲಿಯ ಕಟ್ಟಡಗಳನ್ನು ಹಂಪಿ, ವಿಜಾಪುರ, ಬಿದರೆ, ಗುಲ್ಬರ್ಗಾ ಇತ್ಯಾದಿ ಸ್ಥಳಗಳಲ್ಲಿ ಕಾಣಬಹುದು. ಹೆಚ್ಚಾಗಿ ಗಾರೆಯನ್ನು ಬಳಸಿ, ಕಮಾನುಗಳಿಗೆ ಮತ್ತು ಮೀನಾರುಗಳಿಗೆ ಆದ್ಯತೆ ನೀಡಿ ನಿರ್ಮಾಣವಾದ ಆ ಶೈಲಿಯ

ಕಟ್ಟಡಗಳಲ್ಲಿ ಹಲವು ಇನ್ನೂ ಒಳ್ಳೆಯ ಸ್ಥಿತಿಯಲ್ಲಿವೆ. ಅವುಗಳಲ್ಲಿ ಮುಖ್ಯವಾದುವೆಂದರೆ, ಹಂಪಿಯ ಕಮಲಮಹಲ್, ಬಿಜಾಪುರದ ಗೋಲ್ ಗುಂಬಜ್, ಇಬ್ರಾಹಿಂ ರೋಜಾ ಇತ್ಯಾದಿಗಳು.

ಪಾಳೆಯಗಾರರಲ್ಲಿ ಅನೇಕರು ವಿಜಯನಗರದ ಶೈಲಿಯನ್ನೇ ಮುಂದುವರೆಸಿದರು. ಇಕ್ಕೇರಿಯ ನಾಯಕರು ವಿಜಯನಗರ ಮತ್ತು ಹೊಯ್ಸಳ ಶೈಲಿಗಳ ಮಿಶ್ರ ಶೈಲಿಯೊಂದನ್ನು ರೂಪಿಸಿಕೊಂಡರು. ಅದಕ್ಕೆ ಇಕ್ಕೇರಿಯ ಅಘೋರೇಶ್ವರ ದೇವಾಲಯವು ಒಂದು ಒಳ್ಳೆಯ ಉದಾಹರಣೆಯಾಗಿದೆ.

ಮೈಸೂರು ಅರಸರ ಕಾಲದಲ್ಲಿ ವಿಜಯನಗರ ಶೈಲಿಯೇ ಮುಂದುವರಿಯಿತಾದರೂ, ಮುಸ್ಲಿಂ ಶೈಲಿಯ ಪ್ರಭಾವದಿಂದಾಗಿ ಗಾರೆಯ ಬಳಕೆಯೂ ಹೆಚ್ಚಿತು. ನಂಜನಗೂಡು, ಶ್ರೀರಂಗಪಟ್ಟಣ, ಮೈಸೂರು ಮುಂತಾದ ಸ್ಥಳಗಳಲ್ಲಿ ಮೈಸೂರು ಅರಸರ ಕಾಲದ ದೊಡ್ಡ ದೇವಾಲಯಗಳಿವೆ.

ಮಳೆ ಹೆಚ್ಚು ಬೀಳುವ ಮಲೆನಾಡು ಮತ್ತು ಕರಾವಳಿ ಪ್ರಾಂತ್ಯಗಳ ದೇವಾಲಯಗಳು, ಅಲ್ಲಿನ ವಾತಾವರಣಕ್ಕೆ ತಕ್ಕಂತೆ ಹೆಚ್ಚಾಗಿ ಜಂಬಿಟ್ಟಿಗೆಯಲ್ಲಿ ನಿರ್ಮಾಣವಾಗಿವೆ. ಇಳಿಜಾರಾದ ಮಾಡುಗಳಿಂದಾಗಿ ನೀರು ಸರಾಗವಾಗಿ ಹರಿದುಹೋಗುತ್ತದೆ. ಗೋಪುರಕ್ಕೆ ಪ್ರಾಶಸ್ತ್ಯ ಕಡಿಮೆ.

ಬ್ರಿಟಿಷರ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ಎತ್ತರದ ಗಾಥಿಕ್ ಶೈಲಿಯ ಹಲವಾರು ಚರ್ಚುಗಳು ನಿರ್ಮಾಣವಾಗಿವೆ. ಬೆಂಗಳೂರಿನ ಟ್ರಿನಿಟಿ ಚರ್ಚ್, ಮೈಸೂರಿನ ಸೆಂಟ್ ಫಿಲೋಮಿನಾ ಚರ್ಚ್, ಮಂಗಳೂರಿನ ಸೆಂಟ್ ಅಲಾಷಿಯಸ್ ಚರ್ಚ್‌ಗಳು ಗಾಥಿಕ್ ಶೈಲಿಗೆ ಉದಾಹರಣೆಗಳಾಗಿವೆ. ಅದೇ ಶೈಲಿಯಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜು, ಅಠಾರಾ ಕಛೇರಿ, ಡ್ಯಾಲಿ ಮೆಮೋರಿಯಲ್ ಹಾಲ್ (ಮಿಥಿಕ್ ಸೊಸೈಟಿ), ಮೈಸೂರಿನ ಮಹಾರಾಜ ಕಾಲೇಜು ಕಟ್ಟಡಗಳು ನಿರ್ಮಾಣಗೊಂಡಿವೆ. ಈ ಸಾಲಿಗೆ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿರುವ ಅರಮನೆಗಳೂ ಸೇರುತ್ತವೆ.

**ಶಿಲ್ಪ ಸಂಪತ್ತು :**

ಕರ್ನಾಟಕದಲ್ಲಿ ಶಿಲ್ಪಕಲೆಯು ನವಶಿಲಾಯುಗದ ಕಾಲದಷ್ಟು ಪ್ರಾಚೀನ. ನವಶಿಲಾಯುಗದ ಕಾಲದಲ್ಲಿ ಮಣ್ಣಿನ ಬೊಂಬೆಗಳನ್ನು ಮಾಡಲು ಬಳಸುತ್ತಿದ್ದ ಅಚ್ಚುಗಳು ದೊರೆತಿವೆ. ಹಲವು ಬೊಂಬೆಗಳೂ ದೊರೆತಿವೆ. ಇವುಗಳಲ್ಲಿ ಹಸು, ಗೂಳಿ, ಕುದುರೆ, ಹುಲಿ, ಆನೆ, ಯಕ್ಷ–ಯಕ್ಷಿ ಇತ್ಯಾದಿ ಗೊಂಬೆಗಳಿವೆ. ಸಾತವಾಹನರ ಕಾಲದಲ್ಲಿ ಶಿಲ್ಪಕ್ಕೆ ವೈಶಿಷ್ಟ್ಯತೆ ದೊರೆಯಿತು. ಬನವಾಸಿಯ ನಾಗರಕಲ್ಲಿನ ಶಿಲ್ಪ, ಸನ್ನತಿಯಲ್ಲಿ ದೊರೆತಿರುವ ಆಯಕ ಸ್ತಂಭಗಳ ಮೇಲಿನ ಶಿಲ್ಪಗಳು ಆರಂಭಕಾಲದ ಶಿಲ್ಪ ಸಂಪತ್ತಿನ ಉತ್ತಮ ಉದಾಹರಣೆಗಳಾಗಿವೆ. ಇಂತಹ ಆಯಕ ಸ್ತಂಭಗಳನ್ನು ಆ ಕಾಲದ ಜನ (ಛಆ ಪಥರೋ) ಛಾಯಾಶಿಲೆ ಎಂದು ಕರೆದಿದ್ದಾರೆ.

ದೇವಾಲಯಗಳ ಜೊತೆ ಜೊತೆಗೇ ಶಿಲ್ಪಕಲೆಯೂ ಬೆಳೆದಿದೆ. ಬಾದಾಮಿಯ ಗುಹಾಲಯಗಳಲ್ಲಿ ಕಾಣುವ ಹದಿನೆಂಟು ಕೈಗಳ ಮಹಾನಟ ಹರಿಹರ, ಅರ್ಧನಾರೀಶ್ವರ, ವಿಷ್ಣು, ಭೂವರಾಹ ಇತ್ಯಾದಿ ಉಬ್ಬುಶಿಲ್ಪಗಳು ಅತ್ಯಂತ ಪ್ರೌಢವಾಗಿವೆ. ಪೂರ್ಣ ಪ್ರಮಾಣದ ಈ ಶಿಲ್ಪಗಳು ಭಾವಪೂರ್ಣವಾಗಿಯೂ

ಇವೆ. ಅದೇ ಕಾಲದಲ್ಲಿ ಐಹೊಳೆಯ ರಾವಳಫಡಿ ಗುಹೆಗಳಲ್ಲಿ ಕೆತ್ತಲಾಗಿರುವ ನಟರಾಜ, ಸಪ್ತಮಾತೃಕೆಯರು ಇತ್ಯಾದಿ ಶಿಲ್ಪಗಳೂ ಮಹತ್ವ ಪಡೆದಿವೆ. ದೇವತೆಗಳ ಶಿಲ್ಪಗಳಿಗೆ ಮಾತ್ರವಲ್ಲದೆ ಐಹೊಳೆಯ ದೇವಾಲಯಗಳಲ್ಲಿ ಸಮಕಾಲೀನ ಜನರ ರಸಿಕತೆಯನ್ನು ಬಿಂಬಿಸುವ ಶಿಲ್ಪಗಳನ್ನೂ ಕಾಣಬಹುದು.

ಪುರಾಣದ ಕಥೆಗಳನ್ನು ಶಿಲ್ಪಗಳ ಮೂಲಕ ನಿರೂಪಿಸುವ ಪ್ರಯತ್ನಕ್ಕೂ ದೇವಾಲಯಗಳು ಅವಕಾಶ ನೀಡಿವೆ. ಕಂಬಗಳು, ಭಿತ್ತಿಗಳು, ಪಟ್ಟಿಕೆಗಳು ಇಂತಹ ಶಿಲ್ಪಗಳ ಕೆತ್ತನೆಗೆ ಸ್ಥಳ ನೀಡಿವೆ.

ಬಾದಾಮಿಯ ಚಾಲುಕ್ಯರ ದೇವಾಲಯಗಳಲ್ಲಿ ಪ್ರೌಢಾವಸ್ಥೆಯನ್ನು ತಲುಪಿದ ಶಿಲ್ಪಕಲೆಯು ರಾಷ್ಟ್ರಕೂಟರ ಕಾಲದಲ್ಲೂ ಮುಂದುವರೆಯಿತು. ಎಲ್ಲೋರ ಮತ್ತು ಎಲಿಫೆಂಟಾಗಳಲ್ಲಿ ರಾಷ್ಟ್ರಕೂಟ ಶಿಲ್ಪಿಗಳು ಕೆತ್ತಿರುವ ಹಲವಾರು ಶಿಲ್ಪಗಳು ಗಮನಾರ್ಹವಾಗಿವೆ. ಅವುಗಳಲ್ಲಿ ಎಲಿಫೆಂಟಾದ ತ್ರಿಮೂರ್ತಿ ಶಿವನ ಶಿಲ್ಪವಂತೂ ಎಲ್ಲ ಶಿಲ್ಪಾಸಕ್ತರೂ ಮೆಚ್ಚಿರುವಂತಹುದು.

ವೀರಗಲ್ಲುಗಳ ಮೇಲಿನ ಶಿಲ್ಪಗಳು ನಿರೂಪಣಾ ಪ್ರಧಾನವಾದುವು. ಅವುಗಳಲ್ಲಿ ಬೇಗೂರಿನ ವೀರಗಲ್ಲು ಶಿಲ್ಪವು ಅತ್ಯಂತ ವಿವರಪೂರ್ಣವಾದುದು. ಯುದ್ಧ, ಯುದ್ಧಭೂಮಿ ಯುದ್ಧದ ಪರಿಣಾಮಗಳನ್ನು ಸಮರ್ಥವಾಗಿ ಕಡೆದಿಟ್ಟಿರುವ ಬೇಗೂರಿನ ವೀರಗಲ್ಲಿನಂತೆಯೇ ಇನ್ನೂ ಅನೇಕ ವೀರಗಲ್ಲುಗಳು ಸಮಕಾಲೀನ ಯುದ್ಧ ಮತ್ತು ವೀರಮರಣಗಳ ದೃಶ್ಯ ದಾಖಲೆಗಳಾಗಿವೆ. ಕಲ್ಯಾಣ ಚಾಲುಕ್ಯರ ಕಾಲಕ್ಕೆ ಮೊದಲಿನ ಶಿಲ್ಪಗಳಲ್ಲಿ ಪ್ರಮಾಣ, ಸರಳತೆಯಿಂದ ಕೂಡಿದ ಭಾವ, ಗಾಂಭೀರ್ಯತೆಗಳು ದಟ್ಟವಾಗಿ ಕಂಡುಬಂದರೆ, ಆ ನಂತರದ ಕಾಲದಲ್ಲಿ ಶಿಲ್ಪಗಳ ಪ್ರಮಾಣ ಕಡಿಮೆಯಾಗಿ ಶ್ರೀಮಂತವೆನಿಸುವ ಅಲಂಕರಣ, ಕುಸುರಿ ಕೆಲಸಗಳು ಗಾಂಭೀರ್ಯತೆಗೆ ಕುಂದುತಂದಿವೆ. ಅಧಿಷ್ಠಾನದ ಪಟ್ಟಿಕೆಗಳಲ್ಲಿ ಪ್ರಾಣಿಗಳ, ಪಕ್ಷಿಗಳ, ಯೋಧರ ಶಿಲ್ಪಗಳು, ಭಿತ್ತಿಗಳಲ್ಲಿ ದೇವತೆಗಳ ಶಿಲ್ಪಗಳು, ಪುರಾಣದ ಕಥೆಗಳು, ಕೋಷ್ಠಗಳಲ್ಲಿನ ಶಿಲ್ಪಗಳು ಅಧಿಕವಾದುವು. ಕಂಬಗಳೂ, ಬಾಗಿಲುವಾಡಗಳೆಲ್ಲವೂ ಶಿಲ್ಪಗಳಿಂದ ಅಲಂಕೃತವಾದುವು.

ಗಂಗರ ಆಳ್ವಿಕೆಯ ಕಾಲದ ಕೊನೆಯ ಭಾಗಕ್ಕಾಗಲೇ ಕರ್ನಾಟಕದಲ್ಲಿ ಶಿಲ್ಪಕಲೆಯು ತಲುಪಿದ್ದ ಅತ್ಯುಚ್ಚ ಸ್ಥಿತಿಗೆ ಶ್ರವಣಬೆಳಗೊಳದ ಗೊಮ್ಮಟೇಶ್ವರನ ಏಕಶಿಲಾಮೂರ್ತಿಗಿಂತ ಉತ್ತಮ ಉದಾಹರಣೆ ಬೇರೊಂದಿಲ್ಲ. ಆ ವೇಳೆಗಾಗಲೇ ಹಲವು ತೀರ್ಥಂಕರರ ವಿಗ್ರಹಗಳು ಕೆತ್ತಲ್ಪಟ್ಟಿದ್ದವು. ಗಾರೆಯ ಗಚ್ಚಿನ ಶಿಲ್ಪಗಳ ರಚನೆಯೂ ಆಗುತ್ತಿತ್ತು. ಅದಕ್ಕೆ ಕೋಲಾರದಲ್ಲಿರುವ ಸಪ್ತಮಾತೃಕೆಯರ ಗಚ್ಚಿನ ಶಿಲ್ಪಗಳೇ ಉದಾಹರಣೆಯಾಗಿವೆ. ಶ್ರವಣಬೆಳಗೊಳದ ಗೊಮ್ಮಟನ ಶಿಲ್ಪವನ್ನು ಮೀರಿಸುವಂಥ ಶಿಲ್ಪ ಈವರೆಗೆ ಮತ್ತೆ ನಿರ್ಮಾಣವಾಗಿಲ್ಲ. ಶ್ರವಣಬೆಳಗೊಳದ ನಂತರ ಕಾರ್ಕಳ, ಮೂಡಬಿದಿರೆ, ಗೊಮ್ಮಟಗಿರಿ, ವೇಣೂರು, ಧರ್ಮಸ್ಥಳ ಇತ್ಯಾದಿ ಸ್ಥಳಗಳಲ್ಲಿ ಬಾಹುಬಲಿಯ ಶಿಲ್ಪಗಳು ನಿರ್ಮಾಣವಾಗಿದ್ದರೂ ಯಾವುವೂ ಶ್ರವಣಬೆಳಗೊಳದ ಗೊಮ್ಮಟನನ್ನು ಮೀರಿಸುವುದಿಲ್ಲ. ಶ್ರವಣಬೆಳಗೊಳದ ಗೊಮ್ಮಟ ಶಿಲ್ಪದ ಎತ್ತರ ೫೮ ಅಡಿ ೮ ಅಂಗುಲ. ಇದರ ಪ್ರತಿಷ್ಠಾಪನೆಯ ಕಾಲ ಕ್ರಿ. ಶ. ೯೮೩, ಆನಂತರದ ಗೊಮ್ಮಟನ ಶಿಲ್ಪಗಳೆಲ್ಲವೂ ೧೫ನೆಯ ಶತಮಾನದ ನಂತರ ನಿರ್ಮಾಣವಾದುವು.

ಕಲ್ಯಾಣ ಚಾಲುಕ್ಯರ ಸಮಕಾಲೀನರಾದ ಹೊಯ್ಸಳರ ಕಾಲದಲ್ಲಿ ಶಿಲ್ಪಕಲೆ ಮತ್ತಷ್ಟು ಬೆಳೆಯಿತು. ನಕ್ಷತ್ರಾಕಾರದ ವಿನ್ಯಾಸದ ದೇವಾಲಯಗಳ ಭಿತ್ತಿಗಳು, ಶಿಲ್ಪಗಳ ಕೆತ್ತನೆಗೆ ಹೆಚ್ಚು ಸ್ಥಾವಕಾಶ ನೀಡಿದುವು. ಪುರಾಣದ ಕಥೆಗಳು, ರಾಮಾಯಣ, ಮಹಾಭಾರತ, ಭಾಗವತದ ಕಥೆಗಳು, ಪಂಚತಂತ್ರದ ಕಥೆಗಳು ಶಿಲ್ಪಗಳ ಮೂಲಕ ನಿರೂಪಿತವಾದುವು. ಎಲ್ಲಕ್ಕಿಂತ ಮಿಗಿಲಾಗಿ ಮದನಿಕೆಯರ ಶಿಲ್ಪಗಳು ದೇವಾಲಯಗಳಲ್ಲಿ ವಿಶಿಷ್ಟ ಸ್ಥಾನ ಪಡೆದುವು. ಕುರುವತ್ತಿ, ಕಿಕ್ಕೇರಿ, ಬೇಲೂರು ದೇವಾಲಯಗಳಲ್ಲಿ ಮದನಿಕೆಯರ ಶಿಲ್ಪಗಳ ಆಕರ್ಷಣೆಯೇ ಹೆಚ್ಚು. ಅಂತಹ ಶಿಲ್ಪಗಳಿಗೆ ದೊರೆತ ಕಲ್ಲು ಶಿಲ್ಪಿಗಳ ಕೈಚಳಕಕ್ಕೆ ಅನುಕೂಲಕರವಾಗಿದ್ದುವು. ಶಿಲೆಯನ್ನು ಮೇಣದಂತೆ ಉಪಯೋಗಿಸಿ ಈ ಶಿಲ್ಪಗಳನ್ನು ಕಡೆಯಲಾಗಿದೆ. ಸ್ವತಂತ್ರ ಶಿಲ್ಪಗಳು, ಅರೆಯುಬ್ಬು ಶಿಲ್ಪಗಳು ೧೦ ರಿಂದ ೧೩ನೆಯ ಶತಮಾನದವರೆಗೆ ಅಧಿಕವಾಗಿ ಕಾಣುತ್ತವೆ. ಜಲಸಂಗ್ವಿಯ ಶಾಸನ ಸುಂದರಿಯ ಶಿಲ್ಪ, ಬಳ್ಳಿಗಾವೆಯ ತಾರಾಭಗವತಿ, ಉಮಾಮಹೇಶ್ವರ ಇತ್ಯಾದಿ ಶಿಲ್ಪಗಳು ಕಲ್ಯಾಣ ಚಾಲುಕ್ಯರ ಕಾಲದ ಉತ್ತಮ ಶಿಲ್ಪ ಮಾದರಿಗಳು.

ವಿಜಯನಗರದ ಕಾಲದಲ್ಲಿ ಬೃಹತ್ ದೇವಾಲಯಗಳು ನಿರ್ಮಾಣವಾದರೂ, ದೇವಾಲಯಗಳಲ್ಲಿ ಶಿಲ್ಪಕಲೆಗೆ ಹೆಚ್ಚಿನ ಆದ್ಯತೆ ದೊರೆತಿಲ್ಲ. ಭಿತ್ತಿಯ ಹೊರಗೆ ಉಬ್ಬುಶಿಲ್ಪಗಳು ಕಂಡುಬಂದರೂ, ಅವುಗಳಲ್ಲಿ ಒರಟುತನವೇ ಅಧಿಕ. ಆದರೆ ಸ್ವತಂತ್ರವಾಗಿ ಬೃಹದಾಕಾರದ ಶಿಲ್ಪಗಳು ಆಗ ನಿರ್ಮಾಣವಾದುವು. ಅವುಗಳಲ್ಲಿ ಹಂಪಿಯ ಕಡಲೆಕಾಳು ಗಣಪತಿ, ಸಾಸಿವೆಕಾಳು ಗಣಪತಿ, ಲಕ್ಷ್ಮೀ ನರಸಿಂಹ ಇತ್ಯಾದಿ ಶಿಲ್ಪಗಳು ಪ್ರಮುಖ. ಶಿಲ್ಪಿಗಳ ದೃಷ್ಟಿಯಿಂದ ವಿಜಯನಗರದ ಕಾಲ ಇಳಿಮುಖದ ಕಾಲ. ಮೈಸೂರು ಅರಸರ ಕಾಲದಲ್ಲಿ ಶಿಲ್ಪಕಲೆ ಮತ್ತಷ್ಟು ಹಿಂದೆ ಸರಿಯಿತು. ದೇವಾಲಯಗಳಲ್ಲಿ ಕಲ್ಲಿಗಿಂತಲೂ ಹೆಚ್ಚಾಗಿ ಗಾರೆಯ ಬಳಕೆಯಾಗಿರುವುದರಿಂದ ಪೌಳಿಯ ಗೋಡೆಗಳ ಮೇಲೆ ಕೋಷ್ಠಗಳಲ್ಲಿ ಮಾತ್ರ ಗಾರೆಯ ಶಿಲ್ಪಗಳು ನಿರ್ಮಾಣವಾದವು. ನಂಜನಗೂಡು, ಮೈಸೂರು ಇತ್ಯಾದಿ ಸ್ಥಳಗಳಲ್ಲಿ ಇಂತಹ ಗಾರೆಯ ಶಿಲ್ಪಗಳಿವೆ.

ಲೋಹಶಿಲ್ಪವೂ ಕರ್ನಾಟಕದಲ್ಲಿ ಪ್ರಾಶಸ್ತ್ಯ ಪಡೆದಿದೆ. ದೇವಾಲಯಗಳಲ್ಲಿನ ಉತ್ಸವ ಮೂರ್ತಿಗಳ ಶಿಲ್ಪಗಳು, ಲೋಹ ಶಿಲ್ಪ ಬೆಳೆಯಲು ಅವಕಾಶ ನೀಡಿದವು. ಲೋಹದಲ್ಲಿ ನಟರಾಜ ಶಿಲ್ಪಗಳು ಹೆಚ್ಚಿಗೆ ಸಿಗುತ್ತವೆ. ಮೈಸೂರು ಅರಸರ ಕಾಲದಲ್ಲಿ ಲೋಹಶಿಲ್ಪಗಳು ಅಧಿಕವಾಗಿ ನಿರ್ಮಾಣವಾಗಿವೆ.

## ಚಿತ್ರ ಸಂಪತ್ತು :

ಪ್ರಾಗಿತಿಹಾಸ ಕಾಲದ ಜನರು ತಾವು ವಾಸಿಸುತ್ತಿದ್ದ ಗುಹೆಗಳಲ್ಲಿ ಹೆಚ್ಚಾಗಿ ಕೆಮ್ಮಣ್ಣಿನಲ್ಲಿ ಅಪರೂಪಕ್ಕೆ ಬಿಳಿಯ ಬಣ್ಣಗಳಲ್ಲಿ ಬಿಡಿಸಿರುವ ಚಿತ್ರಗಳು ಬಳ್ಳಾರಿ, ಬಿಜಾಪುರ, ರಾಯಚೂರು, ಗುಲ್ಬರ್ಗಾ, ಚಿತ್ರದುರ್ಗ ಜಿಲ್ಲೆಗಳಲ್ಲಿ ದೊರೆತಿವೆ. ಮಾನವರ ಮತ್ತು ಪ್ರಾಣಿಗಳ ಚಿತ್ರಗಳೇ ಇಲ್ಲಿ ಹೆಚ್ಚು. ಕೆಲವೆಡೆ ಕಲ್ಲಿನ ಮೇಲೆ ಗೀರಿ ಬರೆದ ಚಿತ್ರಗಳೂ ಕಂಡುಬಂದಿವೆ. ತೆಕ್ಕಲಕೋಟೆ, ಸಂಗನಕಲ್ಲು, ಗೊಂಬಿಗುಡ್ಡ ಮುಂತಾದ ಸ್ಥಳಗಳಲ್ಲಿ ಗೂಳಿ, ಹಸು, ಜಿಂಕೆ ಮುಂತಾದ ಪ್ರಾಣಿಗಳ ಚಿತ್ರಗಳಿವೆ. ನೂತನ ಶಿಲಾಯುಗದ ಮತ್ತು ಬೃಹತ್ ಶಿಲಾಯುಗಗಳ ಕಾಲದಲ್ಲಿ ಬೇಟೆಗಾರರ ಚಿತ್ರಗಳೂ ರಚಿತವಾಗಿವೆ.

ಮಡಕೆಗಳ ಮೇಲೆ ಚಿತ್ರಗಳನ್ನು ಬಿಡಿಸುವುದನ್ನು ಬೃಹತ್ ಶಿಲಾಯುಗ ಮತ್ತು ತಾಮ್ರಯುಗದ ಜನ ತಿಳಿದಿದ್ದರು. ಬ್ರಹ್ಮಗಿರಿ, ಚಂದ್ರವಳ್ಳಿ, ಹೆಮ್ಮಿಗೆ, ವಡಗಾಂವ–ಮಾಧವಪುರ, ಮಸ್ಕಿ ಇತ್ಯಾದಿ ಸ್ಥಳಗಳಲ್ಲಿ ಚಿತ್ರಗಳಿರುವ ಮಡಕೆಗಳು ದೊರೆತಿವೆ

ಇತಿಹಾಸ ಕಾಲದಲ್ಲಿ ವರ್ಣಚಿತ್ರಗಳ ರಚನೆಗೆ ಪ್ರಾಧಾನ್ಯತೆ ದೊರೆತಿರುವುದಷ್ಟೇ ಅಲ್ಲದೆ, ಅವು ಪ್ರೌಢಾವಸ್ಥೆಯನ್ನೂ ತಲುಪಿವೆ. ಬಾದಾಮಿಯ ವೈಷ್ಣವ ಗುಹೆಯಲ್ಲಿರುವ ರಾಜನ ಒಡ್ಡೋಲಗ ಚಿತ್ರವೂ ಈ ನಿಟ್ಟಿನಲ್ಲಿ ವಿಶೇಷವಾಗಿ ಉಲ್ಲೇಖನೀಯವಾದುದು.

ದೇವಾಲಯಗಳು ಮತ್ತು ಮಠಗಳು ಚಿತ್ರಕಲೆಗೆ ಹೆಚ್ಚಿನ ಅವಕಾಶ ನೀಡಿದವು. ಓಲೆಗರಿಯ ಗ್ರಂಥಗಳ ಹೊರಗಿನ ರಕ್ಷಣೆಯ ಮರದ ಕಟ್ಟುಗಳ ಮೇಲೂ ಚಿತ್ರಗಳು ಸ್ಥಾನ ಪಡೆದವು.

ಧವಲಾ, ಜಯಧವಲಾ ಮತ್ತು ಮಹಾಧವಲಾ ಎಂಬ ಹೆಸರಿನ ಜೈನ ಗ್ರಂಥಗಳ ಪ್ರತಿ ಓಲೆಯ ಎರಡೂ ಅಂಚುಗಳಲ್ಲಿ ಕಿರು ಚಿತ್ರಗಳಿವೆ. ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ಶ್ರವಣಬೆಳಗೊಳದ ಶಾಂತಿನಾಥ ಬಸದಿಯ ಗೋಡೆಗಳು ಮತ್ತು ಚಾವಣಿಗಳು ಚಿತ್ರಗಳಿಂದ ಅಲಂಕೃತವಾಗಿದ್ದುವು ಎಂದು ತಿಳಿದುಬಂದಿದೆ.

ವಿಜಯನಗರ ಕಾಲದ ಹಲವು ದೇವಾಲಯಗಳ ಚಾವಣಿಗಳಲ್ಲಿ ಚಿತ್ರಗಳಿವೆ. ಹಂಪೆಯ ವಿರೂಪಾಕ್ಷ ದೇವಾಲಯದ ಮುಂದಿನ ರಂಗಮಂಟಪದ ಒಳಚಾವಣಿ ಮತ್ತು ಸುತ್ತಣ ತೊಲೆಗಳಲ್ಲಿ ಶಿವಪುರಾಣದ ವರ್ಣಚಿತ್ರಗಳಿವೆ. ಹರದನಹಳ್ಳಿ, ಮಾಗಡಿ ಮತ್ತಿತರ ಸ್ಥಳಗಳ ದೇವಾಲಯಗಳಲ್ಲಿ ವರ್ಣಚಿತ್ರಗಳಿವೆ.

ಬಿಜಾಪುರದ ಬಹಮನಿ ಸುಲ್ತಾನರ ಕಾಲದಲ್ಲಿ ಮುಘಲ್ ಶೈಲಿಯ ಚಿತ್ರಗಳ ರಚನೆ ಹೆಚ್ಚಾಗಿ ಆಗಿವೆ. ಬಿಜಾಪುರ, ಬೀದರ್‌ಗಳ ಹಲವಾರು ಕಟ್ಟಡಗಳಲ್ಲಿ ಮಾತ್ರವಲ್ಲದೆ, ಆ ಕಾಲದ ಹಸ್ತಪ್ರತಿಗಳಲ್ಲೂ ವರ್ಣಚಿತ್ರಗಳನ್ನು ಕಾಣಬಹುದು.

ಮೈಸೂರು ಅರಸರ ಕಾಲದಲ್ಲಿ ಶ್ರವಣಬೆಳಗೊಳ, ಮೈಸೂರು ಮತ್ತಿತರ ಸ್ಥಳಗಳಲ್ಲಿ ಚಿತ್ರಗಳನ್ನು ರಚಿಸಲಾಗಿದೆ. ಇವುಗಳಲ್ಲಿ ಶ್ರವಣಬೆಳಗೊಳದ ಜೈನ ಮಠದಲ್ಲಿರುವ ಮತ್ತು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿರುವ ವರ್ಣಚಿತ್ರಗಳು ಬಹುಮುಖ್ಯವಾಗಿವೆ. ಟಿಪ್ಪುವಿನ ಕಾಲದಲ್ಲಿ ಶ್ರೀರಂಗಪಟ್ಟಣ, ಬೆಂಗಳೂರುಗಳ ಅನೇಕ ಕಟ್ಟಡಗಳಲ್ಲಿ ಭಿತ್ತಿಚಿತ್ರಗಳ ರಚನೆಯಾಗಿದೆ. ಸೀಬಿಯ ನರಸಿಂಹಸ್ವಾಮಿ ದೇವಾಲಯದಲ್ಲಿರುವ ವರ್ಣಚಿತ್ರಗಳೂ ಆ ಕಾಲಕ್ಕೆ ಸೇರಿದವು. ಮೈಸೂರು ಅರಸರ ಕಾಲದಲ್ಲಿ ಮೈಸೂರು ಶೈಲಿಯದು ಎಂದೇ ಪ್ರಖ್ಯಾತವಾದ ಚಿತ್ರಗಳು ಹೆಚ್ಚು ಪ್ರಸಿದ್ಧಿ ಪಡೆದವು.

ಆಧುನಿಕ ಕಾಲದಲ್ಲಿ ಕರ್ನಾಟಕ ಚಿತ್ರಕಲೆಯು ಕೆ. ವೆಂಕಟಪ್ಪ, ಎಸ್. ನಂಜುಂಡಸ್ವಾಮಿ, ಎಸ್. ಆರ್. ಸ್ವಾಮಿ, ಎಚ್. ಎಸ್. ಇನಾಮಿತಿ, ಎಸ್. ಎಂ. ಪಂಡಿತ್, ವೈ. ಎಸ್. ರಾಜು, ಎಸ್. ಎಸ್. ಕುಕ್ಕೆ, ಆರ್. ಸೀತಾರಾಮ್, ಎಂ. ವಿ. ಮಿಣಜಗಿ, ಎಂ.ಟಿ.ವಿ. ಆಚಾರ್ಯ, ಆರ್. ಎಸ್. ನಾಯ್ಡು, ವೈ, ನಾಗರಾಜು, ಎಸ್. ಆರ್. ಅಯ್ಯಂಗಾರ್, ಎಂ. ಎಚ್. ರಾಮು ರುಮಾಲೆ ಚನ್ನಬಸವಯ್ಯ, ಕೆ. ಕೆ.

ಹೆಬ್ಬಾರ್, ಪಿ. ಆರ್. ತಿಪ್ಪೇಸ್ವಾಮಿ, ಆರ್. ಎಂ. ಹಡಪದ, ಜಿ. ಎಸ್. ಶೆಣೈ, ಎಸ್. ಜಿ. ವಾಸುದೇವ, ಚಂದ್ರನಾಥ್, ವಿ. ಜಿ. ಅಂದಾನಿ ಮುಂತಾದವರಿಂದ ಬೆಳೆದು ಹೆಸರು ಪಡೆಯುತ್ತಿದೆ. ಹಿಂದೆ ರಾಜಮನೆತನಗಳು, ಗುರುಮನೆಗಳು ಚಿತ್ರಕಲೆ ಬೆಳೆಯಲು ಪ್ರೋತ್ಸಾಹಿಸಿದವು. ಈಗ ಸರ್ಕಾರವೇ ಆ ಕೆಲಸವನ್ನು ಮಾಡುತ್ತಿದೆ.

ವ್ಯಂಗ್ಯ ಚಿತ್ರಕಾರರಾಗಿ ಈಗ ಆರ್. ಕೆ. ಲಕ್ಷ್ಮಣ್, ಆರ್. ಮೂರ್ತಿ, ಗುಜ್ಜಾರಪ್ಪ, ಎಸ್. ಕೆ. ನಾಡಿಗ್, ಹುಭೀಕರ್, ನರೇಂದ್ರ, ಗುಬ್ಬಿ ಮುಂತಾದವರು ಹೆಸರುಗಳಿಸಿದ್ದಾರೆ.

# ೩. ಕೊರೆದ ಗುಹೆಗಳು

– ಡಾ. ಶಿವರಾಮ ಕಾರಂತ

## ಭಾರತದಲ್ಲಿ ಕರ್ಣಾಟಕ

ಈ ಬರಹದಲ್ಲಿ ವಿವರಿಸಲು ಉದ್ದೇಶಿಸಿರುವ ವಾಸ್ತು ಪ್ರಕಾರಗಳು, ಶಿಲ್ಪ ಶೈಲಿಗಳು, ಚಾಲುಕ್ಯ ಅರಸುಗಳ ಕಾಲಕ್ಕೆ ಸೀಮಿತವಾಗಿದ್ದರೂ, ಅವರೇ ಅವೆರಡು ಕಲಾ ಮಾಧ್ಯಮಗಳನ್ನು ಆರಂಭಿಸಿದವರಲ್ಲ. ಚಾಲುಕ್ಯರು ಗುಜರಾಥ ದೇಶದಿಂದ ಕರ್ಣಾಟಕಕ್ಕೆ ಬಂದು ನೆಲೆಸಿದವರು. ಕರ್ಣಾಟಕವು ಭಾರತದ ಒಂದು ಸಾಮಾನ್ಯ ವಿಭಾಗ, ಭಾರತ ದೇಶದಲ್ಲಿ ಈ ಮೊದಲೇ ಕಾಣಿಸಿಕೊಂಡ ವಾಸ್ತು ಮತ್ತು ಶಿಲ್ಪಗಳ ಪ್ರೇರಣೆ ಇಲ್ಲಿನ ರಚನೆಗಳಲ್ಲಿ ಕಂಡೇ ಕಾಣಿಸುತ್ತದೆ. ಈ ವಿಚಾರದಲ್ಲಿ ಭಾರತದ ಪೂರ್ವ ಪರಂಪರೆಯನ್ನು ಕುರಿತು ಮೊದಲಿಗೇ ಒಂದಿಷ್ಟು ತಿಳಿಯುವುದು ಸರಿಯಾದ ದಾರಿ. ನಮ್ಮ ನಾಡಿನ ಸಿಂಧೂ ಕಣಿವೆಯಲ್ಲಿ ಮಹೆಂಜೊಧಾರೋ ಮತ್ತು ಹರಪ್ಪಾ ನಗರಗಳ ಅವಶೇಷಗಳು, ನಮ್ಮ ಅತ್ಯಂತ ಪೂರ್ವದ ವಾಸ್ತು ರಚನೆಗಳ ರೀತಿ ಗಳನ್ನು ತೋರಿಸುತ್ತವೆ; ಅಲ್ಲಿಯೇ ಹಲಕೆಲವು ಶಿಲ್ಪಗಳ ಮಾದರಿಗಳೂ ಸಿಗುತ್ತವೆ. ಶಿಲ್ಪದಲ್ಲಿ ಶೈಲಿ, ರೀತಿ ಮೊದಲಾದುವು ವೈಯಕ್ತಿಕ ಪ್ರತಿಭೆಯಿಂದ ವಿಶೇಷ ತೆರನ ರೂಪುಗಳನ್ನು, ವೈವಿಧ್ಯಗಳನ್ನು ಪಡೆಯುವುದು ಸಾಧ್ಯ. ವಾಸ್ತು ರಚನೆಯಲ್ಲಿ ಸೃಷ್ಟಿಕಾರ ಒಬ್ಬನೇ ಇರಬಹುದಾದರೂ, ಸಾಮುದಾಯಿಕ ಪ್ರಯತ್ನಗಳ ಫಲ ಅಧಿಕವಾಗಿರುವುದರಿಂದ, ಅದರ ಪರಂಪರೆಯಲ್ಲಿ ಸಾಂಪ್ರದಾಯಿಕತೆ ಇನ್ನೂ ಹೆಚ್ಚಿಗೆ ಕಾಣಿಸುವುದು ಸಾಧ್ಯವಾಗುತ್ತದೆ. ಕಸುಬುದಾರಿಕೆಯಿಂದ ಶಿಲ್ಪವೂ ಸಾಂಪ್ರದಾಯಿಕತೆಯ ಗುಣದೋಷಗಳ ಪರಂಪರೆಯನ್ನು ಮುಂದೊಯ್ಯಬಾರದೆಂದಿಲ್ಲ. ಆದರೂ ಶೈಲಿಯ ವಿಚಾರದಲ್ಲಿ ವಾಸ್ತುವಿನ ಪರಿಮಿತಿ ಅಧಿಕ: ಶಿಲ್ಪದ್ದು ಕಡಿಮೆ.

## ಉಪಯೋಗ, ಚೆಲುವು

ಮಹೆಂಜೊಧಾರೋವಿನಲ್ಲಿ ಬೇಯಿಸಿದ ಇಟ್ಟಿಗೆಗಳಿಂದ ರಚಿಸಿದ ಸಾವಿರಾರು ಮನೆ, ಬುರುಜು, ಚಾವಡಿ, ಕೆರೆ, ಬೀದಿಗಳುಳ್ಳ ಪಟ್ಟಣವನ್ನು ನಾವು ಕಾಣುತ್ತೇವೆ. ಆಗಿನ ಕಟ್ಟಡಗಳು ಆಯತ, ಚೌಕ ಪಾಯಗಳುಳ್ಳವು; ಅಂತಸ್ತುಗಳುಳ್ಳ ಮನೆಗಳೂ ಇದ್ದುವು. ಅವುಗಳ ದೃಷ್ಟಿ–ವಾಸದ ಉಪಯೋಗದ್ದು, ಆ ಕಾಲದಲ್ಲೂ, ಅನಂತರವೂ ಭಾರತದ ಇತರ ಹಲವಾರು ಊರುಗಳಲ್ಲಿ – ಇಟ್ಟಿಗೆ, ಮಣ್ಣು, ಮರಗಳಿಂದ ಮನೆ ಮಠಗಳನ್ನು ನಿರ್ಮಿಸುತ್ತಲೇ ಬಂದಿದ್ದಾರೆ.

ಉಪಯೋಗದ ಜತೆಗೆ, ಚೆಲುವಿನ ದೃಷ್ಟಿಯನ್ನು ಸೇರಿಸಿಕೊಂಡು, ದೀರ್ಘ ಕಾಲ ತಾಳಬಲ್ಲ ವಾಸ್ತುರಚನೆಗಳು ನಮ್ಮ ದೇಶದಲ್ಲಿ ಕಾಣಿಸಲು, ಮಹೆಂಜೋಧಾರೋ ಪತನವಾದ ಬಳಿಕ ಒಂದು ಸಾವಿರ ವರ್ಷಗಳ ಕಾಲವಾದರೂ ಸಂದಿರಬೇಕು. ಇಂಥ ಪ್ರೇರಣೆ ಮತ್ತು ಸಾಹಸಗಳಿಗೆ ಕಾರಣವಾದದ್ದು–ಜನಸಮುದಾಯಕ್ಕೆ ಮತಧರ್ಮಗಳಿಂದ ದೊರಕಿದ ಪ್ರೇರಣೆ. ಈಗ

ಉಳಿದುಕೊಂಡಿರುವ ಅವಶೇಷಗಳ ಮೇಲಿಂದ ಹೇಳುವುದಾದರೆ – ಬೌದ್ಧ ಜನಸಮುದಾಯ ಈ ಪ್ರೇರಣೆಯನ್ನು ಮೊದಲ ಬಾರಿಗೆ ಕಾರ್ಯರೂಪಕ್ಕೆ ತಂದಿತು. ಅವರ ಚಟುವಟಿಕೆ ವಾಸ್ತು ನಿರ್ಮಾಣದಲ್ಲಿ ಎರಡುಮುಖವಾಗಿ ಹರಿಯಿತು. ಬೆಟ್ಟಗಳ ಮಗ್ಗುಲುಗಳಲ್ಲಿ ಗುಹೆಗಳನ್ನು ಕೊರೆಯುವ ಬಗೆ ಒಂದು: ಅವು ಪ್ರಾರ್ಥನಾ ಕೂಟ ಜರುಗಿಸಲು, ಭಿಕ್ಕುಗಳಿಗೆ ನಿವಾಸ ಕಲ್ಪಿಸಲು. ಇನ್ನೊಂದು ಬಗೆ ಬುದ್ಧನ ಮತ್ತು ಅವನ ಪ್ರಸಿದ್ಧ ಸಹಚರರ ದೇಹದ ಅವಶೇಷಗಳನ್ನು ಇರಿಸಲು ಮಾಡಿದ ಸಮಾಧಿಗಳು. ಇವು ಕೊರೆದ ರಚನೆಗಳಲ್ಲ. ಅಂಥವುಗಳಲ್ಲಿ ತೀರ ಮೊದಲಿನ ಮಾದರಿಗಳು ಸಾರನಾಥದಲ್ಲಿ ಕಾಣುವಂತೆ, ಇಟ್ಟಿಗೆಯ ನಿರ್ಮಾಣಗಳು, ಅನಂತರದುವು ಸಾಂಚಿ, ಬಿಲ್ಸಾ ಮೊದಲಾದಲ್ಲಿ ಕಾಣುವಂತೆ ಭವ್ಯ ಸ್ತೂಪ, ಪ್ರಾಕಾರ ಮತ್ತು ತೋರಣಗಳ ನಿರ್ಮಾಣಗಳು, ಬುದ್ಧ ಗತಿಸಿದ ಒಂದೆರಡು ಶತಮಾನಗಳಲ್ಲಿ ತೊಡಗಿರಬಹುದಾದ ಈ ಬಗೆಯ ಚಟುವಟಿಕೆ ಕ್ರಿಸ್ತಶಕ ಆರಂಭದ ತನಕವೂ ಮುಂದುವರಿಯಿತು.

**ಮತಧರ್ಮಗಳ ಪ್ರೇರಣೆ**

ಬುದ್ಧನ ಸಮಕಾಲೀನನು ಜೈನಮತ ಪ್ರೇರಕ ಮಹಾವೀರ. ಆದರೆ ಜೈನರು, ಸಾಕಷ್ಟು ದೀರ್ಘಕಾಲ ಕಳೆಯುವ ತನಕವೂ ಇಂಥ ಚಟುವಟಿಕೆಗಳಿಗೆ ಹೋದವರಲ್ಲ. ಇವರಿಬ್ಬರಿಗಿಂತ ಮುಂಚಿತವಾಗಿಯೇ ಭಾರತದ ವಿಸ್ತಾರಕ್ಕೂ ಹಬ್ಬಿ ಪಸರಿಸಿದ ವೈದಿಕ ಧರ್ಮವೂ ಅಂಥ ಉದ್ಯಮಕ್ಕೆ ಕಾಲಿರಿಸಲಿಲ್ಲ. ಯಜ್ಞ ಯಾಗಗಳಿಂದ ನಿಸರ್ಗದ ದೇವತೆಗಳಿಗೆ ಪೂಜೆ ಸಲ್ಲಿಸುತ್ತಿದ್ದ ಅವರು, ಅರಣ್ಯದಲ್ಲಿ, ಪರ್ಣಕುಟೀರಗಳಲ್ಲಿ, ಸಾಮಾನ್ಯ ಮನೆಗಳಲ್ಲಿ ನೆಲೆಸಿ ತೃಪ್ತಿ ಪಡೆದರು. ನಗರಗಳಲ್ಲಿ ಅವರ ಭಕ್ತಕೋಟಿ ಪಸರಿಸಿದಾಗಲೂ – ವಾಸ್ತುರಚನೆಯ ಮರುಳು ಅವರ ಅನುಯಾಯಿಗಳನ್ನು ಕಾಡಿದಂತಿಲ್ಲ, ಅವರೂ ಅಂತಹ ಸಾಹಸಕ್ಕೆ ಇಳಿಯಲು, ಅಂದಿನ ವಿವಿಧ ಮತಗಳಲ್ಲಿ ಸಾಕಷ್ಟು ಸ್ಪರ್ಧೆ ಉಂಟಾಗಬೇಕಾಯಿತು. ಬುದ್ಧ ಬೋಧಿಸಿದ ಸರಳ ತತ್ವಗಳಿಗಿಂತ ಅಧಿಕವಾಗಿ, ಬುದ್ಧನನ್ನು ಕುರಿತು ಬೆಳೆದ ಜಾತಕದ ಕತೆಗಳು ಜನಸಾಮಾನ್ಯರನ್ನು ಮರುಳುಗೊಳಿಸಿದಾಗ ಸಾಮಾಜಿಕ ಭಾವೋದ್ವೇಗಕ್ಕೆ ವಾಸ್ತು, ಶಿಲ್ಪಗಳ ಮಾಧ್ಯಮ ಒದಗತೊಡಗಿತು. ಇದೇ ರೀತಿ ಜೈನ ತೀರ್ಥಂಕರ ಕತೆಗಳು ಆ ಮತದವರಲ್ಲಿ ಪ್ರೇರಿಸಿದುವು. ವೈದಿಕಧರ್ಮದ ಮುಂದಣ ಶಾಖೆಗಳ ರೂಪದಲ್ಲಿ ಕಾಣಿಸಿದ ಇತಿಹಾಸ, ಪುರಾಣಗಳು ಒದಗಿಸಿದ ಹಲವು ದೈವರೂಪಗಳು, ಕಥಾನಕಗಳು, ಸಾಮೂಹಿಕ ಭಾವಪ್ರಚೋದನೆಗೆ ಅವಕಾಶವನ್ನು ಕಲ್ಪಿಸಿದುವು. ಅದರಿಂದ ಬ್ರಾಹ್ಮಣ, ಜೈನಧರ್ಮಗಳ ಅನುಯಾಯಿಗಳು ಸಹ ನಮ್ಮ ಭಾರತದೇಶದ ಎಲ್ಲೆಲ್ಲೂ ದೇವಾಲಯ, ಜಿನಾಲಯಗಳನ್ನು ಪೌರಾಣಿಕ ವ್ಯಕ್ತಿಗಳನ್ನೂ, ಕಥಾನಕಗಳನ್ನೂ ಶಿಲ್ಪದ ಮೂಲಕ ಎಲ್ಲರಿಗೂ ಕಾಣಿಸುವಂತೆ, ಚಿರಂತನಗೊಳಿಸಲೆತ್ನಿಸಿದರು. ಬುದ್ಧಿ ಜೀವನದ ಮಾನಸಿಕ ಲಹರಿಗಳನ್ನು ಬೇಕಾದಂತೆ ಒಲೆದು ತೂಗಿಸಬಲ್ಲ ಸಾಮಾಜಿಕ ಆವರಣವು ಮುಂದೆ ಭಾರತದ ಎಲ್ಲೆಲ್ಲೂ ಬೆಳೆಯಿತು. ಮತ ಪಂಥಗಳು, ಅವುಗಳನ್ನು ಪ್ರೋತ್ಸಾಹಿಸುವಂಥ ಸಂಘ ಸಂಸ್ಥೆಗಳು, ಅರಸರು, ಶ್ರೀಮಂತರು, ಪುಣ್ಯಕ್ಷೇತ್ರಗಳು – ಇವೆಲ್ಲವೂ ಕೂಡಿದುದರಿಂದ, ಕ್ರಿಸ್ತಶಕಕ್ಕಿಂತಲೂ ಮೊದಲು ವಿರಳವಾಗಿ ಕಾಣಿಸಿದ ವಾಸ್ತು ಚಟುವಟಿಕೆ ಮುಂದೆ ಸಾಮೂಹಿಕವಾಗಿ ಭಾರತದ ಎಲ್ಲೆಡೆಗಳಲ್ಲೂ ಕಾಣಿಸತೊಡಗಿತು.

**ಸ್ತೂಪಗಳು**

ಬುದ್ಧ ಬದುಕಿದ ಕಾಲಕ್ಕೆ ಅವನ ಪ್ರಭಾವ ವಿಶೇಷವಾಗಿ ಹಬ್ಬಿತ್ತಾದರೂ, ಅವನ ನಿಧನದ ಬಹುಕಾಲದ ತನಕವೂ ಅವನ ರೂಪವನ್ನು ಚಿತ್ರಿಸಲು ಯಾರೂ ಪ್ರಯತ್ನಿಸಲಿಲ್ಲ. ಪ್ರಯತ್ನಿಸುವುದು ತಪ್ಪೆಂಬ ಭಾವನೆಯೂ ಜನರಲ್ಲಿತ್ತು. ಅವನ ಅವಶೇಷವನ್ನು ಕಾದಿರಿಸಲು ನಿರ್ಮಿಸಿದ ಸ್ತೂಪಗಳು – ವಾಸಕ್ಕೆ ಉದ್ದೇಶಿಸಿದ ರಚನೆಗಳಲ್ಲ. ಅವು ನೆಲದ ಮೇಲೆ ಕಟ್ಟಿದ ಸಮಾಧಿಗಳು, ಸಾಂಚಿಯಲ್ಲಿ (ಕ್ರಿ. ಪೂ. ೩೦೦ರಿಂದ ೧೦೦) ಅಂಥ ನಾಲ್ಕು ಭವ್ಯ ಸ್ತೂಪಗಳಿವೆ. ಅವನ್ನು ಇಟ್ಟಿಗೆಗಿಂತಲೂ ದೀರ್ಘ ಸಮಯ ಕಾಲದ ಹಾವಳಿಯನ್ನು ತಡೆದು ಬಾಳಬಲ್ಲ ಮರಳುಗಲ್ಲಿಂದ ನಿರ್ಮಿಸಿದ್ದಾರೆ. ಕಡಿದ ಕಲ್ಲುಗಳನ್ನು ದೊಡ್ಡ ವೃತ್ತಾಕಾರದ ಪಾಯದ ಮೇಲೆ ಸಾಲುಸಾಲಾಗಿ ಇರಿಸಿ, ಅದೊಂದು ಕವುಚಿದ ಅರ್ಧಕುಂಭದಂತೆ ಕಾಣಿಸುವಂತೆ ಮಾಡಿ ರಚನೆ. ಇದನ್ನು ಕುಂಭಕ (dome) ಎಂಬ ಪದದಿಂದ ಕರೆಯಬಹುದು. ಅದರ ಬುಡದಲ್ಲಿ ಮರಳುಗಲ್ಲನ್ನು ಬಳಸಿ, ಅನಂತರ ಇಟ್ಟಿಗೆಯ ಸಾಲುಗಳಿಂದ ಪೂರೈಸಿದ್ದಾರೆ. ಈ ಸ್ತೂಪದ ಸುತ್ತಲೂ ಮರದ ಕಟಾಂಜನವನ್ನು ಅನುಕರಿಸುವಂಥ ಕಲ್ಲಿನ ಕಟಾಂಜನಗಳಿವೆ. ಆ ಪ್ರಾಕಾರವನ್ನು ನಾಲ್ಕು ದಿಕ್ಕುಗಳಿಂದ ಪ್ರವೇಶಿಸಲು ಮಹಾದ್ವಾರ ಇಲ್ಲವೆ ತೋರಣಗಳಿವೆ. ತೋರಣ ಸ್ತಂಭಗಳಲ್ಲಿ ಸುಂದರವಾದ ಕೆತ್ತನೆಗಳನ್ನು ಕಾಣಬಹುದು.

ಸ್ತೂಪದ ಮೇಲ್ಭಾಗದಲ್ಲಿ ಚೌಕಾಕಾರದ ಒಂದು ಚಿಕ್ಕ ಆವಾರವಿದ್ದು, ಅದರ ನಡುವೆ - ಹಲವು ಛತ್ರಗಳನ್ನು ಒಂದು ಮೇಲೊಂದಾಗಿ ಹೊತ್ತ ಒಂದು ಶಲಾಕವಿದೆ. ಈ ತೆರನ ಸ್ತೂಪಗಳನ್ನು ಬಿಲ್ಸಾ (ವಿದಿಶಾ), ಸೋಪಾರ, ಕನ್ನಡ ನಾಡಿನ ಗುಲಬರ್ಗಾ ಪ್ರದೇಶಗಳಲ್ಲೂ ಗುರುತಿಸಿದ್ದಾರೆ. ಸಾಂಚಿಯ ಸ್ತೂಪಗಳು ಕ್ರಿಸ್ತಶಕಕ್ಕೆ ಒಂದರಿಂದ ಮೂರು ಶತಮಾನಗಳಷ್ಟು ಹಿಂದಿನವು. ಬೌದ್ಧಯುಗಾರಂಭದ ಕಟ್ಟಡ ರಚನೆಗಳಲ್ಲಿ ಇಂಥ ಸ್ತೂಪಗಳೇ ಮುಖ್ಯವಾದುವು. ಹೆಚ್ಚು ಕಡಿಮೆ ಈ ಕಾಲದ ಬಳಿಕ ಬೌದ್ಧ ಧರ್ಮಿಯರ ಮನಸ್ಸು, ಕಟ್ಟಿದ ನಿರ್ಮಾಣಗಳಿಗಿಂತ ಅಧಿಕವಾಗಿ, ಕೊರೆದು ಮಾಡುವ ಗುಹೆಗಳ ಕಡೆಗೆ ಹರಿಯಿತು.

**ಗುಹೆಗಳು**

ಬೆಟ್ಟಗಳ ಕಡಿದಾದ ಮಗ್ಗುಲುಗಳನ್ನು ಅವರು ವಿವಿಧ ರೀತಿಯ ಗುಹಾಲಯಗಳ ನಿರ್ಮಾಣಕ್ಕೆ ಬಳಸಿದರು. ಕಟ್ಟುವ ಕೆಲಸಕ್ಕಿಂತ – ಬೃಹತ್ ಗಾತ್ರದ ಗುಹೆಗಳನ್ನು ಕೊರೆಯುವ ಕೆಲಸ ಸುಲಭವೇನಲ್ಲ. ಆದರೂ ಇಂಥ ಚಟುವಟಿಕೆ ರಾಷ್ಟ್ರಕೂಟ ಮತ್ತು ಚಾಲುಕ್ಯ ಅರಸುಗಳ ಕಾಲದ ತನಕ ಮುಂದುವರಿದುದನ್ನು ಕಾಣುತ್ತೇವೆ. ಬೌದ್ಧರಂತೆ ಜೈನ, ಬ್ರಾಹ್ಮಣ ಮತಾವಲಂಬಿಗಳೂ ತಮ್ಮ ಭಾವನಾವಿಲಾಸಗಳನ್ನು ಇದೇ ರೀತಿ ತೋಡಿಕೊಂಡ ಬಗೆಗಳನ್ನು ಕಾಣಬಹುದು. ಬಾಜಾ ಎಂಬಲ್ಲಿನ ಚೈತ್ಯಾಲಯ ಕ್ರಿಸ್ತಪೂರ್ವ ಎರಡನೇಯ ಶತಮಾನದ ಒಂದು ರಚನೆ. ಅದರ ಉದ್ದ ೫೯ ಅಡಿ; ಅಗಲ ೨೫ ಅಡಿ, ಅದು ಎತ್ತರವಾಗಿದ್ದು ಹಿಂಭಾಗ ಅರ್ಧ ವರ್ತುಲವಾಗಿದೆ. ಮುಂಭಾಗದಲ್ಲಿ ಲಾಳಾಕೃತಿಯ ಮಹಾದ್ವಾರವಿದೆ. ಹಿಂಗಡೆ ಸ್ತೂಪದ ಪ್ರತೀಕವಾದ ಡಾಗೋಬವಿದೆ. ಅದರ ಸುತ್ತಲೂ ಪ್ರದಕ್ಷಿಣಾ ಪಥವಿದೆ. ಪುನೆಯ ಬಳಿಯ ಕಾರ್ಲಾ ಗುಹೆಯೂ ಒಂದು ಚೈತ್ಯಾಲಯವಾಗಿದೆ. (ಕ್ರಿ.ಶ ಮೊದಲ ಶತಮಾನ): ಇದೂ ಬೃಹತ್ ನಿರ್ಮಾಣವೇ. ಇವನ್ನು ಪೂರ್ವಕಾಲದ ಕಟ್ಟಿದ ಮನೆಗಳ ಮಾದರಿಯಲ್ಲಿ ರೂಪಿಸಿದ್ದಾರೆ. ಗುಹೆಯ ಮಾಳಿಗೆಗೆ ಸ್ತಂಭಗಳು ಆಧಾರವಾಗಿದ್ದರೂ, ಮರದ ಕಮಾನಿನ ಆಕಾರದ

ಪಕ್ಕಾಸುಗಳ ಪ್ರತೀಕಗಳನ್ನು ಅಲ್ಲಲ್ಲಿ ನಿರ್ಮಿಸಿದ್ದಾರೆ. ಅಜಂತ, ಎಲ್ಲೋರ, ಒರಿಸ್ಸಾದ ಖಾಂದಗಿರಿ, ಉದಯಗಿರಿಗಳಲ್ಲಿ ಕ್ರಿಸ್ತ ಶಕಾರಂಭಕ್ಕಿಂತ ಮೊದಲಿನ ಹಲವು ಗುಹಾಲಯಗಳಿವೆ: ಕೆಲವು ಚಾವಡಿಯಂಥ ರಚನೆಗಳು, ಮುಂಗಡೆ ಸ್ತಂಭಗಳ ಪಂಕ್ತಿಯುಳ್ಳವು ಕೆಲವು ಭಿಕ್ಕುಗಳಿಗಾಗಿ ಕಿರಿಯ ಕೋಣೆಗಳಂತೆ ನಿರ್ಮಿಸಿದುವು. ಗುಹೆಗಳನ್ನು ಚಾವಡಿ, ಮಂಟಪ, ಮಹಡಿಗಳಾಗಿ ಕೊರೆದಲ್ಲೂ ಮರದ ಸ್ತಂಭಗಳಂತೆಯೇ ಕಲ್ಲಿನ ಸ್ತಂಭಗಳ ಪೀಠ, ಶಲಾಕ, ಶಿರಗಳನ್ನು ನಿರ್ಮಿಸಿದ್ದಾರೆ. ಬೋದಿಗೆ ಜಂತಿಗಳನ್ನು ಕಲ್ಲಿನಲ್ಲಿ ರೂಪಿಸಿದ್ದಾರೆ. ಹಾಗಿದ್ದರೆ ಅವೆಲ್ಲ ತಮಗಿಂತಲೂ ಮೊದಲಿನ ಗೃಹ ನಿರ್ಮಾಣದ ಅನುಕರಣೆಗಳೇ ಸರಿ. ಇಷ್ಟೇ ವ್ಯತ್ಯಾಸ – ಗಾತ್ರ, ಚೆಲುವ ಮತ್ತು ಚಿತ್ರಗೆತ್ತನೆಗಳಲ್ಲಿ ಇನ್ನಷ್ಟು ಸಂಪನ್ನವಾದ ಕೃತಿಗಳಿವು.

**ದುಂಡಾಯತ ಪಾಯ**

ಸಾಮಾನ್ಯ ಮನೆಗಳ ನೆಲಗಟ್ಟು ಇಲ್ಲವೆ ಪಾಯ – ಚೌಕವೋ, ಆಯತವೋ ಆಗಿರುತ್ತದೆ. ಹೆಚ್ಚಿನ ಗುಹೆಗಳ ಪಾಯವೂ ಇಂಥವೇ. ಅದರೆ ಬಾಜಾ, ಕಾರ್ಲಾ ಚೈತ್ಯಾಲಯಗಳ ಪಾಯ ತುಸು ವ್ಯತ್ಯಾಸವುಳ್ಳದು. ಆಯತದ ಹಿಂಬದಿಯಲ್ಲಿ ಅರ್ಧ ವರ್ತುಲ ಸೇರಿಕೊಂಡಿರುವ ರೀತಿಯಿದು. ಈ ಮಾದರಿಯನ್ನು ಗಜಪ್ರಶ್ನೆ (apsidal) ಎನ್ನುವುದುಂಟು. ಆಯತದ ಅಗಲಕ್ಕೆ ಹಿಂಭಾಗದಲ್ಲಿ ಅರ್ಧ ದುಂಡಾಕಾರವಿರುವುದರಿಂದ 'ದುಂಡಾಯತ' ಎಂದು ಕರೆದರೆ ತಪ್ಪಾಗದು. ಕಾರ್ಲ ಚೈತ್ಯಾಲಯ ಇಂಥದು. ಅದು ಕರ್ನಾಟಕಕ್ಕೆ ತೀರ ಸಮೀಪದಲ್ಲಿರುವ ಒಂದು ಪೂರ್ವ ಮಾದರಿ, ಅದರ ಪಾಯವನ್ನು ಮೂರು ಪಾಲು ಮಾಡಿದ್ದಾರೆ. ಮಧ್ಯದ ಚಾವಡಿಯ ಮುಚ್ಚಿಗೆಯ ಭಾಗ ಲಾಳದಂತೆ ಕಮಾನಿನ ಆಕಾರದ್ದು. ಆಚೀಚಿನ ಭಾಗಗಳು ತಗ್ಗಿನ ಸಮತಟ್ಟಾದ ಮುಚ್ಚಿಗೆಯವು. ನಡುವಣ ಭಾಗದ ಹಿಂಗಡೆ ಡಾಗೋಬ ಇಲ್ಲವೆ ಸೂಪಾಕಾರದ ರಚನೆಯಿದೆ. ಅದರ ಸುತ್ತ ಪ್ರದಕ್ಷಿಣಾ ಪಥವಿದೆ. ನಡುವಣ ಭಾಗದ ಆಚೀಚೆ ದಪ್ಪನಾದ, ಬಲು ಎತ್ತರದ ಎರಡು ಸಾಲು ಸ್ತಂಭಗಳು ಮೇಲಿನ ಕಮಾನು ಮಚ್ಚಿಗೆಯ ಮಗ್ಗುಲುಗಳನ್ನು ಹೊರುತ್ತವೆ. ಸ್ತಂಭಗಳು ಎಂಟು ಪಟ್ಟಿಯ ಶಲಾಕಗಳಾಗಿದ್ದು, ಅವುಗಳ ಕುಡಿಯಲ್ಲಿ ಸುಂದರ ಮನುಷ್ಯಾಕಾರದ ಶಿಲ್ಪಗಳಿವೆ. ಗುಹೆಯ ಮುಂಭಾಗದಲ್ಲಿ – ಮಧ್ಯಕ್ಕೆ ಆಯತಾಕೃತಿಯ ಬಾಗಿಲಿದೆ: ಆಚೀಚೆ ಗೋಡೆಗಳನ್ನು ಉಳಿಸಿದ್ದಾರೆ. ಅವನ್ನು ಕೂಡಿಕೊಂಡ ಯಾವತ್ತು ವಿಸ್ತಾರವನ್ನು ಮೇಲಕ್ಕಿರುವ ಬಲುದೊಡ್ಡ ಕೊರೆದ ಒಂದು ಲಾಳಾಕಾರದ ಕಮಾನು ಆವರಿಸುತ್ತದೆ. ಮುಂಗಡೆಯ ಶಿಲ್ಪ, ಕೆತ್ತನೆ ಮೊದಲಾದ ವಿವರಗಳು ನಮ್ಮ ನಾಡಿನ ಅನಂತರದ ಶಿಲ್ಪಗಳಿಗೆ ಪ್ರೇರಣೆ ಕೊಟ್ಟಿರಲೂಬಹುದು. ಕಾರ್ಲ ಗುಹೆಯ ನಿರ್ಮಾಣಕ್ಕೆ ದಾನಿಗಳಾಗಿ ಮುಂದೆ ಬಂದ ದಂಪತಿಗಳ ಚಿತ್ರಗಳನ್ನು ಎದುರುಗಡೆ ಕೆತ್ತಿದ್ದಾರೆ. ಅವರಲ್ಲಿ ಬನವಸೆಯ ಒಬ್ಬ ಶ್ರೀಮಂತ ವ್ಯಾಪಾರಿಯೂ ಅವನ ಪತ್ನಿಯೂ ಚಿತ್ರಿತರಾಗಿದ್ದಾರೆ.

**ಬೌದ್ಧ ಮತದ ಪ್ರಭಾವ**

ಇಷ್ಟೆಲ್ಲ ವಿವರಿಸಲು ಒಂದು ಕಾರಣವೆಂದರೆ – ಮುಂದೆ ಚಾಲುಕ್ಯರ ಕಾಲದಲ್ಲಿ ಕರ್ನಾಟಕದಲ್ಲಿ ಕಾಣಿಸಿದ ದೇವಾಲಯಗಳ ಪಾಯಗಳಲ್ಲಿ ಚೌಕ ಮತ್ತು ಆಯತಾಕಾರಗಳು ಮುಖ್ಯವಾಗಿ ಕಾಣಿಸುವಂತೆಯೇ, ಅಲ್ಲಲ್ಲಿ, ದುಂಡಾಯತ ಆಕೃತಿಯವೂ ಕಾಣಿಸಿಕೊಳ್ಳುತ್ತವೆ.

ವಾಸ್ತು ನಿರ್ಮಾಣಕ್ಕೆ ಬೌದ್ಧರ ಕಾಣಿಕೆ ವಿಶೇಷವಾದದ್ದು ; ಮೊದಲಿನದೂ ಹೌದು. ಆ ಮತದ ಪ್ರಸಾರ ಕರ್ಣಾಟಕದಲ್ಲಿ ಬಲು ಮೊದಲೇನೆ ತೊಡಗಿತ್ತು. ಅಶೋಕ ತನ್ನ ಕಾಲದಲ್ಲಿಯೇ ಬುದ್ಧ ಧರ್ಮ ಪ್ರಚಾರಕ್ಕಾಗಿ ಬನವಾಸಿಗೆ ಒಬ್ಬ ಪ್ರಸಿದ್ಧ ಭಿಕ್ಷುವನ್ನು ಕಳುಹಿಸಿದ್ದ. ಕದಂಬರಿಗಿಂತಲೂ ಮೊದಲು ಬೌದ್ಧಮತದ ಅರಸರು ಅಲ್ಲಿ ಆಳಿದ್ದರು. ಬನವಾಸಿಯ ಒಂದು ನಾಗನ ಕಲ್ಲಿನಲ್ಲಿ (ಕ್ರಿ.ಶ.೧೫೦)ರಲ್ಲಿ ಬೌದ್ಧ ರಾಜಕುಮಾರಿಯೊಬ್ಬಳು ಮಾಡಿದ ದಾನಶಾಸನ ಪಾಲಿ ಬರಹದಲ್ಲಿದೆ. ಬನವಾಸಿಯ ಒಬ್ಬ ವಣಿಕ್ಕು ಕಾರ್ಲದ ಗುಹೆಯ ನಿರ್ಮಾಣಕ್ಕೆ ನೆರವಾದ ವಿಚಾರವನ್ನು ಈ ಮೊದಲೇ ಹೇಳಿದ್ದೇನೆ. ಕರ್ಣಾಟಕದ ಅಂಗವಾಗಿರುವ ಗುಲ್ಬರ್ಗೆಯಲ್ಲೂ ಪ್ರಾಚೀನ ಸ್ತೂಪಗಳ ಅವಶೇಷಗಳು ಕಂಡುಬಂದಿವೆ. ಸುಮಾರು ಎಂಟು ಹತ್ತನೆಯ ಶತಮಾನದ ತನಕವೂ ಬೌದ್ಧಮತೀಯರ ಪ್ರಭಾವ ಕರ್ಣಾಟಕ ದೇಶದಲ್ಲಿ ಉಳಿದುಕೊಂಡುದರ ಬಗ್ಗೆ ಹಲವು ದಾಖಲೆಗಳು ಸಿಗುತ್ತವೆ.

**ರಾವಣ ಪಹಾಡಿ ಗುಹೆ**

ಚಾಲುಕ್ಯ ದೊರೆಗಳು ಕನ್ನಡನಾಡನ್ನು ಆಳಲು ಬರುವ ಮುಂಚೆಯೇ ಇಲ್ಲಿ ಬ್ರಾಹ್ಮಣಧರ್ಮ ವಿಶೇಷ ಪ್ರಸಾರದಲ್ಲಿತ್ತು. ಜೈನಧರ್ಮವೂ ಇಲ್ಲಿ ಕಾಲಿರಿಸಿತ್ತು. ಸ್ತೂಪ, ಚೈತ್ಯಾಲಯ, ವಿಹಾರಗಳ ನಿರ್ಮಾಣದಲ್ಲಿ ಆರಂಭದ ಬೌದ್ಧ ಮತಾನುಯಾಯಿಗಳು ತೊಡಗಿದಂತೆ – ಬ್ರಾಹ್ಮಣಧರ್ಮಿಯರು, ಜೈನರು ತಂತಮ್ಮ ದೇವರು, ಮಹಾತ್ಮರುಗಳ ಮೇಲಿನ ಭಕ್ತಿಯಿಂದ, ಗುಡಿಗಳ ನಿರ್ಮಾಣವನ್ನು ತೊಡಗಿರಬೇಕು. ಅಂಥ ಗುಡಿಗಳಲ್ಲಿ ತೀರ ಮೊದಲಿನದು. ಅಥವಾ ಮೊದಲಿನವು ಎಲ್ಲಿವೆ – ಎಂಬ ವಿಚಾರದಲ್ಲಿ ಸಂಶೋಧನೆ ಸಾಕಷ್ಟು ನಡೆದಿಲ್ಲ. ತೊಲೆಮಿಯ ಕಾಲದ ಗ್ರೀಕ್ ಪ್ರಹಸವೊಂದರ ದೃಶ್ಯವು ದಕ್ಷಿಣ ಕನ್ನಡಜಿಲ್ಲೆಯ ಉದ್ಯಾವರದಲ್ಲಿ ಕಾಣಿಸುತ್ತದೆ. ಇಲ್ಲಿನ 'ಸೋಮೇಶ್ವರ ದೇವಾಲಯದ ಹೆಸರು ಪ್ರಹಸನದಲ್ಲಿ ಬರುತ್ತದೆ. ಅದನ್ನು ಮರೆತರೂ, ಐಹೊಳೆಯಲ್ಲಿಯೂ ನಾಲ್ಕೆದನೆಯ ಶತಮಾನಗಳಲ್ಲಿ – ಹಲವಾರು ಕಿರಿಯ ದೇವಾಲಯಗಳು ನಿರ್ಮಾಣ ಗೊಂಡುವು. ಬೌದ್ಧಧರ್ಮ ಪ್ರಸಾರವೂ ಆ ಕಾಲದಲ್ಲಿ ಬಾದಾಮಿ ಪ್ರದೇಶದಲ್ಲಿ ಸಾಕಷ್ಟು ನಡೆದುಹೋಗಿರಬೇಕು. ಅಲ್ಲಿ ಗುಹಾಲಯಗಳ ಎಡೆಯಲ್ಲಿ ನೈಸರ್ಗಿಕ ಗುಹೆಯೊಂದಿದೆ. ಸುಮಾರು ೩೦ ಅಡಿ ಎತ್ತರ, ೩೦ ಅಡಿ ಹಿಂಜರಿಕೆಯುಳ್ಳ ಗುಹೆಯ ಗೋಡೆಯೊಂದರಲ್ಲಿ, ಪದ್ಮಪಾಣಿಯಾದ ಬುದ್ಧನ ಆಕೃತಿ ಕೆತ್ತಿದ್ದಾರೆ. ಅದಿಂದು ಭಗ್ನಾವಸ್ಥೆಯಲ್ಲಿ ಇದ್ದರೂ ಇಲ್ಲಿ ಗುಹಾನಿರ್ಮಾಣದ ಚಟುವಟಿಕೆಗೆ ಅದೊಂದು ಸಮೀಪದ ಪ್ರೇರಣೆಯಾಗಿರಬೇಕೆಂದೇ ತರ್ಕಿಸಬಹುದು. ಅವರಿಂದ ಸ್ಫೂರ್ತಿ ಪಡೆದಿರಬಹುದಾದ ಮೊದಲನೇಯ ಗುಹೆಯು ಐಹೊಳೆಯ **'ರಾವಣ ಪಹಾಡಿ ಗುಹ'** (ಚಿತ್ರ. ೧) ಇರಬೇಕು.

ಈ ಪ್ರದೇಶದ ಸುತ್ತುಮುತ್ತ ಬೇಕಷ್ಟು ಮರುಳುಗಲ್ಲಿನ ಬೆಟ್ಟದ ಸಾಲುಗಳಿವೆ. ಕಲ್ಲನ್ನು ಒಡೆದು, ತುಂಡರಿಸಿ ಕಟ್ಟಡ ನಿರ್ಮಿಸಲು ಎಲ್ಲೆಂದರಲ್ಲಿ ಹೆಬ್ಬಂಡೆಗಳು ಕಾಣಸಿಗುತ್ತವೆ. ಮರುಳುಗಲ್ಲು ಕೊರೆಯುವುದಕ್ಕಾಗಲಿ, ಒಡೆದು ರೂಸುವುದಕ್ಕಾಗಲಿ ಶಿಲೆ (granite) ಯಷ್ಟು ಕಠಿಣ ವಸ್ತುವಲ್ಲ. ಅದರ ಬಣ್ಣಬಣ್ಣದ ಸ್ತರಗಳು, ತೀರ ಆಕರ್ಷಕವಾದುವು. ಈ ಊರ ಮಧ್ಯದಲ್ಲೇ ನಿಂತಿರುವ ಹೆಬ್ಬಂಡೆಯೊಂದರ ಕಡಿದಾದ ಮಗ್ಗುಲನ್ನು ಸವರಿ, ಚಿಕ್ಕ ಪ್ರಮಾಣದ ಒಂದು ಗುಹಾಲಯವನ್ನು ನಿರ್ಮಿಸಿದ್ದಾರೆ. ಅದರ ಚಾವಡಿ ೩೦ ಅಡಿ ಉದ್ದ ಮತ್ತು ೧೦ ಅಡಿ ಎತ್ತರವಾಗಿದ್ದು, ಅದರ ಹಿಂಭಾಗ

ಇಪ್ಪತ್ತು ಅಡಿಗಳಷ್ಟು ಹಿಂದಕ್ಕೆ ಸರಿಯುತ್ತದೆ. ಮುಂಗಡೆ ಚಾವಡಿಯ ಎರಡೂ ಬದಿಗಳಲ್ಲಿ ಮಗ್ಗುಲು ಚಾವಡಿಗಳನ್ನು ರಚಿಸಿದ್ದಾರೆ; ಅಲ್ಲಿನ ಮತ್ತು ಇದಿರಿನ ಗೋಡೆಗಳಲ್ಲಿ ಸುಂದರ ಶಿಲ್ಪಗಳನ್ನು ಕೆತ್ತಿದ್ದಾರೆ. ಮುಂಭಾಗವನ್ನು ಎತ್ತಿ ಹಿಡಿಯುವ ಚೌಕ ಭೇದದ ಸ್ತಂಭಗಳಿವೆ: ಕಿರಿಯ ಮಗ್ಗುಲು ಚಾವಡಿಗಳಲ್ಲೂ ಅಂಥವಿವೆ. ಗೋಡೆಗಳಲ್ಲಿ ಶಿಲ್ಪ ಕೆತ್ತಿದಂತೆ, ಮುಚ್ಚಿಗೆಯಲ್ಲೂ ಶಿಲ್ಪದ ಕೆತ್ತನೆಯಿದೆ. ವಾಸ್ತು ರಚನೆಗಿಂತಲೂ ಇಲ್ಲಿನ ಶಿಲ್ಪದ ವೈಖರಿ ಸಾಕಷ್ಟು ಮನೋಹರವಾದುದು. ಈ ಗುಹೆಯನ್ನು ಕೆತ್ತಿದ ಬಂಡೆ ಸಾಮಾನ್ಯಗಾತ್ರದ್ದಾದುದರಿಂದ, ಅದು ದೂರದಿಂದ ಕಾಣುವಾಗ ವಿಶೇಷ ಪರಿಣಾಮವನ್ನು ಉಂಟುಮಾಡುವುದಿಲ್ಲ.

**ಬಾದಾಮಿ ಗುಹೆಗಳು**

ಚಾಲುಕ್ಯರ ಕಾಲದ ಇನ್ನೂ ನಾಲ್ಕು ಭವ್ಯ ಗುಹಾಲಯಗಳನ್ನು ಕಾಣಬೇಕಾದರೆ ಬಾದಾಮಿಗೆ ಹೋಗಬೇಕು. ಕೆಲವು ಮರುಳುಗಲ್ಲಿನ ಗುಡ್ಡಗಳು ಆ ಪ್ರದೇಶದ ಅಲ್ಲಲ್ಲಿ ಪಸರಿಸಿ ನಿಂತಿವೆ. ಅಂಥ ಎರಡು ಶ್ರೇಣಿಗಳು ಬೆರಳಂತೆ ಚಾಚುವ ಒಂದು ಸಂದಿನಲ್ಲಿ ಬಾದಾಮಿ ನಗರ ಬೆಳೆದಿದೆ. ಅವೆರಡರ ನಡುವೆ ಒಂದು ಒಡ್ಡನ್ನು ಕಟ್ಟಿ ಒಂದು ಜಲಾಶಯವನ್ನು ನಿರ್ಮಿಸಿದ್ದಾರೆ. ಅದರ ಮೂರು ಮಗ್ಗುಲುಗಳಲ್ಲೂ ಕಡಿದಾದ ಮೈಯ, ಅಲ್ಲಲ್ಲಿ ಬಿರಿದ, ಬೆಟ್ಟದ ಗೋಡೆಗಳಿವೆ. ಕಾಲಾಂತರದ ಮಳೆಗಾಳಿಗಳ ಕೊರೆತದಿಂದ ಕಾಣಿಸುವ ಈ ಮೈಗಳ ಮರಳಿನ ಸ್ತರಗಳ ಚೆಲುವು ವಿಶೇಷವಾದದ್ದು. ಅವುಗಳ ಮೇಲೆ ಬಿಸಿಲು ಬೀಳುವಾಗ ಪಾಟಲ, ಹಳದಿ, ಗೋಪಿ, ಕಂದು, ನೇರಿಳೆ ಮೊದಲಾದ ಹಲವು ಬಣ್ಣಗಳ ಛಾಯೆಗಳು ಕುಣಿದಾಡುತ್ತವೆ. ಆ ಗೋಡೆಗಳು ಜರಿದು ಬಿದ್ದಾದ ಹೆಬ್ಬಂಡೆಗಳೂ ವಿಶೇಷ ಸೊಗಸಿಂದ ಕಾಣಿಸುತ್ತವೆ. ಇಂಥ ಒಂದು ತಾವನ್ನು ಅರಸಿ ಕೊಳಕ್ಕೆ ತೀರ ಹತ್ತಿರದಲ್ಲಿ, ಐವತ್ತು ನೂರು ಅಡಿ ಎತ್ತರದಲ್ಲಿ, ನಾಲ್ಕು ಸಾಕಷ್ಟು ವಿಶಾಲವಾದ ಗುಹಾಲಯಗಳನ್ನು ಕೊರೆದಿದ್ದಾರೆ. ಬೌದ್ಧ ಪ್ರತಿಮೆಯುಳ್ಳ ನೈಸರ್ಗಿಕ ಗುಹೆಯಿರುವುದೂ ಅಲ್ಲೇನೆ. ಈ ಗುಹೆಗಳಲ್ಲಿ ಮೊದಲಿನ ಮೂರು ಗುಹೆಗಳು ಬ್ರಾಹ್ಮಣ ಗುಹೆಗಳಾದರೆ, ನಾಲ್ಕನೆಯದು ಜೈನರ ನಿರ್ಮಾಣ, ಬಾದಾಮಿಯ ಈ ನಾಲ್ಕು ಗುಹೆಗಳೂ ಒಂದರ ಮಗ್ಗುಲಲ್ಲೊಂದಿವೆ. ಅವು ಸಾಕಷ್ಟು ಎತ್ತರ ಮತ್ತು ಅಂತರಗಳಲ್ಲಿ ಕೊರೆದುವು. ಅಲ್ಲಿನ ಬೆಟ್ಟದ ಬಂಡೆಗಳ ಮಗ್ಗುಲಲ್ಲಿ, ಇದಿರಿನ ನೆಲಕ್ಕಿಂತ ವಿಶೇಷ ಎತ್ತರಕ್ಕೆ ಸಾಕಷ್ಟು ಉದ್ದ, ಅಗಲ, ಎತ್ತರಗಳುಳ್ಳ ಗುಹೆಗಳನ್ನು ಕೊರೆದಿದ್ದಾರೆ. ಅವುಗಳ ಪಾಯ ೫೦×೩೦ ಅಡಿ ಅಂದಾಜಿನ ವಿಸ್ತಾರವುಳ್ಳದ್ದಿರಬಹುದು. ಇದಿರಲ್ಲಿ ಎರಡು ಸಾಲು ಸ್ತಂಭಗಳು ಬರುತ್ತವೆ. ಅವುಗಳ ನಡುವಣ ನಡೆ ತುಂಬ ಮನೋಹರವಾದ ಭಾಗ: ಆ ನಡೆಯ ಇಮ್ಮಡಿಯಷ್ಟು ಅಗಲ ಹಿಂದಿರುವ ಚಾವಡಿಯ ಭಾಗ: ಚಾವಡಿಯ ಗೋಡೆಯ ಹಿಂದಕ್ಕೆ ಗರ್ಭ ಗುಡಿಯನ್ನು ಕೊರೆದಿರುತ್ತಾರೆ. ಇವೆಲ್ಲವೂ ಚಾಲುಕ್ಯಯುಗದ ಮೊದಲ ಮತ್ತು ಎರಡನೇಯ ಶತಮಾನದೊಳಗೇನೆ ಕೊರೆದು ಮುಗಿಸಿದ ಕೃತಿಗಳಾಗಿವೆ.

ಮೊದಲಿನ ಮೂರು ಗುಹೆಗಳು ಹಿಂದೂ ದೇವತೆಗಳ ಸಲುವಾಗಿ ನಿರ್ಮಿಸಿದುವು. ಅವುಗಳಲ್ಲಿ ಮೂರನೆಯ ಗುಹೆ ಅತ್ಯಂತ ಭವ್ಯವಾದ ಒಂದು ನಿರ್ಮಾಣ. ಅದನ್ನು ಚಾಲುಕ್ಯ ದೊರೆ ಮಂಗಲೇಶ ಕೊರೆಯಿಸಿದ. ಅದರ ಉದ್ದಗಲ ೭೦ × ೪೮ ಆಡಿ ವಿಸ್ತೀರ್ಣದ್ದು. ನಾವು ಮೊದಲನೇಯ ಗುಡಿ(ಆರನೆಯ ಶತಮಾನದ ಕೊನೆಯನ್ನು ಸೇರುವಾಗಲೇ ಅದರ ಹೊರಗಡೆ ಕೆತ್ತಿದ ನಟರಾಜ

ವಿಗ್ರಹವು ನಮ್ಮನ್ನು ಆಕರ್ಷಿಸುತ್ತದೆ. ಇದು ದೈತ್ಯಗಾತ್ರದ ಒಂದು ಕೆತ್ತನೆ. ಒಳಗಡೆಯ ಭಿತ್ತಿಗಳಲ್ಲೂ ಮಹಿಷಾಮರ್ದಿನಿ, ಅರ್ಧನಾರೀಶ್ವರ ಮೊದಲಾದ ಹಲವು ಕೆತ್ತನೆಗಳಿವೆ. ಮೇಲಣ ಮುಚ್ಚಿಗೆಯಲ್ಲಿ ಬಾನಲ್ಲಿ ತೇಲಿ ಸರಿಯುವ ಅಪ್ಸರ ದಂಪತಿಗಳ ಚಿತ್ರಗಳನ್ನು ಕೊರೆದಿದ್ದಾರೆ.

ಮೊದಲ ಗುಹೆಯಿಂದ ಸುಮಾರು ೬೪ ಮೆಟ್ಟಿಲುಗಳನ್ನು ಏರಿಹೋದರೆ ಎರಡನೇಯ ಗುಹೆ ಬರುತ್ತದೆ. ಅದು ವಿಷ್ಣುವಿಗೆ ಅರ್ಪಿತವಾದುದು. ಅದರ ಪಂಚಾಂಗ, ಭಿತ್ತಿ, ಮುಚ್ಚಿಗೆಗಳಲ್ಲಿ ಬೇಕಷ್ಟು ಕೆತ್ತನೆಯ ಪ್ರತಿಮೆಗಳಿವೆ. ಅಲ್ಲಿನ ಒಂದು ಶಿಲ್ಪ – ದೈತ್ಯ ಗಾತ್ರದ ತ್ರಿವಿಕ್ರಮನದು. ಇಲ್ಲಿನ ಸ್ತಂಭಗಳಲ್ಲಿ, ಮೇಲಿನ ಮುಚ್ಚಿಗೆಗೆ ಒಡ್ಡಿದ ಹಲವಾರು ಸುಂದರ ಮದನ ಕೈ ವಿಗ್ರಹಗಳೂ ಇವೆ. ಇವುಗಳ ಕೆತ್ತನೆಯ ಶೈಲಿಯೇ ಬೇರೆ. ಈ ಗುಹೆಯ ಬಳಿಕ ಒಂದು ನೈಸರ್ಗಿಕ ಗುಹೆ ಬರುತ್ತದೆ. ಅದಾದ ಮೇಲೆ, ಇನ್ನಷ್ಟು ಎತ್ತರದಲ್ಲಿ ಮೂರನೆಯ ಗುಹೆ ಬರುತ್ತದೆ. ಅದೇ ಅತಿ ಶ್ರೇಷ್ಠವಾದ ಗುಹೆ. ಅಲ್ಲಿನ ಚಾವಡಿಯ ಎರಡೂ ಕಡೆಗಳಲ್ಲಿ ರಚಿಸಿರುವ ಚೌಕ ಛೇಧದ, ಮೇಲೆ ಸರಿದಂತೆ ದುಂಡಾಗುವ, ಕಾರಣೆಯುಳ್ಳ ಸ್ತಂಭಗಳೂ, ಅವುಗಳ ನಾಲ್ಕು ಮಗ್ಗುಲಿನ ಮದನಕೈಗಳೂ, ಹೊರಕ್ಕೆ ಚಾಚಿದಂತೆ ಕೊರೆದ ಸಜ್ಜೆಯೂ ಬಹಳ ಮನೋಹರವಾಗಿವೆ (ಚಿತ್ರ ೨).

ಇಲ್ಲಿ ಕೆತ್ತಿದ ವಿಷ್ಣು, ವರಾಹ, ನಾರಸಿಂಹಾದಿ ದೈತ್ರಗಾತ್ರದ ವಿಗ್ರಹಗಳ ಗಾಂಭೀರ್ಯ ವಿಶೇಷವಾದದ್ದು. ವಿಷ್ಣುವಿನ ತ್ರಿವಿಕ್ರಮ ಅವತಾರದ ಬಲುದೊಡ್ಡ ಕೆತ್ತನೆಯಲ್ಲಿ ಸೇರಿದ ಹಲವಾರು ವ್ಯಕ್ತಿಗಳ ಚಿತ್ರ ಒಂದು ಅನುಪಮವಾದ ಪ್ರಬಂಧವೇ ಸರಿ. ಇಲ್ಲಿರುವ – ಮದನ ಕೈ ವಿಗ್ರಹಗಳಲ್ಲೂ ವಿವಿಧ ಪೌರಾಣಿಕ ವ್ಯಕ್ತಿಗಳನ್ನು ಆರಿಸಿ, ಶೃಂಗಾರ ವಿಲಾಸಗಳನ್ನು ಚಿತ್ರಿಸಿದ್ದಾರೆ. ಈ ಗುಹೆಯು ಕ್ರಿ. ಶ. ೫೭೮ರ ಸುಮಾರಿನ ಒಂದು ನಿರ್ಮಾಣವಾಗಿದೆ.

ನಾಲ್ಕನೆಯದಾದ ಜೈನಗುಹೆ – ಸ್ವಲ್ಪವೇ ಮುಂದಕ್ಕಿದೆ ತುಸುವೇ ಎತ್ತರದಲ್ಲಿದೆ. ಅದನ್ನು ಮೇಣ ಬಸದಿಯೆಂದು ಕರೆಯುವ ವಾಡಿಕೆಯಿದೆ. ಈ ಗುಹೆಯ ನಿರ್ಮಾಣ ೭–೮ನೆಯ ಶತಮಾನದ್ದಿರಬಹುದೆಂದು ತರ್ಕಿಸುತ್ತಾರೆ. ಅದನ್ನು ಆದಿನಾಥ ತೀರ್ಥಂಕರನ ಗೌರವಾರ್ಥವಾಗಿ ನಿರ್ಮಿಸಿದರು. ಈ ಗುಹೆಯ ಗೋಡೆಗಳಲ್ಲಿ ತೀರ್ಥಂಕರರ, ಯಕ್ಷ ಯಕ್ಷಿಯರ ಹಲವಾರು ಕೆತ್ತನೆಗಳಿವೆ.

ಈ ನಾಲ್ಕು ಗುಹೆಗಳಿರುವ ಪ್ರದೇಶದ ಮುಂಗಡೆಯ ದೃಶ್ಯ ಅತ್ಯಂತ ಮನೋಹರವಾದೊಂದು ನೋಟ, ಕೆಳಗಡೆ ಆಳದಲ್ಲಿ ವಿಶಾಲವಾದ ಒಂದು ಕೊಳವಿದೆ. ಅದರ ಒಂದು ಮಗ್ಗುಲಲ್ಲಿ ಊರು ಬೆಳೆದುಕೊಂಡಿದೆ. ಇದಿರಿಗೆ ಉನ್ನತವಾದೊಂದು ಮರುಳುಗಲ್ಲಿನ ಬಂಡೆಗಳಿರುವ ಬೆಟ್ಟದ ಸಾಲಿದೆ. ಅದರ ಮೇಲಕ್ಕೆ ಮಾಲೆಗಿತ್ತಿ ಶಿವಾಲಯ, ಮೇಲಣ ಶಿವಾಲಯ ಮೊದಲಾದ ವಾಸ್ತು ಪ್ರಸಿದ್ಧಿಯ ಮಂದಿರಗಳು ಇವೆ. ಅಲ್ಲದೆಯೂ, ಬಾದಾಮಿಯನ್ನು ಕಾಣಲು ಬಯಸುವಾತ - ಈ ಬೆಟ್ಟದ ನಡುವಣ ಸೀಳುದಾರಿಯನ್ನು ಏರಿ, ಅದರ ತುದಿಯ ತನಕವೂ ಹೋದುದಾದರೆ, ಆ ದಾರಿಯ ಕಲ್ಲು ಬಂಡೆಗಳ ವಿವಿಧ ಆಕಾರ, ಬಣ್ಣ, ತಿರುವುಮುರುವುಗಳು ಒದಗಿಸುವ ನೋಟಗಳು ವಿಶಿಷ್ಟವಾದೊಂದು ನೈಸರ್ಗಿಕ ಔತಣವಾಗಬಲ್ಲುದು.

# ಓದುಪಠ್ಯ:

## ೪. ವಾಸ್ತುಶಿಲ್ಪದ ಇತಿಹಾಸ

**– ಕೆ.ಎಸ್. ಸದಾನಂದ**

ಸಾವಿರಾರು ವರ್ಷಗಳಿಗೂ ಹಿಂದೆ ಮಾನವನಿಗೆ ವ್ಯವಸಾಯದಿಂದ ಆಹಾರದ ಉತ್ಪತ್ತಿ ಗೊತ್ತಿರಲಿಲ್ಲ. ಆದುದರಿಂದ ಅವನು ತನಗೂ ತನ್ನ ದನ ಕರುಗಳಿಗೂ ಬೇಕಾದ ಆಹಾರವನ್ನು ಹುಡುಕಿಕೊಂಡು ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತಿದ್ದನು. ಕಾಲ ಕ್ರಮೇಣ ಅವನು ವ್ಯವಸಾಯದಿಂದ ಆಹಾರವನ್ನು ಉತ್ಪತ್ತಿ ಮಾಡುವುದನ್ನು ಕಲಿತನು. ಒಂದು ಕಡೆ ನೆಲೆಯಾಗಿ ನಿಲ್ಲಲು ಅನುಕೂಲವಾಯಿತು. ವ್ಯವಸಾಯವು ವರ್ಷದ ಕೆಲವು ಕಾಲ ಮಾತ್ರ ನಡೆದು ಉಳಿದ ವೇಳೆ ಅವನಿಗೆ ಸಾಕಷ್ಟು ಸಮಯ ಸಿಗುತ್ತಿತ್ತು. ಅವನು ಕಲೆ ಹಾಗೂ ಕರ ಕುಶಲ ಕಲೆಗಳ ಕಡೆ ಗಮನವೀಯಲು ಇದರಿಂದ ಅವನು ಇದರಿಂದ ಪ್ರಾರಂಭಿಸಿದನು. ಗೃಹ ರಚನೆಯಿಂದ ಪ್ರಾರಂಭವಾದ ವಾಸ್ತು ಶಿಲ್ಪವು ಸಾರ್ವಜನಿಕ ವಾಸ್ತುಶಿಲ್ಪಕ್ಕೂ ಸಹಕಾರಿಯಾಯಿತು. ಮೇಲಾಗಿ ಗೃಹ ವಾಸ್ತುಶಿಲ್ಪದ ಕೆಲವು ವಿಧಾನಗಳು, ಆಕಾರಗಳು ಹಾಗೂ ನಮೂನೆಗಳು ಸಾರ್ವಜನಿಕ ವಾಸ್ತುಶಿಲ್ಪದಲ್ಲ ಕಂಡು ಬಂದವು. ಹೀಗೆ ಪ್ರಾರಂಭವಾದ ವಾಸ್ತುಶಿಲ್ಪದಲ್ಲಿ ಸಾರ್ವಜನಿಕ ವಾಸ್ತುಶಿಲ್ಪಕ್ಕೆ ಹೆಚ್ಚಿನ ಪ್ರಾಧಾನ್ಯತೆ ಬಂದು ಗೃಹ ವಾಸ್ತುಶಿಲ್ಪದ ಕಡೆ ಜನರ ಗಮನ ಹೆಚ್ಚು ಬೀಳಲಿಲ್ಲ. ಇದಕ್ಕೆ ಒಂದು ಮುಖ್ಯ ಕಾರಣ ಜನರ ಧಾರ್ಮಿಕ ಪ್ರವೃತ್ತಿ, ರಾಜ ಮಹಾರಾಜರಿಂದಲೂ ಸಾರ್ವಜನಿಕ ವಾಸ್ತುಶಿಲ್ಪಕ್ಕೆ ಹೆಚ್ಚಿನ ಉತ್ತೇಜನ ದೊರಕಿತು.

ಪುರಾತನ ಕಾಲದಲ್ಲಿ ಜನರು ಒಂದೆಡೆ ನಿಲ್ಲಲು ಸಹಕಾರಿಯಾಗಿದ್ದು ದೊಡ್ಡ ನದಿಗಳು ಹರಿಯುವ ಫಲವತ್ತಾದ ಭೂ ಪ್ರದೇಶಗಳು. ಹೀಗೆ ನೆಲೆ ನಿಂತ ಜನರ ನಾಗರೀಕತೆಗಳು ಸಾವಿರಾರು ವರ್ಷಗಳ ಹಿಂದೆ ಪ್ರಾರಂಭವಾದವು. ನಮ್ಮ ದೇಶದ ಒಂದು ಭಾಗವಾಗಿದ್ದ ಈಗ ಪಾಕಿಸ್ತಾನದಲ್ಲಿರುವ ಸಿಂಧೂ ನದಿಯ ಕಣಿವೆ ಪ್ರದೇಶದಲ್ಲಿ ಇದ್ದ ನಾಗರೀಕತೆ ಇಂಥ ಪುರಾತನ ನಾಗರೀಕತೆಗಳಲ್ಲಿ ಒಂದು. ಇಲ್ಲಿ ಇಟ್ಟಿಗೆಯು ವಾಸ್ತುಶಿಲ್ಪ



**ಪುರಾತನ ನಾಗರೀಕತೆಯೊಂದರ ವಾಸ್ತುಶಿಲ್ಪದ ಅವಶೇಷಗಳು.**

ರಚನೆಯಲ್ಲಿ ಪ್ರಮುಖ ಪಾತ್ರವಹಿಸಿತ್ತು. ಇಲ್ಲಿದ್ದ ಮನೆಗಳಿಗೆ ಒಳ ಚರಂಡಿ ವ್ಯವಸ್ಥೆಯಿತ್ತು. ನಗರ ರಚನೆಯು ಬಹಳ ಮುಂದುವರೆದಿತ್ತು.

ಈಜಿಪ್ಟ್ ದೇಶದ ಪಿರಮಿಡ್ಡುಗಳು ಲೋಕ ಪ್ರಸಿದ್ಧ. ಇವು ರಾಜರ ಸಮಾಧಿಗಳು. ಇವು ಭಾರೀ ಕಲ್ಲುಗಳಿಂದ ನಿರ್ಮಿತವಾದವುಗಳು.



**ಈಜಿಪ್ಟಿನ ಪಿರಮಿಡ್ಡುಗಳು**

ಈಜಿಪ್ಟ್ ದೇಶದ ಪುರಾತನ ಕಾಲದ ನಾಗರೀಕತೆಗೆ ಸಹಾಯಕವಾಗಿದ್ದು ನೈಲ್ ನದಿ. ಈ ನದಿಯ ಬಲ ಪಾರ್ಶ್ವದಲ್ಲಿ ನಗರಗಳು ಹಾಗೂ ಹಳ್ಳಿಗಳು, ಸಾಮಾನ್ಯವಾಗಿ ನದಿಯ ಎಡ ದಡದ ಪ್ರದೇಶವು ಸಮಾಧಿಗಳ ನಿರ್ಮಾಣಕ್ಕೆ ಮೀಸಲು.

ಈಜಿಪ್ಟಿನ ಈಗಿನ ರಾಜಧಾನಿ ಕೈರೊ. ಇದರ ಸಮೀಪದಲ್ಲಿರುವ ಗೀಸ್ ಎಂಬ ಸ್ಥಳದಲ್ಲಿ ನಿರ್ಮಿಸಿರುವ ಪಿರಮಿಡ್ ಅತಿ ದೊಡ್ಡದು. ಇಲ್ಲಿನ ಪುರಾತನ ಕಾಲದ ಜನರ ನಂಬಿಕೆಯೇ ಪಿರಮಿಡ್ಡುಗಳ ನಿರ್ಮಾಣಕ್ಕೆ ಮುಖ್ಯ ಕಾರಣವಾಯಿತು.

ಮರಣದ ನಂತರವೂ ಕೂಡ ಆತ್ಮವು ದೇಹದಲ್ಲಿ ಪುನಃ ಬಂದು ವಾಸಿಸುತ್ತದೆ ಎಂಬ ನಂಬಿಕೆಯೇ ಇದು. ಮರಣದ ನಂತರ ದೇಹವು ಕೆಡದಂತೆ ಮಾಡುವರು. ಅದನ್ನು ಬಟ್ಟೆಯಿಂದ ಸುತ್ತಿ ಕಾಪಾಡುವರು. ಇದನ್ನು ಮಮ್ಮಿ ಎಂದು ಕರೆಯುವರು. ಪಿರಮಿಡ್ಡಿನ ಮಧ್ಯಭಾಗದಲ್ಲಿ ಸೂಕ್ತ ರೀತಿಯಲ್ಲಿ ನಿರ್ಮಿಸಿರುವ ಕೊಠಡಿಯಲ್ಲಿ ಈ ಮಮ್ಮಿಯನ್ನು ಇಡುವರು. ಇದರ ಜೊತೆಗೆ ಅನೇಕ ಬೆಲೆ ಬಾಳುವ ಸಾಮಾನುಗಳನ್ನೂ ಉಪಕರಣಗಳನ್ನೂ ಇಡುವರು.

ಈ ಪುರಾತನ ಕಾಲದ ಈಜಿಪ್ಟಿನ ನಾಗರೀಕತೆಯ ಸರಿ ಸುಮಾರಿನಲ್ಲಿ ಪ್ರಪಂಚದ ಇತರ ಕೆಲವು ಕಡೆ ನಾನಾ ನಾಗರೀಕತೆಗಳು ಕಾಣಿಸಿಕೊಂಡವು. ಇದರಿಂದ ಅಲ್ಲಿ ವಾಸ್ತುಶಿಲ್ಪದ ವಿವಿಧ ಈಗಿನ ಇರಾಕ್ ರೀತಿಯ ಶೈಲಿಗಳು ಪ್ರಾರಂಭವಾದವು. ಹಾಗೂ ಇರಾನಿನ ಕೆಲವು ಭಾಗಗಳಾದ ಯೂಪ್ರಟಿಸ್ ಹಾಗೂ ಟೈಗ್ರಿಸ್ ನದಿಗಳ ಕಣಿವೆ ಭಾಗಗಳು ಹಾಗೂ ಪರ್ಶಿಯ ದೇಶ, ಇಲ್ಲಿ ಪುರಾತನ ನಾಗರೀಕತೆ ಇತ್ತು.

ಇಲ್ಲಿ ತನ್ನದೇ ಆದ ವಾಸ್ತು ಶಿಲ್ಪವಿತ್ತು. ಇದೇ ಕಾಲದಲ್ಲಿ ಚೀಣಾ ದೇಶದಲ್ಲಿ ಪುರಾತನ ನಾಗರೀಕತೆಯು ಅಭಿವೃದ್ಧಿಗೆ ಬಂದಿತು.

ಅನಂತರ ಗ್ರೀಕರು ತಮ್ಮದೇ ಆದ ವಾಸ್ತುಶಿಲ್ಪ ಶೈಲಿಯನ್ನು ಆರಂಭಿಸಿದರು. ಕಾಲಕ್ರಮೇಣ ಈ ಶೈಲಿಯ ಪ್ರಭಾವವು ರೋಮನ್ನರ ಮೇಲೆ ಬಿದ್ದು ಅದು ಅವರಿಂದ ಅಭಿವೃದ್ಧಿಗೆ ಬಂದಿತು. ಈ ಶೈಲಿಗಳು ಯೂರೋಪ್ ದೇಶದ ಇತರ ಭಾಗಗಳಿಗೂ ಹಬ್ಬಿತು. ಇವುಗಳ ಜೊತೆಗೆ ಆರಂಭವಾದ ಯೂರೋಪ್ ದೇಶದ ಇತರ ವಾಸ್ತುಶಿಲ್ಪ ಶೈಲಿಗಳಲ್ಲಿ ಗಾತಿಕ್ ಶೈಲಿಯೂ ಒಂದು. ಕಾಲಕ್ರಮೇಣ ಈ ಶೈಲಿಗಳ ವಾಸ್ತುಶಿಲ್ಪವು ಪ್ರಪಂಚದ ನಾನಾ ಭಾಗಗಳಿಗೂ ಹಬ್ಬಿತು. ನಮ್ಮ ದೇಶದಲ್ಲೂ ಆ ಶೈಲಿಗಳ ಕಟ್ಟಡಗಳು ಇವೆ.



**ಮೈಸೂರಿನಲ್ಲಿರುವ ಸೆಂಟ್ ಫಿಲೋಮಿನ ಚರ್ಚ್ ಗ್ರೀಕ್ ವಾಸ್ತುಶಿಲ್ಪಕ್ಕೆ ಉದಾಹರಣೆ**

ಈಗಾಗಲೇ ಹೇಳಿರುವಂತೆ ನಮ್ಮ ದೇಶದ ಸಾಂಪ್ರದಾಯಿಕ ವಾಸ್ತುಶಿಲ್ಪವನ್ನು ಮುಖ್ಯವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ಒಂದು ಉತ್ತರ ಭಾರತೀಯ, ಮತ್ತೊಂದು ದಕ್ಷಿಣ ಭಾರತೀಯ ಅಥವಾ ದ್ರಾವಿಡ ವಾಸ್ತುಶಿಲ್ಪ ಶೈಲಿ.



**ಮೊಗಲ್ ವಾಸ್ತುಶಿಲ್ಪ ಶೈಲಿಯ ಚಾರ್‌ಮಿನಾರ್**

ಮೊಗಲರ ಆಳ್ವಿಕೆಯ ಕಾಲದಲ್ಲಿ ಆರಂಭವಾದ ವಾಸ್ತುಶಿಲ್ಪವು ಇಂಡೊ ಸರ್‌ಸನಿಕ್ ಶೈಲಿ ಎಂದು ಹೆಸರಾಗಿದೆ. ಸುಮಾರು ನಾಲ್ಕೈದು ಸಾವಿರ ವರ್ಷಗಳ ಹಿಂದೆ ಪ್ರಾರಂಭವಾದ ಪುರಾತನ ವಾಸ್ತುಶಿಲ್ಪ ಶೈಲಿಗೆ ವಿದಾಯ ಹೇಳಲಾಯಿತು.

**ನವ ವಾಸ್ತುಶಿಲ್ಪದ ಉದಯ :**

ಈಗ್ಗೆ ಸುಮಾರು ೬೫ ವರ್ಷಗಳ ಹಿಂದೆ ಯೂರೋಪ್ ದೇಶದ ಕೆಲವರು ಪುರಾತನ ವಾಸ್ತುಶಿಲ್ಪ ಶೈಲಿಯ ಬಗ್ಗೆ ಸಿಡಿದೆದ್ದರು. ವಾಸ್ತುಶಿಲ್ಪವು ಕಾಲಕ್ಕೆ ತಕ್ಕ ಹಾಗೆ ಮಾರ್ಪಾಡಾಗಬೇಕು.



**ಮೊಗಲ್ ವಾಸ್ತುಶಿಲ್ಪದ ಅತ್ಯುತ್ತಮ ಕೇಂದ್ರವಾದ ಫತೇಪುರ್ ಸಿಕ್ಕಿ ಕೋಟೆಯ ಮುಖದ್ವಾರ ಬುಲಂದ್ ದರ್ವಾಜ**

ಪುರಾತನ ವಾಸ್ತುಶಿಲ್ಪದಲ್ಲಿರುವಂತೆ ಅಲಂಕಾರ ಅಥವಾ ಶೃಂಗಾರಗಳು ಈ ಕಾಲದ ಕಟ್ಟಡಗಳಿಗೆ ಏಕೆ ಬೇಕು ಎಂಬುದು ಅವರ ವಾದ. ಕಟ್ಟಡಗಳನ್ನು ಪುರಾತನ ವಾಸ್ತುತಿಲ್ಪ ಶೈಲಿಯಲ್ಲಿ ಈಗಲೂ ಕಟ್ಟುವುದರಲ್ಲಿ ಅರ್ಥವಿಲ್ಲ. ಈ ರೀತಿಯ ಯೋಚನೆಯ ಫಲವಾಗಿ ನವ ವಾಸ್ತುಶಿಲ್ಪದ ಉದಯವಾಯಿತು. ವಿಜ್ಞಾನ ಹಾಗೂ ತಂತ್ರಜ್ಞಾನಗಳ ಮುನ್ನಡೆಯು ಇದಕ್ಕೆ ಸಹಕಾರಿಯಯಿತು.

ನವ ವಾಸ್ತುಶಿಲ್ಪದ ಪ್ರಕಾರ ಕಟ್ಟಡಗಳು ಸರಳ ರೀತಿಯಲ್ಲಿರಬೇಕು. ಇವುಗಳಲ್ಲಿ ಅಲಂಕಾರಕ್ಕೆ ಹೆಚ್ಚು ಪ್ರಾಧಾನ್ಯವಿಲ್ಲ. ಗೋಡೆಗಳ ದಪ್ಪ ಕಡಿಮೆ ಹೊಸದಾದ ವಸ್ತುಗಳ ಸಹಾಯದಿಂದ ಹೊಸ ಹೊಸ ರೀತಿಯ ಕಟ್ಟಡಗಳು ನಿರ್ಮಿಸಲ್ಪಟ್ಟವು.



**ಜಪಾನ್ ವಾಸ್ತುಶಿಲ್ಪ ಶೈಲಿಯ ಒಂದು ಕಟ್ಟಡ**

ಈಗ ವಾಸ್ತುಶಿಲ್ಪಿಯು ಆಧುನಿಕ ತಾಂತ್ರಿಕ ಜ್ಞಾನ ವನ್ನು ಹೊಂದಿರುವನು, ಒಂದು ದೊಡ್ಡ ವಿಮಾನವು ಒಳಗೆ ಹೋಗಲು ಸಾಧ್ಯವಾಗುವಷ್ಟು ದೊಡ್ಡದಾದ ಕಟ್ಟಡವನ್ನು ನಿರ್ಮಿಸಲು ಈಗ ಸಾಧ್ಯವಾಗಿದೆ. ಹಿಂದಿನ ಕಾಲದಲ್ಲಿ ಇಷ್ಟು ದೊಡ್ಡ ಕಟ್ಟಡಗಳು ಇದ್ದರೂ ಸಹ ಅವುಗಳ ಮಧ್ಯ ಅನೇಕ ಕಂಬಗಳು ಇರುತ್ತಿದ್ದವು. ಮಧ್ಯದ ಕಂಬಗಳಿಂದ ವಿಶಾಲವಾದ ಆಶ್ರಯವನ್ನು ಕಟ್ಟಲು ಈಗ ಸಾಧ್ಯವಾಗಿದೆ.

ಹಸನಾದ ಕಬ್ಬಿಣವೇ ಉಕ್ಕು. ಇದಕ್ಕೆ ಹೆಚ್ಚಿನ ಸಾಮರ್ಥ್ಯವುಂಟು. ಇದನ್ನು ನಾನಾ ಆಕಾರಗಳಲ್ಲಿ ತಯಾರಿಸಿ ಕಟ್ಟಡ ಸಾಮಗ್ರಿಯಾಗಿ ಬಳಸಬಹುದು. ಗರ್ಡರ್ ಎಂದರೆ ಉಕ್ಕಿನ ತೊಲೆ. ಇದು ಅನೇಕ ಅಂತಸ್ತುಗಳ ಕಟ್ಟಡ ನಿರ್ಮಾಣದಲ್ಲಿ ಸಹಕಾರಿಯಾಯಿತು.

ನವ ವಾಸ್ತುಶಿಲ್ಪಕ್ಕೆ ಅನುಕೂಲ ಸಿಂಧುವಾದ ಇನ್ನೊಂದು ವಸ್ತು; ಅದೇ ಉಕ್ಕಿನ ಸರಳುಗಳು, ಸಿಮೆಂಟು ಕಾಂಕ್ರೀಟು. ಸಿಮೆಂಟು ಹಾಗೂ ಅದರಿಂದ ತಯಾರಾದ ಕಾಂಕ್ರೀಟು ರೋಮನ್ನರ ಕಾಲದಿಂದಲೂ ಇವೆ. ಆದರೆ ಉಕ್ಕಿನ ಸರಳುಗಳಿಂದ ಬಿಗಿಯಲ್ಪಟ್ಟ ಆರ್.ಸಿ.ಸಿ. (ರೀ ಇನ್‌ಫೋರ್ಸ್ಡ್

ಸಿಮೆಂಟ್ ಕಾಂಕ್ರೀಟ್) ಇತ್ತೀಚಿನದು. ಇದು ಬಹಳ ಬೇಗ ಗಟ್ಟಿಯಾಗಿ ಹೆಚ್ಚು ಶಕ್ತಿಯುಕ್ತವಾಗುತ್ತದೆ. ಇದನ್ನು ನಮಗೆ ಬೇಕಾದ ಆಕಾರದಲ್ಲಿ ಎರಕ ಹೊಯ್ಯಬಹುದು. ಇದರ ಸಹಾಯದಿಂದ ಅದ್ಭುತವಾದ ಆಧುನಿಕ ಕಟ್ಟಡಗಳನ್ನು ನಿರ್ಮಿಸಬಹುದು.

ಹೀಗೆ ಇನ್ನೂ ಅನೇಕ ವಸ್ತುಗಳು ನವ ವಾಸ್ತುಶಿಲ್ಪ ರಚನೆಗೆ ಸಹಕಾರಿಯಾಗಿದೆ. ಇವುಗಳಲ್ಲಿ ಮುಖ್ಯವಾದವು ಎಂದರೆ ಅಲ್ಯೂಮಿನಿಯಂ, ಗಾಜು, ಪ್ಲಾಸ್ಟಿಕ್ಸ್, ಗಾಜಿನ ನಾರು (ಗ್ಲಾಸ್ ವೂಲ್), ಸ್ಟೈಯಿನ್‌ಲೆಸ್ ಸ್ಟೀಲು ಮುಂತಾದವು. ಈ ವಸ್ತುಗಳ ಉಪಯೋಗ, ಕಟ್ಟಡದ ನಿರ್ಮಾಣದಲ್ಲಾದ ಉತ್ತಮ ಬದಲಾವಣೆಗಳು.

ಹೀಗೆ ವಾಸ್ತುಶಿಲ್ಪದ ಬೆಳವಣಿಗೆ ಆದಿಯಿಂದ ಇಲ್ಲಿನವರೆಗೆ ಬೆಳೆಯುತ್ತಾ, ಬದಲಾಗುತ್ತಾ ಸಮೀಕರಣಗೊಳ್ಳುತ್ತಾ ಬಂದು ಅತ್ಯಂತ ಆಧುನಿಕ ವಿಜ್ಞಾನವಾಗಿ ಬೆಳೆದು ನಿಂತಿದೆ. ಇದರಿಂದ ಆಧುನಿಕ ಮಾನವನ ಆಧುನಿಕ ಬೇಡಿಕೆಗಳ ಪೂರೈಕೆ ಸುಗಮವಾಗುತ್ತಿದೆ.

# ಘಟಕ. ೪

## ಸಂಕೀರ್ಣ ಲೇಖನಗಳು

**ಆಶಯ:**

ಬಂದಿದ್ದೆಲ್ಲಾ ಬರಲಿ ಭಗವಂತನ ದಯರಯೊಂದಿರಲಿ ಎಂಬ ಮಾತಿನಂತೆ ನಮ್ಮ ಜೀವನದಲ್ಲಿ ಅವಸರ ಹಾಗೂ ಅಲ್ಪತೃಪ್ತಿಗಳಿಂದ ಪ್ರತಿಭೆ ಬೆಳೆಯುವುದಕ್ಕೆ, ವಿಕಸಿಸುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ತಲೆಗೆ ಹೊಳೆದ ವಿಚಾರ ನಾಲ್ಕು ದಿವಸ ಅಲ್ಲಿ ನಿಂತು ಪುಟಗೊಳ್ಳಲು ಸಾಧ್ಯವಾಗುವಂತೆ ಮಾಡಲು ನಮಗೆ ವ್ಯವಧಾನವಿಲ್ಲ. ಜೀವನದ ಸಾಧಕ–ಬಾಧಕಗಳನ್ನು ಎದುರಿಸುವ ಆಂತರಿಕ ಮನಸ್ಥೈರ್ಯ ಅಗತ್ಯವಾದದ್ದು. ಆಧುನಿಕ ಜಾಗತೀಕರಣದ ವಲಯದಲ್ಲಿ ನಮ್ಮನ್ನು ನಾವು ತೋರ್ಪಡಿಸಿಕೊಳ್ಳುವಂತಹ ದಿಟ್ಟತನದ ಪ್ರತಿಭಟನಾತ್ಮಕತೆಯ ಹಾದಿಯಲ್ಲಿ ನಮ್ಮನ್ನು ನಾವು ಒಂದುಗೂಡಿಸಿಕೊಂಡಾಗ ಹಂತಹಂತವಾಗಿ ಸಾಧನೆಯ ಮೆಟ್ಟಿಲು ಸಾಧಕನದಾಗಿರುತ್ತದೆ.

"ಮನಸಿದ್ದರೆ ಮಾರ್ಗ"

# ೧. ಬೆಂಗಳೂರಿನ ಹತ್ತಿರ ಜಪಾನೀ ಟೌನ್‌ಶಿಪ್

**– ಕೆ.ವಿ.ಸುಬ್ಬಣ್ಣ**

ಕೆಲವು ದಿನಗಳ ಹಿಂದೆ 'ಪ್ರಜಾವಾಣಿ', 'ಕನ್ನಡಪ್ರಭ' ದಿನಪತ್ರಿಕೆಗಳಲ್ಲಿ ಕೆ.ವಿ. ಸುಬ್ಬಣ್ಣನವರ ಪತ್ರವೊಂದಿತ್ತು. ಆ ಪತ್ರ ಬೆಂಗಳೂರಿನ ಹತ್ತಿರ ಜಪಾನಿ ಟೌನ್‌ಶಿಪ್ ಒಂದು ಬರುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿತ್ತು. ಆದರೆ ಆ ಪತ್ರವನ್ನು ಕನ್ನಡ ಜನತೆ ಮತ್ತು ಕನ್ನಡ ಚಳವಳಿಗಾರರು ಅಷ್ಟು ಗಂಭೀರವಾಗಿ ಪರಿಗಣಿಸಿದ ಹಾಗೆ ಕಾಣುತ್ತಿಲ್ಲ. ಕರ್ನಾಟಕಕ್ಕೆ, ಕನ್ನಡಕ್ಕೆ ಆ ಜಪಾನೀ ನೆಲೆಯಿಂದಾಗಿ ಆಗಲಿರುವ ಅಪಾಯವೇ ಕನ್ನಡಿಗರಿಗೆ ತಟ್ಟಿದಂತಿಲ್ಲ.

ಈಗ ಲಭ್ಯವಿರುವ ಹರಕು, ಮುರುಕು ಸುದ್ದಿಯ ಪ್ರಕಾರ ಜಪಾನಿ ಬಂಡವಾಳಿಗರು ಬೃಹತ್ ಪ್ರಮಾಣದ ಉಪನಗರವೊಂದನ್ನು ಬೆಂಗಳೂರು–ಮೈಸೂರು ರಸ್ತೆಯಲ್ಲಿ ಬಿಡದಿ ಸುಮಾರಿಗೆ ಕಟ್ಟಲಿದ್ದಾರೆ. ಏನಿಲ್ಲವೆಂದರೂ ಈ ಉಪನಗರ ಅಂತಿಮವಾಗಿ ಸುಮಾರು ೧೦ ಸಾವಿರ ಎಕರೆ ಕಬಳಿಸಲಿದೆ ಎಂದು ತಜ್ಞರ ಅಂದಾಜಿದೆ. ಆದರೆ, ನಿಗೂಢ ಸಂಗತಿ ಎಂದರೆ ಇಡೀ ಯೋಜನೆಯ ವಿವರಗಳು ಸರ್ಕಾರದ ಹತ್ತಿರವೇ ಇರುವ ಹಾಗೆ ಕಾಣುತ್ತಿಲ್ಲ. ರೆವಿನ್ಯೂ ಅಧಿಕಾರಿಗಳಲ್ಲೂ ಈ ಬಗ್ಗೆ ಅಗಾಧ ಅಜ್ಞಾನವೇ ತುಂಬಿದೆ. ಈ ಬಗ್ಗೆ ಅವರನ್ನು ಪ್ರಶ್ನಿಸಿದರೆ ಮಹಾ ಅಸಂಬದ್ಧ ಉತ್ತರಗಳು ಬರುತ್ತವೆ.

ಬೆಂಗಳೂರು ಬೆಳೆಯುತ್ತಿರುವ ದೈತ್ಯಾಕಾರೀ ರೀತಿಯಿಂದಾಗಿ ಅದರ ಸುತ್ತಮುತ್ತಲ ಸುಮಾರು ೭೦–೮೦ ಕಿ.ಮೀ.ಗಳ ತನಕ ಉಪನಗರಗಳು ಇತ್ಯಾದಿಗಳು ಬೃಹದಾಕಾರವಾಗಿ ಬೆಳೆಯುತ್ತವೆ ಎಂಬ ಬಗ್ಗೆ ಯಾರಿಗೂ ಅನುಮಾನವೇ ಬೇಡ. ಮೆಟ್ರೋಪಾಲಿಟನ್ ಬೆಂಗಳೂರು ಎಂಬ ಕಲ್ಪನೆಯೇ ಎಷ್ಟು ಭಯಾನಕ ಎಂದು ನಮಗೆ ನಿಜವಾಗಿ ಹೊಳೆಯುವುದು ೨೦–೨೫ ವರ್ಷಗಳ ನಂತರವೇ. ಅಥವಾ ಅಷ್ಟು ದೂರವೂ ಕಾಯಬೇಕಾದ ಅಗತ್ಯವಿಲ್ಲವೆಂದು ಕಾಣುತ್ತದೆ. ಮುಂದೆ ಅಷ್ಟು ಕ್ರಮಬದ್ಧವಾಗಿ ನಗರ ಬೆಳೆಯತ್ತದೊ ಇಲ್ಲವೊ ಹೇಳುವುದು ಕಷ್ಟ. ಆದರೆ, ಕನ್ನಡ ಜನ ಮತ್ತು ಬೆಂಗಳೂರಿನ ಪರಿಸರದ ಆರೋಗ್ಯ ನಾಶವಾಗುವುದಂತೂ ಗ್ಯಾರಂಟಿ.

ಬೆಂಗಳೂರು ಮೈಸೂರು ರಸ್ತೆಯಲ್ಲಿ ಜಪಾನೀ ಟೌನ್‌ಶಿಪ್ ಬಂದರೆ ಆಗುವ ಅನಾಹುತಗಳು ಏನೇನು ಎನ್ನುವುದನ್ನು ಸದ್ಯಕ್ಕೆ ಚಿಕ್ಕದಾಗಿಯಾದರೂ ಲೆಕ್ಕಹಾಕಲು ಸಾಧ್ಯವಿದೆ. ಸಾವಿರಾರು ಎಕರೆಗಳ ಈ ಯೋಜನೆ ನಿಸ್ಸಂದೇಹವಾಗಿ ಕನ್ನಡೇತರ ಶ್ರೀಮಂತರಿಗೆ ಎಂಬ ಬಗ್ಗೆ ಅನುಮಾನ ಬೇಡ. ಏಕೆಂದರೆ, ಅಂತಾರಾಷ್ಟ್ರೀಯ ಮಟ್ಟದ ಉಪನಗರ ಇದಾಗಿ ರೂಪುಗೊಳ್ಳುತ್ತದೆಯಾದ್ದರಿಂದ ಅಲ್ಲಿ ಮನೆ ಮತ್ತು ಆಸ್ತಿಪಾಸ್ತಿ ಕೊಳ್ಳುವ ಶಕ್ತಿ ಕನ್ನಡದ ಯಾವ ವರ್ಗಗಳಿಗೂ ಇಲ್ಲ. ಆದರೆ, ಇಲ್ಲೊಂದು ಚಿಕ್ಕ ಸಮಸ್ಯೆಯೂ ತಲೆಹಾಕಿದೆ. ಈ ರೀತಿಯ ವಿವಿಧ ನಗರ ವಸತಿ ಮತ್ತು ಉಪನಗರಗಳ ಯೋಜನೆಗಳಿಗೆ ಬೆಂಗಳೂರಿನ ಸುತ್ತಮುತ್ತಲ ಹಳ್ಳಿಗಳಲ್ಲಿ ಸರ್ವೆ ಪ್ರಾರಂಭವಾಗಿದೆ. ಇಲ್ಲಿ ನಿಜವಾದ ಅಪಾಯವೇನೆಂದರೆ ಸರ್ಕಾರವೇ ಖುದ್ದಾಗಿ ನಿಂತು ಕಡಿಮೆ ಬೆಲೆಗೆ ಭೂಮಿಯನ್ನು ವಶಪಡಿಸಿಕೊಂಡು ನಂತರ ವಿಶೇಷ ವಸತಿಯೋಜನೆಗಳ ನೆಪದಲ್ಲಿ ಖಾಸಗಿ ಬೃಹತ್ ಬಂಡವಾಳಿಗರಿಗೆ ಮುಂದೆ ಕೊಟ್ಟು ಬಿಡಬಹುದು

ಎನ್ನುವುದು. ಸರ್ಕಾರದ ಪರಿಹಾರ ನೀಡಿಕೆ ಕ್ರಮದಲ್ಲಿ ರೈತವಿರೋಧಿಯಾದ ಅಂಶಗಳು ಸಾಕಷ್ಟಿವೆ. ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ದಾಖಲಾಗಿರುವ ಮಾರಾಟದ ಬೆಲೆಯ ಮೊತ್ತ ಎಷ್ಟಿರುತ್ತದೊ ಅದರ ಸರಾಸರಿ ಆಧಾರದ ಮೇಲೆ ಪರಿಹಾರವನ್ನು ನಿಗದಿಮಾಡುವ ಕ್ರಮ ಒಂದು. ಆಮೇಲೆ ಪರಿಹಾರ ಸಾಲದು ಎಂದು ರೈತ ಅಪೀಲು ಹೋಗಬಹುದಾದರೂ ಇಲ್ಲಿ ಅಡಕವಾಗಿರುವ ಲಂಚ, ರುಷುವತ್ತು ತರಲೆಗಳು ಊಹಾತೀತ. ಒಂದಕ್ಕೆ ಹತ್ತರಷ್ಟು ಪರಿಹಾರ ಕೊಟ್ಟರೂ ಅದು ಅಂತಿಮವಾಗಿ ಕೃಷಿಭೂಮಿ ಲೆಕ್ಕದಲ್ಲೇ ಹೊರತು ಸಿಕ್ಕಾಪಟ್ಟೆ ಬೆಲೆಬಾಳುವ ಪರಿವರ್ತಿತ ನಗರ ಭೂಮಿ ಲೆಕ್ಕದಲ್ಲಿ ಅಲ್ಲ. ಇಷ್ಟಾದರೂ ಈಗಾಗಲೆ ಸರ್ವೆ ಆಗುತ್ತಿರುವ ಬೆಂಗಳೂರು ಜಿಲ್ಲೆ ಹಳ್ಳಿಗಳಲ್ಲಿ ಅನೇಕ ರೈತರಿಗೆ ತಮಗೆ ಸಿಗಬಹುದಾದ ಪರಿಹಾರ ಧನದ ಬಗ್ಗೆ ರೋಮಾಂಚಕಾರೀ ಕಲ್ಪನೆಗಳು ಹುಟ್ಟಿಕೊಂಡಿವೆ. ಎಕರೆಗೆ ಒಂದು ಲಕ್ಷ ಸಿಗಬಹುದು ಎನ್ನುವ ಕಲ್ಪನೆಯೇ ಅವರಿಗೆ ಥ್ರಿಲ್ ಉಂಟುಮಾಡಿದೆ. ಬೆಂಗಳೂರು ಸುತ್ತಮುತ್ತ ಹಳ್ಳಿಗಳಲ್ಲಿ ಕೃಷಿಯ ಬಗ್ಗೆ ಆಸಕ್ತಿ ಮತ್ತು ಕೆಲಸ ತುಂಬ ಕಡಿಮೆ ಆಗಿಬಿಟ್ಟಿದೆ ಎನ್ನುವುದೂ ಕೂಡಾ ಸತ್ಯ. ಹೀಗಾಗಿ, ಬೀಳು ಬಿದ್ದಿರುವ ಜಮೀನುಗಳಿಗೆ ಎಕರೆಗೆ ಲಕ್ಷ ಸಿಗುತ್ತದೆ ಎಂಬ ಅಂಶ ಆಕರ್ಷಕವಾಗಿ ಕಾಣುತ್ತದೆ. ಆದರೆ, ನಗರದ ಭೂಮಿಯಲ್ಲಿ ಲಕ್ಷಕ್ಕೆ ೩೦–೪೦ ಅಡಿಗಳ ಸೈಟು ಕೂಡಾ ಬರುವುದಿಲ್ಲ ಎಂಬ ಅಂಶ ನಮ್ಮ ರೈತರಿಗೆ ಇನ್ನೂ ಆಳವಾಗಿ ಮನದಟ್ಟಾಗಬೇಕಾಗಿದೆ. ಇದು ಅರ್ಥವಾಗಿರುವ ಮತ್ತು ಕೃಷಿಯ ಬಗ್ಗೆ ಆಸಕ್ತಿ ಇರುವ ರೈತರು ಮಾತ್ರ ಇದರಿಂದ ಭೀತರಾಗಿದ್ದಾರೆ. ತಮ್ಮ ಈಗಿರುವ ಊರುಗಳಿಂದ ೩೦–೪೦ ಕಿ.ಮೀ. ಹೋದರೂ ಕೃಷಿಯೋಗ್ಯ ಜಮೀನು ಸಿಗುವುದಿಲ್ಲ ಎಂಬ ಸತ್ಯ ಅವರಿಗೆ ಗೊತ್ತಿದೆ. ಈಗ ಸಿಗುತ್ತಿರುವ ಜಮೀನು ಏನಿದ್ದರೂ ಕೃಷಿಗೆ ಅಯೋಗ್ಯವಾದ ಜಮೀನು ಎಂಬ ಸತ್ಯವೂ ಅವರಿಗೆ ಗೊತ್ತಿದೆ.

ಭೂಮಿ ಮತ್ತು ವಸತಿಗೆ ಸಂಬಂಧಪಟ್ಟ ಯೋಜನೆಗಳೆಲ್ಲವೂ ಅಧಿಕಾರಸ್ಥ ರಾಜಕಾರಣಿಗಳು ಮತ್ತು ಖಾಸಗಿ ಸಂಸ್ಥೆಗಳ ಕೀಲ್ ಮೇಲೆಯೇ ನಡೆಯುತ್ತವೆ. ಸರ್ಕಾರದ ಬಾಬತ್ತಿನಲ್ಲಿ ಭೂಮಿ ವಶಪಡಿಸಿಕೊಂಡು ಖಾಸಗಿಯವರಿಗೆ ಕೊಟ್ಟರೆ, ಆ ತಿಮಿಂಗಲಗಳು ನೇರವಾಗಿ ಮಾರ್ಕೆಟ್ ರೇಟ್ ಕೊಟ್ಟು ಕೊಳ್ಳುವ ಕೆಲಸ ತಪ್ಪುತ್ತದೆ. ಸಂಬಂಧಪಟ್ಟ ಮಂತ್ರಿಗಳಿಗೆ, ಸರ್ಕಾರಕ್ಕೆ ಒಂದಷ್ಟು ದುಡ್ಡು ದೊಡ್ಡದಾಗೇ ಚೆಲ್ಲಿದರೆ ಮುಗಿಯಿತು. ಒಂದು ಕೋಟಿ ಲಂಚ ಕೊಟ್ಟರೂ, ಐದು ಕೋಟಿ ಮಿಗುತ್ತದಲ್ಲ! ಇದು ಖಾಸಗಿಯವರ ಲೆಕ್ಕಾಚಾರ.

ಜಪಾನೀ ಟೌನ್‌ಶಿಪ್ ಬಂದರೆ, ಒಂದು ಪಕ್ಷ ಅವರು ನೇರವಾಗೇ ಹಣ ಕೊಟ್ಟುಕೊಳ್ಳುತ್ತಾರೆ ಎಂದು ಭಾವಿಸೋಣ. ಮೊದಲಿಗೆ, ಅನೇಕ ಹಳ್ಳಿಗಳು ಸಂಪೂರ್ಣವಾಗಿ ನಿರ್ನಾಮವಾಗುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಜಪಾನೀಯರ ಶಕ್ತಿ ಮತ್ತು ಹಣದ ಪ್ರಭಾವದ ಕಾರಣಕ್ಕಾಗಿ ಬೆಂಗಳೂರಿನ ಕನ್ನಡ ಮತ್ತು ಕನ್ನಡಿಗರ ಪ್ರಭಾವ ಪೂರ್ಣವಾಗಿ ಕುಗ್ಗಿ ಪಾತಾಳಕ್ಕೆ ಹೋಗಲಿದೆ. ಈ ಉಪನಗರದಲ್ಲಿ ಆ ಜನ ತಮ್ಮದೇ ಆದ ವಿದ್ಯೆ, ಮನರಂಜನೆ, ಸಂಸ್ಕೃತಿ ಬೆಳೆಸಿಕೊಳ್ಳುವುದರಿಂದ ಇಲ್ಲೆಲ್ಲ ಸಹಜವಾಗಿ ಕನ್ನಡವೇ ಇರುವುದಿಲ್ಲ. ಕರ್ನಾಟಕ ಸರ್ಕಾರದ ಈಗಿನ ಶಿಕ್ಷಣ ನೀತಿಯಿಂದಾಗಿ ಅವರಾರೂ ಕನ್ನಡ ಕಲಿಯುವುದೂ ಇಲ್ಲ. ಈಗಿರುವ ಸ್ಥಿತಿಯಲ್ಲಿ ಕರ್ನಾಟಕದಲ್ಲಿ ಒಂದು ಹಳ್ಳಿ ಕಣ್ಮರೆಯಾದರೆ ಕನ್ನಡಕ್ಕೆ ಹತ್ತು ಗಾಯಗಳಾದಂತೆ. ಕೆ.ಎಸ್.ಆರ್.ಟಿ.ಸಿಯಲ್ಲಿ ಜವಾನರ ಅಥವಾ ಡ್ರೈವರ್ ಕೆಲಸಕ್ಕೆ ಕನ್ನಡದ

ಪರೀಕ್ಷೆ ಕಡ್ಡಾಯ ಮಾಡುವ ಬಗ್ಗೆ ತಲೆಕೆಡಿಸಿಕೊಳ್ಳುವ ಕನ್ನಡ ಹೋರಾಟಗಾರರು ಈ ಟೌನ್‌ಷಿಪ್‌ಗಳ ಅಪಾಯದ ಬಗ್ಗೆ ಮಾತೇ ಆಡದಿರುವುದು ಆಶ್ಚರ್ಯ. ಬೆಂಗಳೂರು, ಮೈಸೂರು ರಸ್ತೆಯಲ್ಲಾಗುವ ಈ ರೀತಿಯ ಟೌನ್‌ಷಿಪ್‌ಗಳಿಂದಾಗಿ ಕ್ರಮೇಣ ಮೈಸೂರು ಕೂಡಾ ತನ್ನ ಕನ್ನಡತನವನ್ನು ಕಳೆದುಕೊಳ್ಳುತ್ತದೆ. ಏಕೆಂದರೆ, ಸಂಸ್ಕೃತಿಗಳು ತಮಗಿಂತ ಭೌತಿಕವಾಗಿ ಬಲಿಷ್ಠವಾಗಿರುವವರ ಮುಂದೆ ಸಾಮಾನ್ಯವಾಗಿ ಮಂಕಾಗಿ ಕ್ರಮ ಕ್ರಮೇಣ ಕರಗಿಹೋಗುತ್ತವೆ. ಆ ಬಗ್ಗೆ ಒಂದು ಪ್ರಜ್ಞಾಪೂರ್ವಕವಾದ ಚಳವಳಿ ಆದಾಗ ಮಾತ್ರ ಸಂಸ್ಕೃತಿ ಉಳಿಯುತ್ತದೆ. ಇದಕ್ಕಾಗಿಯಾದರೂ ನಾವು ಈ ಬಗ್ಗೆ ದನಿ ಎತ್ತಬೇಕಾಗಿದೆ.

ಆದರೆ, ಇಲ್ಲಿ ಅಡಕವಾಗಿರುವ ಪ್ರಶ್ನೆಗಳು ನಿಜವಾಗಿಯೂ ಜಟಿಲವಾದದ್ದು. ಅಂತಾರಾಷ್ಟ್ರೀಯ ಬಂಡವಾಳವನ್ನು ಹಾತೊರೆದು ಕರೆಯುತ್ತಿರುವ ಈಗಿನ ಆರ್ಥಿಕ ನೀತಿಯ ಹಿನ್ನೆಲೆಯಲ್ಲಿ ಇವನ್ನು ಪರೀಕ್ಷಿಸಬೇಕು. ಈಗ ನಾಡಿನ ಅಭಿವೃದ್ಧಿಗೆ, ಈಗಿರುವ ಅಭಿವೃದ್ಧಿ ಮಾದರಿಗಳ ಕಾರಣಕ್ಕಾಗಿ ಹೊರಗಿನ ಬಂಡವಾಳ ಬೇಕು. ಅಂಥ ಬಂಡವಾಳವನ್ನು ನಿರಾಕರಿಸಿ ನಾಡನ್ನು ಆರ್ಥಿಕವಾಗಿ ಕಟ್ಟುವ ಆರ್ಥಿಕ ಏಕಾಂತತೆ ಕಾರ್ಯಕ್ರಮಗಳು ಈಗ ತುಂಬ ಅಪ್ರಸ್ತುತ ಎಂಬಂತೆ ಕಾಣುತ್ತಿವೆ. ಹೀಗಾಗಿ, ಈ ಬಂಡವಾಳಕ್ಕೆ ಸಾಮಾಜಿಕ ಅಥವಾ ಸಾಂಸ್ಕೃತಿಕ ನಿಯಂತ್ರಣ ಖಂಡಿತವಾಗಿ ಬೇಕೇ ಬೇಕು. ಸಾಂಸ್ಕೃತಿಕ ನಿಯಂತ್ರಣವಿರದ ಬಂಡವಾಳ ಇಡೀ ಸಮಾಜವನ್ನೆ ನಿರ್ಮೂಲನ ಮಾಡುತ್ತದೆ. ಈಗಿನ ಆರ್ಥಿಕ ನೀತಿಯಲ್ಲಿ ಈ ಸಾಮಾಜಿಕ ಅಥವಾ ಸಾಂಸ್ಕೃತಿಕ ನಿಯಂತ್ರಣದ ಅಂಶವೇ ಇಲ್ಲ. ರಾಜಕೀಯ ನಿಯಂತ್ರಣ ಕೂಡ ಇಲ್ಲವಾಗಿದೆ. ಇದು ಎಲ್ಲೀತನಕ ಹೋಗಿದೆ ಎಂದರೆ ಈ ಜಪಾನಿ ಉಪನಗರದ ಇಡೀ ಯೋಜನೆಯನ್ನು ಖಾಸಗಿ ಕಂಪನಿಗಳೇ ಪೂರ್ಣವಾಗಿ ರೂಪಿಸಿ ನಾಮಕಾವಸ್ತೆ ರೀತಿಯಲ್ಲಿ ಸರ್ಕಾರದಿಂದ ಎಸ್ ಎನ್ನಿಸುತ್ತದೆ. ಈ ಅಪಾಯದಿಂದ ನಾವು ಪಾರಾಗಬೇಕು. ಆದ್ದರಿಂದ, ಜಪಾನೀ ಉಪನಗರದ ಕಲ್ಪನೆ ಏನಿದೆ, ಅದರಲ್ಲಿ ಕನ್ನಡ ಮತ್ತು ಕನ್ನಡಿಗರ ಹಿತರಕ್ಷಣೆ ಕಾಯುವ ನಿರ್ದಿಷ್ಟ ನಿಯಂತ್ರಕಗಳು ಇರದಿದ್ದರೆ ಆ ಇಡೀ ಯೋಜನೆಗೆ ಅವಕಾಶ ಕೊಡಕೂಡದು.

ಇದರರ್ಥ ಕರ್ನಾಟಕದಲ್ಲಿ ಹೊರಗಿನವರು ಬಂದು ಸೇರಲೇಬಾರದು ಎಂದಲ್ಲ. ಸುಬ್ಬಣ್ಣನವರೇ ತಮ್ಮ ಪತ್ರದಲ್ಲಿ ಟಿಬೆಟಿಯನ್ನರ ಪ್ರಸ್ತಾಪ ಮಾಡಿದ್ದಾರೆ. ಟಿಬೆಟಿಯನ್ನರು ತಮ್ಮತನ ಉಳಿಸಿಕೊಂಡೂ ಸ್ಥಳೀಕರ ಜತೆಯಲ್ಲಿ ಸೌಹಾರ್ದದಿಂದ ಇದ್ದಾರೆ. ಆದರೆ, ಏಷ್ಯಾದಲ್ಲಿ ಜಪಾನೀಯರು ಹಾಗಲ್ಲ. ಅವರು ಏಷ್ಯದ ಅಮೆರಿಕನ್ನರು ಎಂಬ ಬಗ್ಗೆ ಸಂಶಯವೇ ಬೇಡ. ದಕ್ಷಿಣ ಏಷ್ಯಾದ ಅನೇಕ ದೇಶಗಳನ್ನು ಈಗಾಗಲೆ ಅವರು ಕುಲಗೆಡಿಸಿಹಾಕಿದ್ದಾರೆ. ಥಾಯ್ಲೆಂಡನ್ನು ಸೂಳೆಗೇರಿಯನ್ನಾಗಿ ಮಾಡುವುದರಲ್ಲಿ ಜಪಾನೀಯರ ಪಾತ್ರ ತೀರಾ ದೊಡ್ಡದು. ಬಾಲ ವೇಶ್ಯಾವೃತ್ತಿಗಂತೂ ಅವರದು ವಿಶೇಷ ಪ್ರೋತ್ಸಾಹ. ಥಾಯ್‌ಲೆಂಡಿನ ವಿಮಾನ ನಿಲ್ದಾಣಗಳಲ್ಲಿ ಗುಂಪು ಪ್ರವಾಸ ಯೋಜನೆಯಲ್ಲಿ ಬರುವ ಹಾರ ಹಾಕಿಕೊಂಡ ಮುದುಕರು ಥಾಯ್ ವೇಶ್ಯೆಯರ ಜತೆ ವರ್ತಿಸುವುದನ್ನು ನೋಡಿಯೇ ತಿಳಿಯಬೇಕು.

ಹೀಗಾಗಿ, ನಾವು ಹೊರಗಿನ ಎಲ್ಲರ ಬಗ್ಗೆ ಸಾರಾಸಗಟಾಗಿ ವಿಷ ಕಕ್ಕಬಾರದು. ಆದರೆ, ಕನ್ನಡ ಮತ್ತು ಕರ್ನಾಟಕತ್ವಗಳನ್ನೆ ನಾಶಮಾಡುವ ಬೆಳವಣಿಗೆಯನ್ನು ಉಗ್ರವಾಗಿ ವಿರೋಧಿಸಲೇ ಬೇಕು. ಹಾಗೆ ನೋಡಿದರೆ, ಇದು ಬರೀ ಕರ್ನಾಟಕದ ಪ್ರಶ್ನೆ ಅಲ್ಲ. ಸುಬ್ಬಣ್ಣ ಬರೆಯುತ್ತಾರೆ. “ಅನೇಕ ರೀತಿಗಳಿಂದ ಈ ದೇಶ, ಕಳೆದ ೪೫ ವರ್ಷಗಳ ಕೆಲವೇ ಹೆಮ್ಮೆಯ ಗಳಿಕೆಗಳನ್ನು ನಾಶಮಾಡಲು ಹೊರಟಂತಿದೆ.

ಈಚಿನ ದಿನಗಳಲ್ಲಿ ಗಟ್ಟಿಯಾದ ಜನಾಭಿಪ್ರಾಯ ರೂಪುಗೊಂಡು ಭಾರೀ ಪ್ರತಿಭಟನೆ ಬಾರದಿದ್ದರೆ, ನಮ್ಮ ಈಗಿನ ಸರ್ಕಾರ ರಾಷ್ಟ್ರವನ್ನು 'ನಂಬಿಕೆ ಕ್ರಯ'ಕ್ಕೆ ಹಾಕಿ ಕೊಟ್ಟೇ ಬಿಡುತ್ತದೆ, ಸಂದೇಹವೇ ಇಲ್ಲ.

ಕನ್ನಡ ಉಳಿಯಲು, ಭಾರತ ಉಳಿಯಲು ಬಂಡವಾಳಶಾಹಿಗೆ ಸಾಂಸ್ಕೃತಿಕ, ಸಾಮಾಜಿಕ ನಿಯಂತ್ರಣ ಹಾಕಲೇಬೇಕಾಗಿದೆ. ಬಂಡವಾಳದ ಕ್ರಿಯಾಶೀಲತೆ ಕುಗ್ಗಿಸುವಂಥ ನೌಕರಶಾಹೀ ರೆಡ್ ಟೆಪಿಸಂ ಬೇಡ, ಸರಿ. ಆದರೆ, ಈ ನಾಡು ಒಂದು ಆರೋಗ್ಯಕರ ಸಮಾಜವಾಗಿ ಉಳಿಯಬೇಕು. ಅದಕ್ಕಾಗಿ ಕನ್ನಡಿಗರು ದನಿ ಎತ್ತಬೇಕಾಗಿದೆ. ಗುಟ್ಟಾದ, ಅಷ್ಟು ಗುಟ್ಟಲ್ಲದ ಡೀಲ್‌ಗಳಲ್ಲಿ ಕರ್ನಾಟಕ ನಾಶವಾಗದಂತೆ ನೋಡಿಕೊಳ್ಳಬೇಕಾಗಿದೆ.

**– ಲಂಕೇಶ್ ಪತ್ರಿಕೆ, ಆಗಸ್ಟ್ ೧೨, ೧೯೯೨ರಲ್ಲಿ ಪ್ರಕಟ**

## ೨. ಹಣದ ಹುಚ್ಚು

**– ಡಿ.ಎಚ್. ಲಾರೆನ್ಸ್**

ಹಣವಿದೆ ನೋಡಿ, ಸ್ವಾಮಿ,
ಅದು ಪ್ರಪಂಚಕ್ಕೇ ಹಿಡಿದ ಹುಚ್ಚು.
ಗುಂಪು ಗುಂಪಿಗೇ ಹುಚ್ಚು ಹಿಡಿದಾಗ
ಚಿತ್ತಸ್ವಾಧೀನ ಉಳಿಸಿಕೊಂಡಾಸಾಮಿ
ಕಾಣಸಿಗಬಹುದೆ, ಹೇಳಿ.

ಒಂದೂ ರೂಪಾಯಿ ತೆಗೆದು ಪುಕಸಟ್ಟೆ ಕೊಟ್ಟು
ನೊಂದು ನಲುಗದ ಜೀವ ಬಲ್ಲಿರ?
ಅಥವಾ, ಹತ್ತು ರೂಪಾಯಿ ತೆಗೆದೆಸೆದು
ತಲ್ಲಣಿಸಿದ ಜೀವ ಬಲ್ಲಿರ?

ದಯೆಗಾಣದ ಹಣದ ದರ್ಪದೆದುರಲ್ಲಿ,
ತತ್ತರಿಸುವ ನಾವು ನಿತ್ರಾಣರಯ್ಯ
ಪ್ರಾಣಭಯದಲ್ಲಿ ಮಿಲ ಮಿಲ ಹೊರಳಾಡುವ ನಾವು
ಹುಳದ ಸಮಾನರಯ್ಯ

ಹಣ ಕಂಡರಲ್ಲ ನನಗೆ ಹೆದರಿಕೆ
ಹಣದ ಹುಚ್ಚು ಕಂಡು.
ಹಣವಿದ್ದವರ ಒಕ್ಕೊರಳ ಪ್ರಶ್ನೆ :
ಏನವನ ಸ್ಥಿತಿಗತಿ? ನಿರ್ಗತಿಕನೇನು ?
ಮಣ್ಣು ಮುಕ್ಕಲಿ ಬಿಡು, ಯಾರಿಗೇನು?

ಹಣವಿರದ ನನ್ನ ಪ್ರಾಣ ಹೋಗದ ಹಾಗೆ
ಹೊಸ್ತಿಲ ಮೇಲೆ ಹೆಣ ಬೀಳದ ಹಾಗೆ
ಅನ್ನದಾತರ ಅನ್ನದಾನ –
ಅನ್ನಕ್ಕೆ ಬೆರೆತ ಹಿಡಿ ಮಣ್ಣು, ನಮಗೆ
ಮಣ್ಣೇಗತಿ.

ಹಣ ಕಂಡರಲ್ಲ ಹೆದರಿಕೆ,
ಹಣ ದೇವರಾದ ಜನದ ಹೆದರಿಕೆ.
ಅತಿಯಾಗಿ ಅದು ಎಂದೋ
ಮತಿ ವಿಭ್ರಮಕ್ಕೆ ಎಡೆ ಕೊಡುವ ಹೆದರಿಕೆ.


ಮಣ್ಣು ತಿನ್ನಲಾಗದ ಜನಕ್ಕೆ
ಅನ್ನಕ್ಕೆ ಹಣ ಬೇಕು.
ಆದರೂ, ಹಸಿದಾಗ ಕವಳ, ತಲೆಗೊಂದು ಸೂರು,
ಒಲೆಯೊಳಗೆ ಬೆಂಕಿ – ಇಷ್ಟಾದರೂ
ಅಷ್ಟರಿಗು ದಕ್ಕುವಂತಾಗಬೇಕು.

ಹಣದ ಬಗೆಗೆ ಜನಕ್ಕೆ ವಿವೇಕ
ಅಗತ್ಯ. ಇಲ್ಲವೋ ನರಹತ್ಯ ಖಾತರಿ
ಯಾವ ದಾರಿ ಹಿಡಿದು ಲೋಕ
ನಡೆಯುವುದೋ, ಕಾದು ನೋಡಬೇಕು.

**ಅನು:** ರಾಮಚಂದ್ರ ಶರ್ಮ

## ೩. ಸಗುವಾರ ಕಳ್ಳಿ

**– ಕೆ.ಪಿ. ಪೂರ್ಣಚಂದ್ರ ತೇಜಸ್ವಿ**



ಸರಿಯಾಗಿ ಬೆಳೆದ ಸಗುವಾರಾ ಕಳ್ಳಿ ಮರ ಕನಿಷ್ಠ ಎಪ್ಪತ್ತು ಅಡಿ ಎತ್ತರ ಮುಟ್ಟುತ್ತದೆ. ಬರಿಯ ನೀರು ತುಂಬಿದ ದುರ್ಬಲ ಸಸ್ಯದಂತೆ ಕಂಡರೂ ಇದು ಇನ್ನೂರೈವತ್ತು ವರ್ಷ ಬದುಕಬಲ್ಲುದು. ಈ ಮಹಾ ಕಳ್ಳಿಯ ತವರುಮನೆ ಉತ್ತರ ಮೆಕ್ಸಿಕೋದ ಮರಳುಗಾಡು ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನದ ಆರಿಜೋನಾ ಮರಳುಗಾಡು. ಹಕ್ಕಿಗಳಿಗೆ ಪೊಟ್ಟರೆಗಳನ್ನು ಕೊರೆದು ಗೂಡು ಮಾಡಲು ಈ ಮರ ಅನುಕೂಲ. ಮೇಲಿನಿಂದ ಕೆಳಗಿನವರೆಗೆ ಪೊಟ್ಟರೆ ಕೊರೆಯುವ ಹಕ್ಕಿಗಳಿಗೆ ಇದೊಂದು ಬಹು ಮಹಡಿಯ ಗಗನ ಚುಂಬ ಎಂದೇ ಹೇಳಬಹುದು.

ಇದರ ಬೇರುಗಳು ಐವತ್ತು ಅಡಿಗಳಷ್ಟು ದೂರದವರೆಗೂ ಪ್ರಸರಿಸಿ ಬಲೆಯಂತೆ ಹೆಣೆದು ಕೊಂಡು ನೆಲದ ಒಂದು ತೊಟ್ಟು ತೇವವೂ ವ್ಯರ್ಥವಾಗದಂತೆ ಹೀರುತ್ತವೆ. ಪ್ಲಾಸ್ಟಿಕ್‌ನಂತಿರುವ ತೆಳ್ಳನೆಯ ಚರ್ಮ ಇದರ ಕಾಂಡದ ಮೇಲೆ ಇರುವುದರಿಂದ ಈ ಸಸ್ಯ ಮರಳುಗಾಡಿನ ಹಲವಾರು ತಿಂಗಳುಗಳ ಭಯಂಕರ ಬಿಸಿಲಿನಲ್ಲೂ ಒಣಗದೆ ತನ್ನೊಳಗಿನ ತೇವವನ್ನು ಉಳಿಸಿ ಕೊಳ್ಳುತ್ತದೆ. ಮಳೆ ಬಂದ ಕೂಡಲೇ ಇದು ಬೇಗಬೇಗ ನೀರಿಲ್ಲದೆ ಖಾಲಿಯಾದ ತನ್ನ ಕೋಶಗಳನೆಲ್ಲಾ ಭರ್ತಿ ಮಾಡಿಕೊಳ್ಳುತ್ತದೆ.

ಸಗುವಾರಾ ಕಳ್ಳಿ ಬೆಳೆಯುವುದು ಬಹಳ ನಿಧಾನ. ಹತ್ತು ವರ್ಷದ ಗಿಡ ಕೇವಲ ಒಂದು ಇಂಚಿನಷ್ಟು ಎತ್ತರ ಇರುತ್ತದೆ. ಮೂವತ್ತು ವರ್ಷಕ್ಕೆ ಸಗುವಾರಾ ಕಳ್ಳಿ ಕೇವಲ ನಾಲ್ಕು ಅಡಿ ಎತ್ತರ ಬೆಳೆದಿರುತ್ತದೆ. ಇದು ಅರ್ಧ ಶತಮಾನ ಬೆಳೆದ ನಂತರವೇ ಇದರ ಕೆಳಭಾಗದಲ್ಲಿ ಬೂದಿ ಬಣ್ಣದ ತೊಗಟೆ ಮೂಡುವುದು. ಅಕ್ಕಪಕ್ಕ ಕೈಗಳಂಥ ಕೊಂಬೆಗಳು ಮೂಡಲು ಎಪ್ಪತ್ತರಿಂದ ನೂರು ವರ್ಷ ವಯಸ್ಸಾಗಬೇಕು.



ಕಳವಳದ ಸಂಗತಿಯೆಂದರೆ, ಇಂಥ ಮಹಾ ಕಳ್ಳಿಗಳು ಈಗ ಅಪೂರ್ವವಾಗುತ್ತಿವೆ. ಮರಳು ಗಾಡಿನ ಆಜುಬಾಜಿನಲ್ಲೂ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಇದರಿಂದುಂಟಾಗುವ ಮಾಲಿನ್ಯ ಒಂದು ಕಾರಣ ಎನ್ನಬಹುದು. ಆದೇ ರೀತಿ ಈ ಸಗುವಾರಾ ಕಳ್ಳಿ ಇನ್ನೂರು ವರ್ಷ ವಯಸ್ಸಾದನಂತರ ಅದರ ತುದಿಯಲ್ಲಿ ಕಾಂಡ ಹೂವಿನಂತೆ ರೂಪುಗೊಳ್ಳುತ್ತದೆ.

ಕಳ್ಳಿಯ ಬಗ್ಗೆ ಏನೂ ಗೊತ್ತಿಲ್ಲದ ಬೇಜವಾಬ್ದಾರಿ ದಾರಿಹೋಕರು, ಪುಂಡು ಪೋಕರಿಗಳು ವಿನಾಕಾರಣ ಚಾಕು ತೆಗೆದುಕೊಂಡು ಗೀರಿ ಘಾಸಿ ಮಾಡುವುದು, ಬಂದೂಕಿನ ಗುರಿ ನೋಡಲು ಗಿಡಕ್ಕೆ ಗುಂಡು ಹೊಡೆಯುವುದು ಮೊದಲಾದ ದುರಾಚಾರಕ್ಕೆ ಇಳಿಯುತ್ತಾರೆ. ಸತ್ತ ಒಂದು ದೊಡ್ಡ ಕಳ್ಳಿಯನ್ನು ಸಸ್ಯ ವಿಜ್ಞಾನಿಗಳು ಪರೀಕ್ಷಿಸಿದಾಗ ಅದರೊಳಗಿದ್ದ ಸೀಸದ ಬಂದೂಕಿನ ಗುಂಡುಗಳೇ ಒಂದು ಕೆಜಿ ತೂಗುವಷ್ಟಿತ್ತು. ಸೀಸದ ನಂಜಿನಿಂದ ಆ ಗಿಡ ಸತ್ತಿತ್ತು.

ಈ ಗಿಡದ ಅಮೂಲ್ಯತೆ ಗೊತ್ತಿಲ್ಲದವರು ಮಾಡುವ ಅನಾಹುತಗಳು ಈ ಬಗೆಯದಾದರೆ ಗೊತ್ತಿರುವವರು ಇನ್ನೊಂದು ರೀತಿಯಲ್ಲಿ ಕಂಟಕಪ್ರಾಯರಾಗಿದ್ದಾರೆ. ಸೌಂದರ್ಯಕ್ಕೆ ಹೆಸರುವಾಸಿಯಾಗಿರುವ ಈ ಕಳ್ಳಿಗೆ ಎರಡು ಸಾವಿರದಿಂದ ಮೂರು ಸಾವಿರ ಡಾಲರ್ ಬೆಲೆ ತೆತ್ತು ತಮ್ಮ ಉದ್ಯಾನದಲ್ಲಿ ನೆಟ್ಟುಕೊಳ್ಳಲು ಎಲ್ಲರೂ ಹಾತೊರೆಯುತ್ತಾರೆ. ಸಲಕರಣೆ ಮತ್ತು ವಾಹನದ ಸಮೇತ ಬಂದು ಗಿಡವನ್ನು ಯಂತ್ರದಿಂದ ಬೇರು ಸಮೇತ ಕಿತ್ತು ಒಯ್ಯುವ ಗಿಡಗಳ್ಳರು ರಾತ್ರೋ ರಾತ್ರಿ ಈ ಕಳ್ಳಿಗಳನ್ನು ಕದ್ದು ಸಾಗಿಸುತ್ತಾರೆ! ಆರಿಜೋನಾ ರಾಜ್ಯದ ದೊಡ್ಡ ದೊಡ್ಡ ಪಟ್ಟಣಗಳ ಸುತ್ತಮುತ್ತ ಅನೇಕ ಚದರ ಮೈಲಿವರೆಗೆ ಚೆನ್ನಾಗಿ ಬೆಳೆದ ಒಂದೇ ಒಂದು ಸಗುವಾರಾ ಕಳ್ಳಿಯೂ ಕಾಣುವುದಿಲ್ಲ. ಸಗುವಾರ ಕಳ್ಳಿಗಳನ್ನು ರಕ್ಷಿಸಲೆಂದೇ ಸರ್ಕಾರ 'ಸಗುವಾರಾ ರಾಷ್ಟ್ರೀಯ ಉದ್ಯಾನ'ವೆಂದು ಆರಿಜೋನಾ ಮರಳುಗಾಡಿನ ಬಹುಭಾಗವನ್ನು ಕಾದಿರಿಸಿದೆ. ಇಷ್ಟಾದರೂ ಕಳ್ಳತನ ಮುಂದುವರಿದು ವಯಸ್ಕ ಮರಗಳ ಸಂಖ್ಯೆ ಕೇವಲ ಇನ್ನೂರಕ್ಕೆ ಇಳಿದಿದ್ದರಿಂದ ಅಮೆರಿಕಾ ಸರ್ಕಾರ ಉಗ್ರ ಕ್ರಮ ಕೈಗೊಳ್ಳಲು ನಿರ್ಧರಿಸಿತು. ೧೯೯೦ರಲ್ಲಿ ನೂರ ತೊಂಬತ್ತು ಮರಗಳ್ಳರನ್ನು ಹಿಡಿದು ಹನ್ನೆರಡು ವರ್ಷ ಜೈಲುಶಿಕ್ಷೆ ವಿಧಿಸಿತು. ಮರ ಕದ್ದಿದ್ದಕ್ಕೆ ಇಷ್ಟು ಕಠಿಣ ಕ್ರಮ ಅಮೆರಿಕಾದ ಇತಿಹಾಸದಲ್ಲಿ ಯಾವತ್ತೂ ಕೈಗೊಂಡಿರಲಿಲ್ಲ.

## ಓದುಪಠ್ಯ

### ೪. ಬಾಲ್ಯ–ಬಾಲನಟ

**(ಕಲೆಯೇ ಕಾಯಕ – ಗುಬ್ಬಿ ವೀರಣ್ಣನವರ ಆತ್ಮಚರಿತ್ರೆಯ ಆಯ್ದಭಾಗ)**

**– ಗುಬ್ಬಿ ವೀರಣ್ಣ**

ತುಮಕೂರು ಡಿಸ್ಟ್ರಿಕ್ಟಿನ ಗುಬ್ಬಿ ತಾಲ್ಲೂಕಿನಲ್ಲಿ ನನ್ನ ತಂದೆಯವರಾದ ಹಂಪಣ್ಣನವರು ಚಿಲ್ಲರೆ ಅಂಗಡಿ ಅಂದರೆ ದಿನಸಿ, ಕಬ್ಬಿಣದ ಸಾಮಾನುಗಳ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಅಲ್ಲದೆ ಅವರೇ ಸ್ವತಃ ಬೀಗಗಳನ್ನು ತಯಾರು ಮಾಡುತ್ತಿದ್ದರು. ಅವು ಗುಬ್ಬಿ ಬೀಗಗಳೆಂದೇ ಹೆಸರಾಗಿದ್ದವು.

ನನ್ನ ಮಾತೋಶ್ರೀಯವರಾದ ರುದ್ರಾಂಬೆಯವರೊಂದಿಗೆ ಗುಬ್ಬಿಯ ಆನೆ ಪೇಟೆಯಲ್ಲಿರುವ ಸ್ವಂತ ಮನೆಯಲ್ಲಿ ಅವರು ವಾಸಮಾಡುತ್ತಿದ್ದಾಗ ನಾನು ಹುಟ್ಟಿದುದಾಗಿ ತಿಳಿಯಿತು. ನಾನು ಹುಟ್ಟಿದ ನಂತರ ನನ್ನ ಮಾತೋಶ್ರೀಯವರು ಅನಾರೋಗ್ಯ ಹೊಂದಿದುದರಿಂದ ನನ್ನ ತೀರ್ಥರೂಪುರವರು ಎರಡನೇ ಲಗ್ನವಾದರು. ಅವರು ಎರಡನೇ ಲಗ್ನವಾದಾಗ ಅವರಿಗೆ ನನ್ನ ಇಬ್ಬರು ಅಕ್ಕಂದಿರು ಮತ್ತು ನಾನು ಒಟ್ಟು ಮೂರು ಜನ ಮಕ್ಕಳಿದ್ದೆವು. ಎರಡನೇ ಲಗ್ನವಾದ ನಂತರ ತೀರ್ಥರೂಪುರವರು ನನ್ನ ತಾಯಿಯವರ ಆರೋಗ್ಯ ಸರಿಹೋಗದಿದ್ದುದರಿಂದಲೂ ತಮ್ಮ ಎರಡನೇ ಕುಟುಂಬದ ಪ್ರೇಮಪಾಶಕ್ಕೆ ಸಿಕ್ಕಿದ್ದರಿಂದಲೂ ನನ್ನ ಮಾತೋಶ್ರೀಯವರ ಮತ್ತು ನಮ್ಮಗಳ ಪೋಷಣೆಯನ್ನು ಸರಿಯಾಗಿ ಮಾಡದೆ ಕೈಬಿಟ್ಟರು.

ನನ್ನ ಮಾತೋಶ್ರೀಯವರು ನಮ್ಮಗಳನ್ನು ಸಾಕಿ ಸಲಹಲು ಬಂಧು ಬಳಗದವರಲ್ಲಿ ಬೇಡಿ, ಕೂಲಿ ಕಂಬಳಿ ಮಾಡಿ ಜೀವಿಸಬೇಕಾಗಿ ಬಂದಿತು. ಹೀಗೆ ಮೂರು ನಾಲ್ಕು ವರ್ಷಗಳವರೆಗೆ ಸಾಗಿತು. ನಾನು ಕೂಲಿಮಠಕ್ಕೆ ಸೇರಬೇಕಾಗಿ ಬಂದಿತು. ಬೆಳಿಗ್ಗೆ ಕೂಲಿಮಠಕ್ಕೆ ಹೋಗಬೇಕಾದರೆ ರಾಗಿಮುದ್ದೆ ಮಾಡಿದ ಪಾತ್ರೆಯಲ್ಲಿ ತಳದಲ್ಲಿದ್ದ ಸೀಕುಬಾಕನ್ನು ನನ್ನ ಜೇಬಿಗೆ ತುಂಬಿ ಕಳುಹಿಸುತ್ತಿದ್ದರು.

ಆ ವೇಳೆಗಾಗಲೇ 'ಗುಬ್ಬಿ ಶ್ರೀ ಚೆನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಸಭಾ' ಎಂಬ ಹೆಸರಿನಲ್ಲಿ ೧೮೮೪ನೇ ಇಸವಿಯಲ್ಲಿ ಪ್ರಾರಂಭವಾಗಿದ್ದ ನಾಟಕ ಸಂಸ್ಥೆಯು ಗುಬ್ಬಿಯ ಹತ್ತಿರ ಹತ್ತಿರವೇ ಪರಸ್ಥಳದಲ್ಲಿ ನಾಟಕವಾಡಿಕೊಂಡು ಮಳೆಗಾಲ ಬಂದರೆ ನಾಲ್ಕು ತಿಂಗಳು ಸಂಸ್ಥೆ ನಿಲ್ಲಿಸಿ, ಬೇಸಿಗೆ ಕಾಲದಲ್ಲಿ ಪುನಃ ಆರಂಭ ಮಾಡಿ ಪರಸ್ಥಳಕ್ಕೆ ಹೋಗುತ್ತಿತ್ತು. ಆ ಸಂಸ್ಥೆಯನ್ನು ಗುಬ್ಬಿಯ ಕೆಲವು ವರ್ತಕರು ಚಂದಾ ವಸೂಲು ಮಾಡಿ, ಐನೂರು ರೂಪಾಯಿಗಳನ್ನು ಸಂಗ್ರಹಿಸಿ, ಶ್ರೀ ವೀರಪ್ಪಶಾಸ್ತ್ರಿಗಳೆಂಬ ಕವಿಗಳ ಸಹಾಯದಿಂದ ಪ್ರಾರಂಭಿಸಿದರು. ಸಂಸ್ಥೆ ಪ್ರಾರಂಭವಾದ ಮುಹೂರ್ತ ಶುಭ ಮುಹೂರ್ತವಾದುದರಿಂದಲೂ ಬೇರೆ ಯಾವ ಕನ್ನಡ ನಾಟಕ ಸಂಘಗಳು ಇಲ್ಲದುದರಿಂದಲೂ, ತುಮಕೂರು ಜಿಲ್ಲೆಯಲ್ಲಿಯೇ ಸಂಚಾರ ಮಾಡುತ್ತಾ ಪ್ರಸಿದ್ಧಿಗೆ ಬರಲು ಅವಕಾಶವಾಯಿತು. ಅದೇ

ಸಂಸ್ಥೆಯಲ್ಲಿ ನನ್ನ ಚಿಕ್ಕಪ್ಪನವರಾದ ಶ್ರೀ ವೀರಣ್ಣನೆಂಬುವರು ವ್ಯವಸ್ಥಾಪಕರಾಗಿ ನೌಕರಿಗೆ ಸೇರಿಕೊಂಡಿದ್ದರು. ಆ ಸಂಘದಲ್ಲಿ ಆಗ ನಟರು, ವಾದ್ಯಗಾರರು, ವ್ಯವಸ್ಥಾಪಕರು, ಕೆಲಸಗಾರರು, ಅಡಿಗೆ ಭಟ್ಟರು, ಸಂಘದ ಯಜಮಾನರೂ ಸೇರಿ ಇಪ್ಪತ್ತೈದು ಜನಕ್ಕೆ ಮೀರಿರಲಿಲ್ಲ.

ಆಗ ಗುಬ್ಬಿಯಲ್ಲಿ ಮುನಿಸಿಪಾಲಿಟಿ ಲಾಂಧ್ರಗಳಿಗೆ ಎಣ್ಣೆ ಹಾಕಿ ದೀಪಗಳನ್ನು ಹಚ್ಚಲು ತಿಂಗಳಿಗೆ ಹದಿನೈದು ರೂಪಾಯಿಗಳಿಗೆ ಒಪ್ಪಿಕೊಂಡು, ಹೆಗಲ ಮೇಲೆ ಏಣಿ ಕೈಯಲ್ಲಿ ಸೀಮೆಯೆಣ್ಣೆ ಡಬ್ಬ ಹಿಡಿದುಕೊಂಡು ಮೇಲ್ಕಂಡ ಕಂಟ್ರಾಕ್ಟ್ ಕೆಲಸವನ್ನು ಮಾಡುತ್ತಿದ್ದ ಚಂದಣ್ಣ ಎಂಬುವರು ಕಂಪೆನಿಯನ್ನು ಸೇರಿದರು. ಅವರು ಅವಿದ್ಯಾವಂತರಾದರೂ, ತುಂಬಾ ಧೈರ್ಯಶಾಲಿಗಳು, ಸಾಹಸವಂತರು; ಯಾವ ಗಲಾಟೆಗಳಿಗೂ ಹೆದರುವವರಲ್ಲ. ಇದನ್ನು ಕಂಡು ಕಂಪೆನಿಯ ಜವಾಬ್ದಾರಿಯನ್ನು ಗುಬ್ಬಿಯ ವರ್ತಕರು ಚಂದಣ್ಣನವರಿಗೇ ವಹಿಸಿಕೊಟ್ಟರು. ತುಮಕೂರು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲೂ ಹೋಬಳಿಗಳಲ್ಲೂ ಸಂಚಾರ ಮಾಡಿಕೊಂಡು ಗುಬ್ಬಿ ನಾಟಕವೆಂದು ಪ್ರಚಾರಕ್ಕೆ ತಂದು ಚಂದಣ್ಣನವರು ಐದಾರು ವರುಷ ನಡೆಸಿಕೊಂಡು ಬಂದರು. ಸಂಸ್ಥೆಯು ಸಂಚಾರ ಮಾಡುತ್ತ ಅದರ ಕಷ್ಟ ಸುಖಗಳ ಅನುಭವವಾಗುತ್ತ ಆಗುತ್ತ ವ್ಯವಸ್ಥಾಪಕರಾಗಿದ್ದ ಚಂದಣ್ಣನವರೇ ಕ್ರಮೇಣ ಮಾಲೀಕರಾದರು.

ಅದೇ ಸಮಯದಲ್ಲಿ ನನ್ನ ಚಿಕ್ಕಪ್ಪನವರು, ನನ್ನ ತಾಯಿಯವರು ನಮ್ಮನ್ನು ಸಾಕಲು ನೆರೆಹೊರೆಯವರ ಮನೆಗಳಲ್ಲಿ ಕೂಲಿಕೆಲಸಗಳನ್ನು ಮಾಡುತ್ತಿರುವ ದುಸ್ಥಿತಿಯನ್ನು ನೋಡಲಾರದೆ ನನ್ನನ್ನು ಶ್ರೀ ಚೆನ್ನಬಸವೇಶ್ವರಸ್ವಾಮಿ ನಾಟಕ ಸಂಸ್ಥೆಗೆ ಸೇರಿಸಿದರು. ಆಗ್ಗೆ ನನಗೆ ಸುಮಾರು ೫–೬ ವರುಷ ವಯಸ್ಸಾಗಿತ್ತು. ಸಂಘದಲ್ಲಿ ನನಗೆ ಅಕ್ಷರಾಭ್ಯಾಸ ಮಾಡಿಸಲು ಪ್ರಾರಂಭಿಸಿ ಕೆಲವು ತಿಂಗಳು ಕಳೆದ ನಂತರ ನನಗೆ ರಂಗಭೂಮಿಗೆ ಪ್ರವೇಶಿಸಲು ಅಭ್ಯಾಸ ಮಾಡಿಸಿ, ಲಂಗೋಟಿ ಹಾಕಿ ರಂಗಭೂಮಿಗೆ ಕಳುಹಿಸುತ್ತಿದ್ದರು. ಅಲ್ಲದೆ ಪುಟ್ಟ ಪುಟ್ಟ ಮಕ್ಕಳ ಪಾತ್ರ ಕೊಡುತ್ತ ಬಂದರು, ಆಗ ಸಂಘದಲ್ಲಿ 'ಚಿತ್ರಶೇಖರ–ಸೋಮಶೇಖರ "ಸಿರಿಯಾಳ ಚರಿತ್ರೆ', 'ಸತ್ಯರಥನ ಚರಿತ್ರೆ', 'ಜಗಮೋಹನ ಚರಿತ್ರೆ (ಕರಿಭಂಟನ ಕತೆ)' 'ಹರಿಶ್ಚಂದ್ರ' ನಾಟಕಗಳನ್ನು ಆಡುತ್ತಿದ್ದರು. ಮೇಲ್ಕಂಡ ನಾಟಕಗಳನ್ನೆಲ್ಲಾ ಕವಿಗಳಾದ ಶ್ರೀ ವೀರಪ್ಪ ಶಾಸ್ತ್ರಿಗಳೇ ಬರೆದು ಕೊಟ್ಟು ಅಭ್ಯಾಸ ಮಾಡಿಸುತ್ತಿದ್ದರು. ಈ ನಾಟಕಗಳಲ್ಲಿ 'ಚಿತ್ರಶೇಖರ – ಸೋಮಶೇಖರ' ನಾಟಕದಲ್ಲಿ ಹೆಚ್ಚು ಹಾಸ್ಯಕ್ಕೆ ಅವಕಾಶವಿದ್ದುದರಿಂದ ಜನರ ಮೆಚ್ಚುಗೆ ಪಡೆದು ಪ್ರಾಶಸ್ತ್ಯಕ್ಕೆ ಬಂದ ಬಹುಮುಖ್ಯ ನಾಟಕವಾಗಿತ್ತು. ಅದರಲ್ಲಿ ನಾನು ಅಗಸನ ಮಗ 'ಡೋಲ' ಎಂಬ ಹುಡುಗನ ಪಾತ್ರವನ್ನಲ್ಲದೆ, ಬಾಲ ಚಿತ್ರಶೇಖರ, ಬಾಲ ಚಿಲ್ಲಾಳ, ಸತ್ಯರಥ, ಲೋಹಿತಾಶ್ವ, ಬ್ರಾಹ್ಮಣ ಹುಡುಗನ ಪಾತ್ರಗಳನ್ನು ಕ್ರಮೇಣ ಅಭಿನಯಿಸಲು ಪ್ರಾರಂಭಿಸಿದೆ. ನಾನು ಚಿಕ್ಕ ಮಗುವಾದುದರಿಂದಲೂ, ಚಟುವಟಿಕೆಯಿಂದ ಇದ್ದುದರಿಂದಲೂ ಜನಗಳು ನನ್ನ ಪಾತ್ರಗಳನ್ನು ಬಹುವಾಗಿ ಮೆಚ್ಚುತ್ತಿದ್ದರು.

ಎರಡು ಮೂರು ವರ್ಷಗಳನಂತರ ಮೋಟಗಾನ ಹಳ್ಳಿಯ ವಿದ್ವಾನ್ ಶಂಕರಶಾಸ್ತ್ರಿಗಳಿಂದ ವಿರಚಿತವಾದ ಮಹಾಭಾರತದ ಭಾಗವಾದ 'ಪಾಂಡವ ವಿಜಯ'ವೆಂಬ ನಾಟಕವನ್ನು ಅಭ್ಯಾಸ ಮಾಡಿ ಪ್ರದರ್ಶಿಸಲು ಪ್ರಾರಂಭಿಸಿದರು. ಈ ನಾಟಕದಲ್ಲಿ ಮೇಲೆ ನನಗೆ ಸೂರ್ಯನ ಪಾತ್ರವನ್ನು ಕೊಟ್ಟಿದ್ದರು. ಸೂರ್ಯನ ಪಾತ್ರವನ್ನು ನೆಲದ ಮೇಲೆ ನಿಂತು ಮಾತನಾಡುವಂತಿರದೆ ಅಂತರಿಕ್ಷದಲ್ಲಿಯೇ ಮಾತು,

ಹಾಡುಗಳನ್ನು ಹಾಡಿ ಹಾಗೆಯೇ ರಂಗದ ಮೇಲುಗಡೆಗೆ ನಿಷ್ಕ್ರಮಿಸಬೇಕಾಗಿತ್ತು. ಅದಕ್ಕಾಗಿ ಕ್ರಾಸ್ ಕಪಿಯೊಂದನ್ನು ಕಟ್ಟಿ ಅದರ ಮೇಲೆ ನನ್ನನ್ನು ಕೂರಿಸಿ ಮೇಲಕ್ಕೆಳೆದು ಪಾತ್ರದ ಸಂದರ್ಭ ಬಂದಾಗ ಅರ್ಧಕ್ಕೆ ಇಳಿಸಿ ನನ್ನ ಪಾತ್ರ ಮುಗಿದನಂತರ ಪುನಃ ನನ್ನನ್ನು ಮೇಲಕ್ಕೆಳೆದು, ದೃಶ್ಯ ಮುಗಿದು ಮುಂದಿನ ಪರದೆ ಬಿದ್ದಾಗ ನನ್ನನ್ನು ಕೆಳಕ್ಕಿಳಿಸುತ್ತಿದ್ದರು. ಮೊದಲನೇ ದಿನ ನನ್ನನ್ನು ಮೇಲಕ್ಕೆಳೆದಾಗ ಭಯದಿಂದ ಕೂಗಿಕೊಳ್ಳಲೂ ಆಗದೆ ನನಗೆ ಅಲ್ಲಿಯೇ ಆಗದೆ ಇದ್ದುದೆಲ್ಲವೂ ಆಗಿತ್ತು. ಅದೇನೆಂದು ನೀವೇ ಊಹಿಸಿಕೊಳ್ಳಬಹುದು.

ಪಾಂಡವವಿಜಯ ನಾಟಕದ ಆರಂಭದಲ್ಲಿ ಕೆಲವು ದಿನಗಳು ಸಂಘದ ನಟರುಗಳಲ್ಲಿ ದ್ವೇಷ ಹುಟ್ಟಿತ್ತು. ನಟರುಗಳೆಲ್ಲರೂ ಅವಿದ್ಯಾವಂತರಾಗಿದ್ದುದರಿಂದ ಆ ನಾಟಕದಲ್ಲಿ ಪಾಂಡವರ ಗುಂಪಿನ ಪಾತ್ರಧಾರಿಗಳಿಗೂ, ಕೌರವರ ಗುಂಪಿನ ಪಾತ್ರಧಾರಿಗಳಿಗೂ ಸಹಜವಾಗಿ ದ್ವೇಷವೇ ಬೆಳೆದು ಬಂದಿತ್ತು. ಒಂದು ದಿನ ಅದೇ ನಾಟಕದಲ್ಲಿ ದ್ರೌಪದಿಯ ಸೀರೆಯನ್ನು ದುಶ್ಯಾಸನನು ಸೆಳೆಯುವ ಕಾಲದಲ್ಲಿ ಭೀಮನು ಕುಪಿತನಾಗಿ ತಾವುಗಳು ಕುಳಿತಿದ್ದ ಬೆಂಚನ್ನೆತ್ತಿ ಹೊಡೆದ ದೃಶ್ಯವಂತೂ ಬಹಳ ವಿನೋದವಾಗಿತ್ತು. ಕ್ರಮೇಣ ನಟರುಗಳು ವಿವೇಕ ತಿಳಿದುಕೊಂಡು ಸರಿಪಡಿಸಿಕೊಂಡರು. ಪಾಂಡವ ವಿಜಯ ನಾಟಕವು ಬಹುಕಾಲ ನಡೆದು ಒಳ್ಳೇ ಕೀರ್ತಿಯನ್ನು ಪಡೆದುದೂ ಅಲ್ಲದೆ ಸಂಘವು ತುಂಬಾ ಪ್ರಸಿದ್ಧಿಗೆ ಬರಲು ಅವಕಾಶವಾಯಿತು. ನಂತರ ಬೇರೆ ಬೇರೆ ಜಿಲ್ಲೆಗಳ ತಾಲ್ಲೂಕುಗಳು, ಅಂದರೆ ನೆಲಮಂಗಲ, ದೊಡ್ಡಬಳ್ಳಾಪುರ, ಬೆಳವಂಗಲ, ಕಾಡನೂರು, ಕರೆಕಲ್ ತುಮಕೂರು, ಕಾನಕಾನಹಳ್ಳಿ (ಕನಕಪುರ), ಕ್ಲೋಸ್‌ಪೇಟೆ (ರಾಮನಗರ), ಹಾರುವಹಳ್ಳಿ, ಆನೇಕಲ್, ಥಳಿ ವಗೈರೆ ಗ್ರಾಮಗಳಲ್ಲಿ ಸಂಚರಿಸಲು ಸಂಘವು ಪ್ರಾರಂಭ ಮಾಡಿತು. ಸಾಮಾನ್ಯವಾಗಿ ಶ್ರಾವಣ ಮಾಸದ ಕೊನೆಗೆ ಮಳೆಗಾಲದ ಪ್ರಯುಕ್ತ ಸಂಘವನ್ನು ನಿಲ್ಲಿಸಿ ಮಾರ್ಗಶಿರ ಮಾಸದ ಕೊನೆಯಲ್ಲಿ ಪುನಃ ಪ್ರಾರಂಭ ಮಾಡುತ್ತಿದ್ದರು. ಸಂಘವನ್ನು ನಿಲ್ಲಿಸಿದಾಗ ಹೊಸ ಹೊಸ ನಾಟಕಗಳನ್ನು ಅಭ್ಯಾಸ ಮಾಡುತ್ತಿದ್ದರು. ಪಾಂಡವ ವಿಜಯ ನಾಟಕ ನಂತರ ಗುಲೇಬ ಕಾವಲಿ, ಇಂದ್ರಸಭಾ, ಪ್ರಭಾವತಿ ದರ್ಬಾರ್ ನಾಟಕಗಳನ್ನು ಅಭ್ಯಾಸ ಮಾಡಿದೆವು.

ಆಗಿನ ಕಾಲದಲ್ಲಿ ಪ್ರತಿನಿತ್ಯವೂ ನಾಟಕವಿರುತ್ತಿರಲಿಲ್ಲ. ವಾರಕ್ಕೆ ಮೂರು, ಸಂತೆಯ ದಿನ ಒಂದು ಒಟ್ಟು ವಾರಕ್ಕೆ ನಾಲ್ಕು ದಿನ ಮಾತ್ರ ನಾಟಕವಿರುತ್ತಿತ್ತು.

ಸಂಘದಲ್ಲಿ ವೀರಪ್ಪ ಶಾಸ್ತ್ರಿಗಳು, ರಾಜಾಪಾರ್ಟು ಹನುಮಂತರಾವ್, ಗುಬ್ಬಿ ಸಂಜೀವಯ್ಯನವರು, ಗುಬ್ಬಿ ಸುಬ್ಬಯ್ಯ, ರೇವಣ್ಣನವರು, ಕೊಳಾಲದಪ್ಪ, ದೊಡ್ಡಕಣ್ಣಯ್ಯ, ಚನ್ನಬಸವಯ್ಯ, ಹಾಸ್ಯಗಾರ ದೊಡ್ಡನಂಜಪ್ಪ, ದೊಡ್ಡಯ್ಯನವರು, ರಾಮಚಂದ್ರರಾವ್, ರಾಣೀಪಾರ್ಟು ಶಂಕರಪ್ಪ, ಕೋರದ ಮಲ್ಲಪ್ಪ, ಕೋರದ ಗುರುಸಿದ್ದಯ್ಯ, ರುದ್ರಯ್ಯ, ಯಜಮಾನ್ ಅಣ್ಣಯ್ಯಪ್ಪ, ಓಲೇಶ್ವರಸ್ವಾಮಿ, ಅರ್ಚಕ ಚನ್ನಬಸವಣ್ಣ, ಮುರಿಗೆಪ್ಪ, ಚೇಳೂರು ನಾಗರಾಜು ಭಜಂತ್ರಿ, ಗುಬ್ಬಿ ಪಿಟೀಲು ಕಿಟ್ಟಪ್ಪ, ತಬಲಕ್ಕೆ ಗುಬ್ಬಿ ಹುಚ್ಚವೀರಪ್ಪ, ಪರದೆ ಎಳೆಯಲು ಗುಬ್ಬಿ ಚನ್ನಮಲ್ಲಯ್ಯ, ಹುಚ್ಚಪ್ಪ ಮತ್ತು ಇತರರೆ ಅಡಿಗೆಯವರು, ಟಿಕೆಟ್ಟು ಮಾರುವವನೊಬ್ಬ, ಗೇಟು ಕೆಲಸಕ್ಕೆ ಮೂರು ಜನ–ಒಟ್ಟಿನಲ್ಲಿ ಮೂವತ್ತು ಜನ ಮೀರಿರಲಿಲ್ಲ.

ರಾಜ, ರಾಣಿ ಮತ್ತು ನಕಲಿ ಪಾತ್ರಧಾರಿಗಳಿಗೆ ಹದಿನೈದು–ಇಪ್ಪತ್ತು ರೂ. ಸಂಬಳ ವಾದ್ಯದವರಿಗೆ ಹದಿನೈದರಿಂದ ಇಪ್ಪತ್ತು ರೂಪಾಯಿ, ಇತರೆಯವರಿಗೆ ಹತ್ತರಿಂದ ಹನ್ನೆರಡು ರೂಪಾಯಿ, ಸ್ಟೇಜು, ಗೇಟಿನವರಿಗೆ ಎಂಟರಿಂದ ಹತ್ತು ರೂ. ಗಳವರೆಗೆ ಸಂಬಳಗಳನ್ನು ಕೊಡುತ್ತಿದ್ದರು. ಆಗ ನನಗೆ ಐದು ರೂ. ಸಂಬಳ ಗೊತ್ತು ಮಾಡಿದ್ದರು. ಹೊಸದಾಗಿ ಬರುವ ಕೆಲವರಿಗೆ ಸಂಬಳವಿಲ್ಲ – ಬರೀ ಉಂಬಳ, ಕಾಲ ಕ್ರಮೇಣ ಅವರಿಗೆ ಯೋಗ್ಯತಾನುಸಾರ ಸಂಬಳ ಗೊತ್ತು ಮಾಡುತ್ತಿದ್ದರು.

ಸಂಘವನ್ನು ಬೇಸಿಗೆ ಕಾಲದಲ್ಲಿ ನಡೆಯಿಸಿ ಮಳೆಗಾಲದಲ್ಲಿ ನಿಲ್ಲಿಸಿ ಪುನಃ ಪ್ರಾರಂಭಿಸುತ್ತಿದ್ದರು. ನಾನು ನಾಟಕ ಸಂಘದ ಜೊತೆಯಲ್ಲಿಯೇ ಇದ್ದು ಕನ್ನಡ ಅಕ್ಷರಗಳನ್ನು ಕಲಿತು, ಮಳೆಗಾಲದಲ್ಲಿ ಸಂಘವನ್ನು ನಿಲ್ಲಿಸಿದಾಗ ಪಾಠಶಾಲೆಯ ಉಪಾಧ್ಯಾಯರಿಗೆ ಹೇಳಿಕೊಂಡು ಓದಲು ನಾಲ್ಕು ತಿಂಗಳು ಮಾತ್ರ ಹೋಗಿ ಹುಡುಗರ ಜೊತೆಯಲ್ಲಿಯೇ ಸೇರುತ್ತಿದ್ದೆ. ವಿದ್ಯೆಯ ಮೇಲೆ ಹೆಚ್ಚು ಆಸಕ್ತಿಯಿರುತ್ತಿರಲಿಲ್ಲ. ಜೊತೆಗಾರರೊಡನೆ ಹೊಂಗೆ ಮರದಲ್ಲಿ ಮರಕೋತಿ ಆಡಲು ಹೋಗುತ್ತಿದ್ದೆ. ಆ ಮರವು ಈಗಲೂ ಇದೆ. ಅಲ್ಲದೆ ಶಾಲೆಯಲ್ಲಿ ಉಪಾಧ್ಯಾಯರೂ, ಇತರ ಹುಡುಗರೂ ಸಹ ನನ್ನಿಂದ ಹಾಡುಗಳನ್ನು ಹೇಳಿಸುವುದರಲ್ಲೇ ಕಾಲಕಳೆಯುತ್ತಿದ್ದರು. ಮಳೆಗಾಲದ ನಂತರ ಪುನಃ ನಾಟಕ ಸಂಸ್ಥೆಯ ಜೊತೆಯಲ್ಲಿ ಹೋಗುತ್ತಿದ್ದೆ. ಹೀಗಾಗಿ ನನಗೆ ವಿದ್ಯಾಭ್ಯಾಸಕ್ಕೆ ಅವಕಾಶವೇ ಇಲ್ಲವಾಯಿತು.

ಆಗ ಶ್ರೀ ಚಂದಣ್ಣನವರು ನನಗೆ ಕೆಲವು ದಿನಗಳು ಅಕ್ಷರಾಭ್ಯಾಸ ಮಾಡಿಸಿದರು. ಆಗ ಗುಬ್ಬಿಯಲ್ಲಿ ಪ್ರೈಮರಿ ಮಿಡಲ್ ಸ್ಕೂಲುಗಳಿರಲಿಲ್ಲ. ಕೂಲಿ ಮಠವೊಂದಿತ್ತು. ಅದರಲ್ಲಿ ಅವರು ಎರಡನೇ ತರಗತಿಯವರೆಗೂ ಓದಿದ್ದರೋ ಏನೋ–ಅಕ್ಷರಗಳನ್ನು ಸ್ಲೇಟಿನ ಮೇಲೆ, ಮೇಲ್ಪಂಗ್ತಿಯನ್ನು ಹಾಕಿ ನನ್ನಿಂದ ತಿದ್ದಿಸುತ್ತಿದ್ದರು. ಒಂದು ನೂರರವರೆಗೂ ತಿದ್ದಿಸುತ್ತಿದ್ದರು. ನನ್ನನ್ನು ಅವರ ಸ್ವಂತ ಮಗನಂತೆ ನೋಡುತ್ತಿದ್ದರು. ಅವರು ಜೈನಮತದವರಾದರೂ ಮೊಹರಂ ಹಬ್ಬದಲ್ಲಿ ಹುಲಿವೇಷ ಹಾಕಿಕೊಂಡು ಊರಿನಲ್ಲಿ ದೊಡ್ಡ ದೊಡ್ಡ ಮನುಷ್ಯರ ಮುಂದೆ ಹೋಗಿ ಕುಣಿಯುತ್ತಿದ್ದರು. ಅವರ ಜೊತೆ ನನಗೂ ಹುಲಿವೇಷ ಹಾಕಿಸಿ ಅವರಿಗೆ ಆಯಾಸವಾದಾಗ ನನ್ನನ್ನು ಕುಣಿಸುತ್ತಿದ್ದರು. ನಾನೂ ಉತ್ಸಾಹದಿಂದ ಸಂತೋಷದಿಂದ ಚೆನ್ನಾಗಿ ಕುಣಿಯುತ್ತಿದ್ದೆ. ಹೀಗೆ ಅವರು ತಮ್ಮ ಐವತ್ತನೆಯ ವಯಸ್ಸಿನವರೆಗೂ ಹುಲಿವೇಷ ಹಾಕಿ ಆಡುತ್ತಿದ್ದರು.

## ಆ ಕಾಲದ ನಾಟಕ ಕಂಪನಿಗಳು

ಕೆಲವು ವರ್ಷಗಳು ಕಳೆದು ನನಗೆ ಸುಮಾರು ಹದಿನಾಲ್ಕು ಅಥವಾ ಹದಿನೈದು ವರುಷ ವಯಸ್ಸಾದಾಗ ಅದಕ್ಕೆ ಅನುಗುಣವಾಗಿ ಶಾರೀರ ಒಡೆದು ದಪ್ಪನಾಗಿ ಪುತ್ರನ ಪಾತ್ರಕ್ಕೆ ಸರಿಹೋಗದೆ ಸಖಿಪಾತ್ರ, ಚಿಲ್ಲರೆ ಪಾತ್ರಗಳನ್ನು ಮಾಡಲು ನಿಯಮಿಸಲ್ಪಟ್ಟೆನು. ಇದೇ ಸಂಸ್ಥೆಯಲ್ಲಿ ಪಿಟೀಲು ವಾದನಕಾರರಾದ ವಿ॥ ದಾನಪ್ಪಯ್ಯ ಎಂಬುವರು ನನಗೆ ಗುರುಗಳಾಗಿ ಸಂಸ್ಥೆಯಲ್ಲಿ ವಿದ್ಯೆ ಹೇಳುತ್ತಿದ್ದು, ಪಾತ್ರಗಳನ್ನು ಹೇಳಿಕೊಟ್ಟು ಪಾತ್ರಮಾಡಲು ಅರ್ಹನನ್ನಾಗಿ ಮಾಡಿದರು. ಇಂದಿಗೂ ನಾನು ಸದಾ ಅವರನ್ನು ಸ್ಮರಿಸಿಕೊಳ್ಳಬೇಕಾದ್ದು ನನ್ನ ಕರ್ತವ್ಯ. ದಾನಪ್ಪಯ್ಯನವರೆಂದರೆ ಬೆಂಗಳೂರಿನ ಸಂಗೀತ ವಿದ್ವಾನ್ ಶ್ರೀ ಡಿ. ಸುಬ್ಬರಾಮಯ್ಯನವರ ತಂದೆಯವರು. ಅವರೇ ನನ್ನ ವಿದ್ಯಾಗುರುಗಳು. ಇವರೂ,

ಇವರ ತಮ್ಮಂದಿರಾದ ಶ್ರೀ ಪುಟ್ಟಣ್ಣಯ್ಯನವರೂ ನಾಟಕದಲ್ಲಿ ಕೇವಲ ಪಿಟೀಲು ಬಾರಿಸುವುದು ಮಾತ್ರವಲ್ಲದೆ ಸಂಸ್ಥೆಯ ಲೆಕ್ಕಪತ್ರಗಳನ್ನು ಬರೆಯುವುದು, ಲೈರ್ಸೆಸ್ ತರುವುದು ಮೊದಲಾದ ಜವಾಬ್ದಾರಿ ಕೆಲಸಗಳನ್ನು ಮಾಡುತ್ತಿದ್ದರು. ನಾನು ಶ್ರೀ ಪುಟ್ಟಣ್ಣಯ್ಯನವರಲ್ಲಿ ಸಂಗೀತ ಪಾಠವನ್ನು ಅಭ್ಯಾಸ ಮಾಡಿದೆ. ದೊಡ್ಡ ನಂಜುಂಡಪ್ಪ, ಚಿಕ್ಕ ನಂಜುಂಡಪ್ಪ ಎಂಬ ಅವಳಿ ಸೋದರರೂ ಸಹ ಕಂಪನಿಯಲ್ಲಿ ವಾದ್ಯಗಳನ್ನು ಮೇಲ್ಕಂಡ ದಾನಪ್ಪಯ್ಯ ಪುಟ್ಟಣ್ಣಯ್ಯನವರ ಗೈರು ಹಾಜರಿಯಲ್ಲಿ ನುಡಿಸುತ್ತಿದ್ದರಲ್ಲದೆ ನನಗೆ ಸಂಗೀತ ಪಾಠವನ್ನು, ತಬಲ ಸಹ ನುಡಿಸುವುದನ್ನು ಹೇಳಿಕೊಡುತ್ತಿದ್ದರು.

ಕೆಲವು ಕಾಲಾನಂತರ ನಾಟಕ ಕಂಪನಿಗಳು ಮೈಸೂರು, ಬೆಂಗಳೂರುಗಳಲ್ಲಿ ಮಾತ್ರವಲ್ಲದೆ ಬೇರೆ ಕಡೆಗಳಲ್ಲಿಯೂ ಹೆಚ್ಚು ಹೆಚ್ಚಾಗಿ ಪ್ರಾರಂಭವಾದವು. ಆಗ ನಮ್ಮ ಸಂಘದ ರಾಜಾಪಾರ್ಟು ಹನುಮಂತರಾಯರು ಶ್ರೀ ವರದಾಚಾರ್ಯರ ಕಂಪನಿಗೆ ಹೋಗಿ ಅಲ್ಲಿ ಕೆಲಕಾಲವಿದ್ದು ಅನಂತರ ಮೈಸೂರು ಅರಮನೆಯ ಕಂಪನಿಗೆ ಹೋಗಿ ಸೇರಿಕೊಂಡರು. ರಾಣಿಪಾರ್ಟು ಶಂಕರಪ್ಪನವರು ಮಳವಳ್ಳಿ ಕಂಪನಿಗೆ ಸೇರಿದರು. ನಮ್ಮ ಸಂಘದಲ್ಲಿ ರಾಣಿಪಾರ್ಟು ಮಾಡುತಿದ್ದ ಇನ್ನೊಬ್ಬ ನಟ ರೇವಣ್ಣನೆಂಬುವರು ರಾಜ ಪಾರ್ಟಿಗೆ ನಿಂತರು. ರಾಣಿಪಾತ್ರಕ್ಕೆ ತುಮಕೂರಿನ ಗೋವಿಂದರಾಜು, ಉಗ್ರಯ್ಯ ಎಂಬುವರು ಬಂದರು. ಅಲ್ಲದೆ ಮೈಸೂರಿನಿಂದ ಅಣ್ಣಯ್ಯಪ್ಪ, ಬಸಪ್ಪ ಎಂಬ ಉತ್ತಮ ಪಾತ್ರಧಾರಿಗಳು ಬಂದು ಸೇರಿದರು.

ಆಗಿನ ಕಾಲದಲ್ಲಿ ನಾಟಕ ಕಲೆಗೆ ಹೆಚ್ಚು ಪ್ರಾಶಸ್ತ್ಯವಿರಲಿಲ್ಲ. ನಾಟಕದ ಕಲೆ ಕೀಳು ಕಲೆಯೆಂದೂ ನಾಟಕದ ಜನ ಕೀಳುಜನರೆಂದೂ ಜನರು ಪರಿಗಣಿಸುತ್ತಿದ್ದರು. ಅವರಿಗೆ ಸರಿಯಾದ ಸ್ಥಾನಮಾನಗಳೇ ಇರುತ್ತಿರಲಿಲ್ಲ. ನಾಟಕದ ಜನ ನೀರು, ಸುಣ್ಣ ಕೇಳಿದರೂ ಕೊಡದೆ ಬಾಗಿಲು ಹಾಕಿಕೊಳ್ಳುತ್ತಿದ್ದರು. ಹಾಗಿದ್ದರೂ ಶ್ರೀ ಚಂದಣ್ಣ ನವರು ಕಂಪನಿಯನ್ನು ಧೈರ್ಯದಿಂದ ನಡೆಸಿಕೊಂಡು ಹೋಗುತ್ತಿದ್ದರು. ನಂತರ 'ಸಾರಂಗಧರ ಚರಿತ್ರೆ' ನಾಟಕವನ್ನು ಕಲಿತು ಆಡುವಾಗ ರಾಣಿ ಪಾತ್ರಕ್ಕೆ ಕಲ್ಲೂರು ಬೇಲೂರಯ್ಯ ತಿಮ್ಮಯ್ಯ ಎಂಬ ಉತ್ತಮ ನಟರು ಬಂದನಂತರ ಧೈರ್ಯದಿಂದ ನಮ್ಮ ಸಂಘ ದೂರ ಸಂಚಾರ ಮಾಡುವ ಅವಕಾಶವಾಯಿತು. ನನ್ನ ಚಿಕ್ಕಪ್ಪನವರಾದ ವೀರಣ್ಣನವರು ಸಂಸ್ಥೆಯನ್ನು ಬಿಟ್ಟ ನಂತರ ಕುಣಿಗಲ್ ರಂಗರಾಯರು ವ್ಯವಸ್ಥಾಪಕರಾದರು. ಸಂಸ್ಥೆಯು ಚಿತ್ರದುರ್ಗ ಜಿಲ್ಲೆ. ಹಿರಿಯೂರು, ಚಳ್ಳಕೆರೆ, ಹಿರಿಯಾಳು, ಮೊಳಕಾಲ್ಮೂರು, ಗೌರಸಂದ್ರ ವಗೈರೆ । ಸಂಚಾರಮಾಡಿ ಬಳ್ಳಾರಿಯ ಜೈನ ಮತಸ್ಥರಾದ ದೊಡ್ಡವರ್ತಕರಾದ ಪದ್ಮರಾಜಯ್ಯನವರ ಸಲಹೆಯ ಮೇರೆಗೆ ಬಳ್ಳಾರಿಗೆ ಹೋಯಿತು.

ಬಳ್ಳಾರಿಯಲ್ಲಿ ಅಲ್ಲಿಯ ಆಂಧ್ರ ಪಿತಾಮಹ ಶ್ರೀ ಕೃಷ್ಣಮಾಚಾರ್ಯರ 'ಸರಸ ವಿನೋದಿನಿ ಸಭಾ ಸಂಘ'ದಲ್ಲಿ ಬಹು ಚೆನ್ನಾಗಿ ಉಷಾಪರಿಣಯ, ಸುಭದ್ರಾಪರಿಣಯ ನಾಟಕಗಳನ್ನು ತೆಲುಗಿನಲ್ಲಿ ಆಡುತ್ತಿದ್ದರು. ಈ ಪೌರಾಣಿಕ ನಾಟಕಗಳನ್ನು ರಾವ್ ಬಹದೂರ ಹನುಮಂತೇಗೌಡರಿಂದ ಕನ್ನಡಕ್ಕೆ ಭಾಷಾಂತರ ಮಾಡಿಸಿ ಅಭ್ಯಾಸ ಮಾಡಿ, ತೆಲುಗು ಹಾಡಿನ ಧಾಟಿಗಳನ್ನೇ ಕನ್ನಡ ಹಾಡುಗಳಿಗೂ ಹಾಕಿ ಬಳ್ಳಾರಿಯಲ್ಲಿಯೇ ಅಭಿನಯಿಸಿದೆವು. ನಾವು ಶ್ರೀ ಕೃಷ್ಣಮಾಚಾರ್ಯರು ಆಡುತ್ತಿದ್ದ ನಾಟಕ ಮಂದಿರವನ್ನು ಬಾಡಿಗೆಗೆ ತೆಗೆದುಕೊಂಡಿದ್ದೆವು. ಅದೇ ಊರಿನಲ್ಲಿ ಛೇರ್ಮನ್ನರಾಗಿದ್ದ ಕೊಲಾಚಲ ವೆಂಕಟರಾವ್ ಎಂಬುವರು ಮತ್ತೊಂದು ಸಂಸ್ಥೆಯನ್ನು ಮಾಡಿ, ವಾಣಿ ವಿಲಾಸ ಥಿಯೇಟರ್ ಎಂಬ

ಹೆಸರಿನ ನಾಟಕಮಂದಿರವನ್ನು ಕಟ್ಟಿದ್ದರು. ನಾವು ಬಳ್ಳಾರಿಗೆ ಮೊಟ್ಟಮೊದಲು ಹೋದಾಗ ಸುಮಾರು ೧೯೦೨-೧೯೦೩ ನೇ ಇಸವಿಯಿರಬಹುದು.

ಆಗ ಬಳ್ಳಾರಿಯಲ್ಲಿ ವಿನಾಃ ಮತ್ತೆಲ್ಲಿಯೂ ಥಿಯೇಟರ್ ಇರಲಿಲ್ಲ. ಈಚೆಗೆ ಬೆಂಗಳೂರಿನಲ್ಲಿ ತುಳಸಿತೋಟದಲ್ಲಿ ಒಂದು ಸಣ್ಣ ಥಿಯೇಟರ್ ಇತ್ತು. ಬೇರೆ ಊರುಗಳಲ್ಲಿ ನಾವೇ ಡೇರಾ ಹಾಕಿಕೊಂಡು ನಾಟಕಗಳನ್ನಾಡುತ್ತಿದ್ದೆವು. ಸುಮಾರು ಐವತ್ತು ಅರವತ್ತು ಅಡಿ ಉದ್ದ ಮೂವತ್ತು ಅಡಿ ಅಗಲದಲ್ಲಿ ಡೇರಾ ಹಾಕಿ ಹದಿನೆಂಟು ಅಡಿ ರಂಗ ಭೂಮಿಗೆ ಇಟ್ಟುಕೊಂಡು, ಹದಿನಾಲ್ಕು ಅಡಿ ಕುರ್ಚಿಕ್ಲಾಸಿನ ಹಳ್ಳ, ಹನ್ನೆರಡು ಅಡಿ ಚಾಪೆ ತರಗತಿ, ಹದಿನಾಲ್ಕು ಅಡಿ ಎರಡಾಣೆ ತರಗತಿಗೆಂದು ವಿಂಗಡಿಸಿ ಅದಕ್ಕೆ ತಕ್ಕಂತೆ ಅಳತೆಗೆ ಸರಿಯಾಗಿ ಸರ್ವೆ ಮರಗಳನ್ನು ಹೂಳಿಕೊಂಡು ಮೇಲಿನ ಛಾವಣಿಗೆ ಅಳತೆ ಪ್ರಕಾರ ಮರಗಳನ್ನು ಕಟ್ಟಿಕೊಂಡು ಡೇರಾ ಎಳೆದುಕೊಂಡು ಡೇರಾದ ತುಂಡು ತುಂಡಿಗೂ ಮೂಟೆ ಹುರಿಯಿಂದ ಚಿಟಕ (ಟಾಕ) ಅಂದರೆ ಹೊಲಿಗೆ ಹಾಕಿ ಸುತ್ತಲೂ ಗೋಣಿ ತಟ್ಟನ್ನು ಹೊಲೆದು ಅದಕ್ಕೆ ಎಂಟು –ಹತ್ತು ಅಡಿಗೆ ಒಂದೊಂದು ಗಳುವಿನಂತೆ ಹೊಲೆದು ಸುತ್ತಲೂ ಕಾಂಪೌಂಡಿನಂತೆ ಕಟ್ಟಿಕೊಳ್ಳುತ್ತಿದ್ದರು.

ಗೇಬಿಲ್ ಭಾಗಕ್ಕೆ ಗೋಣೀ ತಟ್ಟನ್ನು ಕಟ್ಟಿ ಮುಚ್ಚಿಕೊಳ್ಳುತ್ತಿದ್ದೆವು. ಮೊದಲನೆ ತರಗತಿಗೆ ಕುರ್ಚಿಗಳನ್ನು ಹಾಕಲು 14 * 12 * 2 ಅಳತೆಯ ಹಳ್ಳ ತೆಗೆದು ಅದೇ ಮಣ್ಣನ್ನು ರಂಗಸ್ಥಳಕ್ಕೆ ಹಾಕಿ ನಟರು ಮತ್ತು ಅವರ ಅಭಿನಯ ಕಾಣಲು ಎತ್ತರ ಮಾಡಿಕೊಳ್ಳುತ್ತಿದ್ದರು. ಈ ಹದಿನಾಲ್ಕು ಅಡಿ ಹಳ್ಳದಲ್ಲಿ ಆರು ಅಡಿ ಕುರ್ಚಿಗಳನ್ನು ಹಾಕಲು, ಎಂಟು ಅಡಿಗೆ ಬೆಂಚಿನ ತರಗತಿಗೆ ಹಲಗೆ ಹಾಕಲು ಮಧ್ಯೆ ಮಧ್ಯೆ ಮಣ್ಣಿನ ದಿಂಡನ್ನು ಬಿಟ್ಟುಕೊಂಡು ಅವುಗಳ ಮೇಲೆ ಹಲಗೆ ಹಾಕಿ ಅದನ್ನೆ ಬೆಂಚಿನ ತರಗತಿ ಎಂದು ಕರೆಯುತ್ತಿದ್ದೆವು–ಕ್ಲಾಸು ವಾರು ವಿಂಗಡಿಸಲು ಬೊಂಬುಗಳನ್ನು ಕಟ್ಟುತ್ತಿದ್ದೆವು.

ಆಗಿನ ಕಾಲದಲ್ಲಿ ೧೯೦೧–೧೯೦೨ ರಲ್ಲಿ ಒಂದು ನಾಟಕ ಶಾಲೆಗೆ ಬಂಡವಾಳ: ಹತ್ತು ಥಾನು ಬಟ್ಟೆ (ಏಳು ಕತ್ತಿಯ ಗುರುತಿನ ಒಂದೂವರೆ ಗಜ ಪನ್ನ ಉಳ್ಳ ನಲವತ್ತು ಗಜದ ಒಂದು ಥಾನಿನ ಬೆಲೆ ಎಂಟು ರೂಪಾಯಿ) ಎಂಭತ್ತು ರೂ, ಹಗ್ಗಕ್ಕೆ ಇಪ್ಪತ್ತೈದು ರೂ., ಹೊಲೆಯಲು ಹತ್ತು ರೂ., ಸರ್ವೆ ಮರಕ್ಕೆ ಹದಿನೈದು ರೂ. ಇಪ್ಪತ್ತೈದರಿಂದ ಮೂವತ್ತು ಅಡಿಯ ಒಂದು ಮರಕ್ಕೆ ನಾಲ್ಕಾಣೆ ಮಾತ್ರವಿತ್ತು. ನಮ್ಮ ಥಿಯೇಟರಿಗೆಲ್ಲಾ ಸುಮಾರು ಅರವತ್ತು ಮರ ಬೇಕಾಗುತ್ತಿತ್ತು. ಕಾಂಪೌಂಡು ಕಟ್ಟುಗಳಿಗೆ, ಮತ್ತು ಸ್ಟೇಜಿನ ಅಟ್ಟಕ್ಕೆ, ಅಡಿಟೋರಿಯಂ ಮೇಲ್ಭಾಗಕ್ಕೆ ಬೇಕಾಗುವ ಬೊಂಬುಗಳುಗಳಿಗೆ ನೂರರಿಂದ–ನೂರಿಪ್ಪತ್ತು ರೂಪಾಯಿ. ಒಟ್ಟು ಥಿಯೇಟರ್ ಸಾಮಾನುಗಳಿಗೆ ಇನ್ನೂರರಿಂದ ಇನ್ನೂರ ಇಪ್ಪತ್ತೈದು ರೂ.ಗಳು ಬೇಕಾದಷ್ಟಾಗುತ್ತಿತ್ತು. ಇವೇ ಸಾಮಾನುಗಳು ಒಂದು ಸರ್ಕೀಟ್ ಅಂದರೆ ಎಂಟು ತಿಂಗಳು ಆಗಿ ಡೇರಾ ಮಾತ್ರ ಹರಿದು ಮರದ ಸಾಮಾನು ಉಳಿಯುತ್ತಿತ್ತು. ಈಗಿನ ಕಾಲದಲ್ಲಿ ಎರಡು ಸಾವಿರದ ಐನೂರರಿಂದ ಮೂರು ಸಾವಿರದವರೆಗೆ ಖರ್ಚು ಮಾಡಿದರೂ ಒಂದೇ ಕ್ಯಾಂಪು ಎರಡರಿಂದ ಮೂರು ತಿಂಗಳು ಮಾತ್ರ ಆಡಬಹುದು. ಆಗ ಒಂದು ಕ್ಯಾಂಪು ಮಾಡಿಕೊಂಡು ಮತ್ತೊಂದು ಕ್ಯಾಂಪನ್ನು ಹದಿನೈದು–ಇಪ್ಪತ್ತು ಮೈಲಿಗಳಿಗಿಂತ ಹೆಚ್ಚು ದೂರ ಮಾಡುತ್ತಿರಲಿಲ್ಲ. ಒಂದು ಕ್ಯಾಂಪಿನಲ್ಲಿ ಕೊನೇ ನಾಟಕವಾಡಿಕೊಂಡು ಬೆಳಿಗ್ಗೆ ಸುಮಾರು ಒಂಬತ್ತು ಗಂಟೆಗೆ ಥಿಯೇಟರ್ ಬಿಚ್ಚಲು ಪ್ರಾರಂಭಿಸಿ ಸಾಯಂಕಾಲ ಐದು ಗಂಟೆಯೊಳಗೆ ಪೂರ್ತಿ ಬಿಚ್ಚಿ ಬಂಡಿಗಳಿಗೆ ಭರ್ತಿಮಾಡಿ ರಾತ್ರಿ ಒಂಭತ್ತು ಗಂಟೆಗೆ

ಪ್ರಯಾಣ ಮಾಡಿ ಮರುದಿನ ಬೆಳಿಗ್ಗೆ ಏಳು ಗಂಟೆಗೆ ಬೇರೆ ಕ್ಯಾಂಪಿಗೆ ಬಂದು ನಿತ್ಯ ಕರ್ಮಗಳನ್ನು ಮುಗಿಸಿ ಸಾಮಾನುಗಳನ್ನು ಗಾಡಿಯಿಂದ ಇಳಿಸಿ ಡೇರಾ ಹಾಕಲು ಪ್ರಾರಂಭಿಸಿ, ಲೈಸೆನ್ಸಿಗೆ, ಅಡ್ವರ್‌ಟೈಸ್‌ಮೆಂಟಗೆ ಕಳುಹಿಸುತ್ತಿದ್ದರು. ಆ ದಿನವೇ ಆರು ಅಥವಾ ಏಳು ಗಂಟೆಯೊಳಗೆ ರಂಗಮಂಟಪದ ತಯಾರಾಗಿ, ಕುರ್ಚಿ ಹಳ್ಳ ಎಲ್ಲಾ ತೆಗೆದು ಸಿದ್ಧಮಾಡಿ ರಾತ್ರಿ ಹತ್ತು ಗಂಟೆಗೆ ನಾಟಕವಾಡಲು ಸಜ್ಜುಮಾಡುತ್ತಿದ್ದರು. ಕ್ಯಾಂಪು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳಾಗಿದ್ದರೆ ಅಮಲ್ದಾರರನ್ನು ಕರೆದು ಅವರ ಸಮಕ್ಷಮ ಆಡುತ್ತಿದ್ದರು. ಹೋಬಳಿ, ಅಥವಾ ಸಮ್ಮತುಗಳಾದರೆ ಅಲ್ಲಿ ಜಮಾದಾರರು, ದಫೇದಾರರೇ ಹೈ ಆಫೀಸರರುಗಳಾದ್ದರಿಂದ ಅವರ ಮುಂದಾಳತ್ವದಲ್ಲಿ ನಾಟಕಗಳನ್ನಾಡುತ್ತಿದ್ದೆವು–ರಾತ್ರಿ ಹತ್ತು ಗಂಟೆಗೆ ಪ್ರಾರಂಭಿಸಿದ ನಾಟಕ ಬೆಳಗಿನ ಐದು ಗಂಟೆಗೆ ಮುಗಿಯುತ್ತಿತ್ತು.

ನಟರುಗಳಿಗೆ ವಾಸಕ್ಕೆ ಮನೆಗಳನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಆಗ್ಗೆ ಅನೇಕ ಊರುಗಳಲ್ಲಿ ಪೂರ್ಣಯ್ಯನವರ ಛತ್ರಗಳಿರುತ್ತಿದ್ದುವು. ಅವುಗಳಲ್ಲಿಯೂ, ಮುಸಾಫಿರ್ ಖಾನೆಗಳಲ್ಲಿಯೂ ಇಳಿದುಕೊಳ್ಳುತ್ತಿದ್ದೆವು. ಸಂದರ್ಭಾನುಸಾರ ಥಿಯೇಟರಿನಲ್ಲಿಯೇ ವಾಸಮಾಡುತ್ತಲೂ ಇದ್ದೆವು. ಏಕೆಂದರೆ ನಟರುಗಳು, ವಾದ್ಯಗಾರರು, ಗೇಟಿನವರು 'ಎಲ್ಲರೂ ಸೇರಿ ಮರಗಳನ್ನು ಹೂಳಲು ಗುಣಿಗಳನ್ನು ತೋಡಿ ಮರಗಳನ್ನು ನೆಟ್ಟು ಅಡ್ಡ ಮರಗಳನ್ನು ಹೂಳಲು ಗುಣಿಗಳನ್ನು ತೋಡಿ ಮರಗಳನ್ನು ನೆಟ್ಟು ಅಡ್ಡ ಮರಗಳನ್ನು ಕಟ್ಟಿ ಡೇರಾ ಎಳೆದು ಸಾಯಂಕಾಲದೊಳಗೆ ಥಿಯೇಟರ್ ಕಟ್ಟಿ ಕ್ಯಾಂಪಿಗೆ ಬಂದ ದಿನ ನಾಟಕವನ್ನಾಡುತ್ತಿದ್ದರು. ನಟವರ್ಗದವರು, ವಾದ್ಯಗಾರರು, ಗೇಟಿನವರು ಎಲ್ಲರೂ ಸೇರಿ ಕೆಲಸ ಮಾಡಿದ ಮೆಹನತ್ತಿಗೆ ಆರು ಸೇರು ಅವಲಕ್ಕಿ ಐದು ಸೇರು ಬೆಲ್ಲ ತರಿಸಿ ಅವಲಕ್ಕಿಯನ್ನ ನೆನೆಸಿ ಬೆಲ್ಲ ಪುಡಿಮಾಡಿ ಹಾಕಿ ತೆಂಗಿನಕಾಯಿ ತುರಿದು ಎಲ್ಲವನ್ನೂ ಬೆರೆಸಿ ಒಂದೊಂದು ಉಂಡೆಮಾಡಿ ತಿನ್ನಲು ಕೊಡುತ್ತಿದ್ದರು. ಈಗಿನಂತೆ ಎಲ್ಲೆಲ್ಲೂ ಹೋಟೆಲ್‌ಗಳಿರುತ್ತಿರಲಿಲ್ಲ. ಕಾಫಿ ಕೂಡ ಇರುತ್ತಿರಲಿಲ್ಲ. ಅವಲಕ್ಕಿ ಉಂಡೆಯನ್ನು ತಿಂದು ಮಧ್ಯಾಹ್ನ ಒಂದೂವರ ಗಂಟೆಯವರೆಗೂ ಕೆಲಸ ಮಾಡಿ ಅನಂತರ ಊಟಕ್ಕೆ ಹೋಗುತ್ತಿದ್ದರು.

ಮಧ್ಯಾಹ್ನ ಎರಡು ಘಂಟೆಯ ಮೇಲೆ ಒಬ್ಬ ತಮಟೆಯನ್ನು ಕರೆಸಿ ಅವನ ಜೊತೆ ಊರಿನಲ್ಲಿ ನಾಟಕದ ಪ್ರಚಾರ ಮಾಡಲು ಒಬ್ಬನನ್ನು ಕಳುಹಿಸುತ್ತಿದ್ದರು. ತಮಟೆಯವನು ತಮಟೆ ಬಾರಿಸುತ್ತಾ ಮುಂದೆ ಮುಂದೆ ಹೋಗುತ್ತಿರುವಾಗ್ಗೆ ಚೌಕಗಳಲ್ಲಿ ಸೀಟಿ ಹಾಕಿ ತಮಟೆ ಬಾರಿಸುವುದನ್ನು ನಿಲ್ಲಿಸಿ ಹೀಗೆ ಜೋರಾಗಿ ಕೂಗಿ ಪ್ರಚಾರಮಾಡುತ್ತಿದ್ದನು– 'ಈ ದಿನ ರಾತ್ರಿ ಹತ್ತು ಘಂಟೆಗೆ ಗುಬ್ಬಿ ನಾಟಕ ಕಂಪನಿಯವರು ಈ ಊರಿನ ಸಂತೆ ಮೈದಾನದಲ್ಲಿ ಹಾಕಿರುವ ಡೇರಾದಲ್ಲಿ 'ಪಾಂಡವ ವಿಜಯ' ವೆಂಬ ನಾಟಕ ಆಡ್ತಾರೆ. ಟಿಕೇಟು ದರ, ಕುರ್ಚಿ ಒಂದ್ರುಪಾಯಿ, ಬೆಂಚು ಎಂಟಾಣೆ, ಚಾಪೆ ನಾಲ್ಕಾಣೆ, ನೆಲ ಎರಡಾಣೆ, ಹೆಂಗಸರಿಗೆ ಬೇರೆ ಸ್ಥಳ ಏರ್ಪಾಟು ಮಾಡಿದ್ದಾರೆ. (ಸಂಸ್ಥೆಯಲ್ಲಿ ಹೆಂಗಸರು ಪಾರ್ಟು ಮಾಡಲು ಸೇರಿದ ನಂತರ ಹೆಂಗಸರೂ ಸಹ ಪಾರ್ಟು ಮಾಡುತ್ತಾರೆ ಎಂದು ಹೇಳುತ್ತಿದ್ದರು) ಹೀಗೆ ಬಾಯಿಯಲ್ಲಿ ಹೇಳಿಕೊಂಡು ಒಂದು ಸೀಟಿ ಹೊಡೆದ ಕೂಡಲೇ ತಮಟೆ ಬಾರಿಸಿಕೊಂಡು ಮುಂದೆ ಹೋಗುತ್ತಿದ್ದು, ಪುನಃ ಸೀಟಿ ಹೊಡೆದಾಗ ನಿಲ್ಲಿಸುತ್ತಿದ್ದನು. ಹೀಗೆ ಪಬ್ಲಿಸಿಟಿ ನಡೆಯುತ್ತಿದ್ದು ಬೇರೆ ನೋಟೀಸು ಕೊಡುತ್ತಿರಲಿಲ್ಲ. ಕ್ರಮೇಣ ಊರು, ಸ್ಥಳ ನಾಟಕದ ಹೆಸರು ಬರೆಯಲು ಜಾಗ ಬಿಟ್ಟು

ನೋಟೀಸು ಪ್ರಿಂಟು ಮಾಡಿಸಿ (ಸುಮಾರು ಎರಡು ಸಾವಿರ ಪ್ರಿಂಟ್ ಮಾಡಿಸಿ) ಪೆಟ್ಟಿಗೆಯಲ್ಲಿಟ್ಟುಕೊಂಡು ತಮಟೆಯವನೊಡನೆ ಸಾರಲು ಹೋಗುವಾಗ ಮಾತ್ರ ಹದಿನೈದು–ಇಪ್ಪತ್ತು ನೋಟೀಸುಗಳನ್ನು ತೆಗೆದು ಅದರಲ್ಲಿ ನಾಟಕದ ಹೆಸರು ತಾರೀಖು, ಊರುಗಳನ್ನೇ ಬರೆದು ಹಂಚುತ್ತಿದ್ದರು. ಅದೂ ತಾಲ್ಲೂಕುಗಳಾದರೆ ಇಪ್ಪತ್ತೈದು–ಮೂವತ್ತು ನೋಟೀಸು, ಹೋಬಳಿಗಳಾದರೆ ಎಂಟು ಹತ್ತು ನೋಟೀಸು ಮಾತ್ರ ಹಂಚುತ್ತಿದ್ದರು.

ಕುರ್ಚಿ ದರ ಒಂದು ರೂಪಾಯಿಯೆಂದು ಬಾಯಲ್ಲಿ ಹೇಳುತ್ತಿದ್ದರೇ ವಿನಹ ಕಂಪನಿಯಲ್ಲಿ ಒಂದು ಕುರ್ಚಿಯೂ ಇರುತ್ತಿರಲಿಲ್ಲ. ಕುರ್ಚಿ ಟಿಕೇಟು ಕೇಳುವವರೂ ಬರುತ್ತಿರಲಿಲ್ಲ.

ಅಮಲ್ದಾರ್ ಸಾಹೇಬರನ್ನು ನಾಟಕ ನೋಡಲು ಕರೆಯಲು ಹೋದಾಗ್ಗೆ –

"ಸ್ವಾಮಿ ಇವತ್ತು ನಮ್ಮ ನಾಟ್ಕ ನೋಡೋಕೆ ತಾವು ದಯಮಾಡಿಸ್ಬೇಕು ಸ್ವಾಮಿ" ಎಂದರೆ, ಅಮಲ್ದಾರರು:

"ಏನು ನಾಟಕವಯ್ಯ ನಿಮ್ಮದು?'

ಸ್ವಾಮಿ

"ಸ್ವಾಮಿ ನಾವು ಗುಬ್ಬಿ ನಾಟಕದವರು. ಇವತ್ತು ಪಾಂಡ ವಿಜಯ, ಚೆನ್ನಾಗಿರುತ್ತೆ ಸ್ವಾಮಿ"

"ಎಷ್ಟೊತ್ತಿಗೆ ಪ್ರಾರಂಭವಯ್ಯ?"

"ಸ್ವಾಮಿ, ಸವಾರಿ ಬಂದ ಕೂಡ್ಲೆ ಷುರುಮಾಡ್ಬಿಡ್ತೀವಿ ಸ್ವಾಮಿ"

"ಒಳ್ಳೇದಪ್ಪ ನೋಡ್ತೀನಿ, ಅವಕಾಶವಾದ್ರೆ ಬರ್ತೇನೆ".

"ಅಯ್ಯೋ! ಆಗಲ್ಲ ಸ್ವಾಮಿ, ಮೊದ್ಲನೇ ನಾಟ್ಕ. ತಾವ್ ಖಂಡಿತ ಬರ್ಲೇಬೇಕು ಸ್ವಾಮಿ".

"ಆಗಲಪ್ಪ ಬರ್ತೀನಿ".

"ಸ್ವಾಮಿ ತಾವ್ಬರ್ವಾಗ ಒಂದುರ್ಚಿ ತೆಗೆಸ್ಕೊಂಡ್ಬರ್ಬೇಕು".

"ಒಳ್ಳೇದಪ್ಪ!"

"ಸ್ವಾಮಿ ಅಂಗೆ 'ಅಮ್ಮಾ' ವರ್ನ ಕರ್ಕೊಂಡ್ಬರ್ಬೇಕು ಸ್ವಾಮಿ."

ಈ ರೀತಿಯಾಗಿ ನಾಟಕ ನೋಡಲು ಬರುವವರಿಗೆ ಆಹ್ವಾನ ಕೊಡುತ್ತಿದ್ದರಲ್ಲದೆ ಆಹ್ವಾನ ಪತ್ರಿಕೆಯ ಪದ್ಧತಿಯಾಗಲೀ, ಕಾಂಪ್ಲಿಮೆಂಟರಿ ಪಾಸಾಗಲೀ ಕೊಡುವ ರೀತಿಯಿರಲಿಲ್ಲ. ಹೀಗೆ ಸಂಘವನ್ನು ಹನ್ನೆರಡು ವರುಷ ಕಾಲ ಚಂದ್ರಣ್ಣನವರು ಧೈರ್ಯದಿಂದ ತುಂಬಾ ಕಡಿಮೆ ಖರ್ಚಿನಲ್ಲಿ ನಡೆಸಿಕೊಂಡು ಬಂದರು.

ಮಳೆಗಾಲದಲ್ಲಿ ಕೊಂಚ ಮೋಡವಾದರೆ ಸಾಕು, ಕೂಡಲೆ ಪರದೆ ಸೈಡು ವಿಂಗ್ಸ್‌ಗಳನ್ನು ಬಿಚ್ಚಿ ಕೆಳಗಿರಿಸಿ ನೆನೆಯದೆ ಹಾಗೆ ಚಾಪೆಗಳಿಂದ ಮುಚ್ಚಿ ಭದ್ರಪಡಿಸುತ್ತಿದ್ದರು. ಮೋಡ, ಮಳೆ ಕಡಿಮೆಯಾದರೆ

ಪುನಃ ಪರದೆ ಸೈಡ್ವಿಂಗ್‌ಗಳನ್ನು ಕಟ್ಟುತ್ತಿದ್ದರು. ನಾಟಕ ನಡೆಯುತ್ತಿದ್ದಾಗ ಮಳೆ ಬಂದರೆ ವೇಷಧಾರಿಗಳೇ ಪರದೆ ಅಟ್ಟದ ಮೇಲೆ ಡ್ರೆಸ್ ಸಮೇತ ಹತ್ತಿ ಪರದೆ ಬಿಚ್ಚಿ ಮಳೆ ಕಡಿಮೆಯಾದ ನಂತರ ಪುನಃ ಕಟ್ಟಿ ನಾಟಕ ಮುಂದುವರಿಸುತ್ತಿದ್ದರು. ಒಂದೊಂದು ಸಾರಿ ಒಂದು ದಿನಕ್ಕೆ ಎರಡು–ಮೂರು ಸಾರಿ ಬಿಚ್ಚುವುದು ಕಟ್ಟುವುದು ನಾಟಕವಾಡುವುದು ಹೀಗೂ ನಡೆಯುತ್ತಿತ್ತು. ಪ್ರೇಕ್ಷಕರೂ ಸಹ ಹಾಗೇ ಇದ್ದರು. ಎರಡು–ಮೂರು ಸಾರಿ ಪರದೆ ಬಿಚ್ಚಿ–ಕಟ್ಟಿ ನಾಟಕವಾಡಿ ಪುನಃ ಬಿಚ್ಚಿದ್ದರೂ ಪುನಃ ಕಟ್ಟಿಸಿ ಪೂರ್ತಿ ನಾಟಕ ನೋಡಿಕೊಂಡು ಹೋಗುತ್ತಿದ್ದರಲ್ಲದೆ ಅರ್ಧ ನಾಟಕ ಬಿಟ್ಟು ಹೋಗುತ್ತಿರಲಿಲ್ಲ. ಆಗ ಹೆಚ್ಚು ಸೀನರಿ ಇರಲಿಲ್ಲವಾಗಿ ಹತ್ತು–ಹದಿನೈದು ನಿಮಿಷಗಳಲ್ಲಿ ಬಿಚ್ಚಿ ಪುನಃ ಹತ್ತು ನಿಮಿಷಗಳಲ್ಲಿ ಕಟ್ಟುತ್ತಿದ್ದರು. ಒಂದು ದಿನ ಮೊಳಕಾಲ್ಮೂರು ಕ್ಯಾಂಪಿನಲ್ಲಿ ವಿಪರೀತ ಗಾಳಿ ಬಂದು, ಮೇಲೆ ಹೊದಿಕೆಯಾಗಿದ್ದ ಡೇರಾಪೀಸು ಎಲ್ಲಾ ಚಿಂದಿ ಚಿಂದಿಯಾಗಿ ಹರಿದು ಹಾರಿ ಹೋಗಿ ಡೇರಾಕ್ಕೆ ಹೊಲೆದಿದ್ದ ನೂಲು ಹಗ್ಗಗಳೇ ನಿಂತಿದ್ದುವು.

ಕಂಪನಿಯವರೆಲ್ಲಾ ಡ್ರೆಸ್ ಪೆಟ್ಟಿಗೆಗಳನ್ನು ಆಕಡೆ ಈಕಡೆ ಒಂದೊಂದು ಇಟ್ಟು ಅವುಗಳು ರಾತ್ರಿಯೆಲ್ಲಾ ಮಳೆಬಿದ್ದು ಕುರ್ಚಿ ಹಳ್ಳದ ತುಂಬಾ ನೀರು ತುಂಬಿತ್ತು. ನಟರುಗಳು ಮೇಲೆ ಪರದೆ ಸೀನರಿಗಳನ್ನಿಟ್ಟು ಚಾಪೆ ಹೊದೆಸಿ ಅವುಗಳ ಕೆಳಗೆ ವಾಸಮಾಡಿದ್ದ ದೃಶ್ಯ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಮಾರನೆ ದಿನ ಬೆಳಿಗ್ಗೆ ರಾಯದುರ್ಗಕ್ಕೆ ಹೋಗಿ ಬಟ್ಟೆ ತಂದು ಡೇರಾ ಹೊಲಿದು ಹೊದಿಕೆ ಮುಚ್ಚಿ ಅನಂತರ ನಾಟಕವಾಡಿದೆವು. ನಾಟಕಗಳು ಸಾಮಾನ್ಯವಾಗಿ ಬೆಳಗಿನ ಐದು ಗಂಟೆಗೆ ಮುಗಿಯುತ್ತಿದ್ದು ಒಂದು ವೇಳೆ ಮುಂಚಿತವಾಗಿ ಮುಗಿದರೆ –'ಏನಪ್ಪಾ ಇಷ್ಟು ಜಾಗ್ರತೆ ನಾಟ್ಕ ಮುಗಿಸಿದಿರಿ ಏಕೆ?' ಎಂದು ಪ್ರೇಕ್ಷಕರಿಂದ ಆಕ್ಷೇಪಣೆಗಳು ಬರುತ್ತಿದ್ದವು. ಆಗಿನ ಕಾಲದಲ್ಲಿ ಧಾರಣೆವಾಸಿಗಳು ತುಂಬಾ ಕಡಿಮೆಯಾಗಿದ್ದುದರಿಂದಲೂ ಸಂಬಳಗಳು ಬಹಳ ಕಮ್ಮಿಯಿದ್ದುದರಿಂದ ನಷ್ಟಕ್ಕೆ ಅವಕಾಶವೇ ಇರಲಿಲ್ಲ. ಕಂಪೆನಿಯು ಸ್ಥಿರವಾಗಿ ಹನ್ನೆರಡು–ಹದಿಮೂರು ವರ್ಷಗಳು ನಡೆದುದರಿಂದ ಸಂಘಕ್ಕೆ ಪರಸ್ಥಳದವರು ಸೇರಲು ಪ್ರಾರಂಭವಾಗಿ ಬ್ರಾಹ್ಮಣರೂ ಸಹ ಬಂದು ಸೇರಿದರು. ಆಗ ಸಂಘದಲ್ಲಿ ಲಿಂಗಾಯಿತರು, ಜೈನ ಮತಸ್ಥರು ಮತ್ತು ಬ್ರಾಹ್ಮಣರು ಈ ಮೂರು ಪಂಗಡಗಳಿಗೆ ಬೇರೆ ಬೇರೆ ಅಡಿಗೆಯವರನ್ನಿಟ್ಟು ಅಡಿಗೆ ಮಾಡಿಸುತ್ತಿದ್ದರು.

- **ಆಕರ: ಕಲೆಯೇ ಕಾಯಕ (ಗುಬ್ಬಿ ವೀರಣ್ಣನವರ ಆತ್ಮಚರಿತ್ರೆ)**
  **ಜನಪ್ರಿಯ ಪುಸ್ತಕ ಮಾಲೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.**

**೪ನೇ ಸೆಮಿಸ್ಟರ್ ಬಿ.ಎಸ್ಸಿ. ಫ್ಯಾಡ್ (ಎನ್.ಇ.ಪಿ. – 2022-23)**

**ಪದವಿ ಪರೀಕ್ಷೆಯ ಮಾದರಿ ಪ್ರಶ್ನೆಪತ್ರಿಕೆ**

**ಕನ್ನಡ ಭಾಷಾ ಪತ್ರ ವಿನ್ಯಾಸ ಸೌರಭ – ೪ (Freshers Scheme)**

**Time: 2:30 Hours** **Maximum marks: 60**

**I. ಯಾವುದಾದರು ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 5X2=10**

1. ಕರೀಮನಿಗೆ ಶಾಲೆಯಲ್ಲಿ ಮಗ್ಗ ಕಲಿತುದರಿಂದ ಆದ ಪ್ರಯೋಜನವೇನು?
2. ಬುದ್ಧ ಏನೆಲ್ಲವನ್ನು ಬಿಟ್ಟು ಹೊರಟು ಹೋದ?
3. ಮಾರಿದೇವತೆಯು ಅಭಯರುಚಿ ಅಭಯಮತಿಗೆ ಹೇಗೆ ಕಂಡಿತು?
4. ಮೊದಲಗಾರ ಎಂದರೇನು?
5. ವಾಸ್ತು ಸಂಪತ್ತು ಎಂದರೇನು?
6. ಕರ್ನಾಟಕದ ಆಧುನಿಕ ಚಿತ್ರಕಾರರು ಯಾರು ಯಾರು? ಹೆಸರಿಸಿ
7. ಯಾರ್ನ್ ಕೌಂಟ್ ಎಂದರೇನು?
8. ಬಸವೇಗೌಡರು ಮಂಕುಗೊಳ್ಳಲು ಕಾರಣವೇನು?

**II. ಯಾವುದಾದರು ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4X5=20**

1. ಶಂಕರಪ್ಪ ಅವರು ರಹೀಮನ ಬಳಿಗೆ ಸಂಧಾನಕ್ಕಾಗಿ ಬಂದ ಪ್ರಸಂಗವನ್ನು ಬರೆಯಿರಿ.
2. ಬುದ್ಧನ ಸಾಧನೆಯ ಹಾದಿಯನ್ನು ಕವಿ ಹೇಗೆ ಚಿತ್ರಿಸಿದ್ದಾರೆ?
3. ಬೇಲೂರಿನ ಶಿಲಾಬಾಲಿಕೆಯರು ಕವನದ ಆಶಯವೇನು?
4. ಕುರಿಗಳ ತುಪ್ಪಟ ಕತ್ತರಿಸುವ ಪ್ರಸಂಗವನ್ನು ಬರೆಯಿರಿ.
5. ಕಲಬೆರಕೆ ಬಟ್ಟೆಗಳ ಸಮಸ್ಯೆಗಳನ್ನು ಕುರಿತು ಬರೆಯಿರಿ.
6. ಅಂಕನನ್ನು ಕಂಡು ಜನಸಾಮಾನ್ಯರು ಆಡಿಕೊಳ್ಳಲು ಕಾರಣವೇನು?

**III. ಯಾವುದಾದರು ಎರಡು ಪ್ರಶ್ನೆಗಳಿಗೆ ಎರಡು ಪುಟಗಳಷ್ಟು ಉತ್ತರಿಸಿ. 2X10=20**

1. ಕರೀಮ ಧನವಂತನಾದ ಬಗೆ ಹೇಗೆ? ವಿವರಿಸಿ
2. ಪ್ರತಿ ಮಾನವನ ಹೃದಯ ಬುದ್ಧನ ವಾಸಸ್ಥಳ ಎಂಬುದನ್ನು ವಿಶದೀಕರಿಸಿ.
3. ಅಭಯರುಚಿಯು ನಿರ್ಮಲ ಧರ್ಮದಿಂದ ಪಾಲಿಸು ಧರೆಯನ್ನು ಎಂದು ಮಾರಿದತ್ತನಿಗೆ ಹೇಳಲು ಕಾರಣವಾದ ಸನ್ನಿವೇಶ ಬರೆಯಿರಿ.
4. ಕಂಬಳಿ ಮಗ್ಗ ನೇಯ್ಗೆಯಲ್ಲಿ ಬಳಸುವ ಸಾಮಗ್ರಿಗಳನ್ನು ವಿವರಿಸಿ.

**IV. ಯಾವುದಾದರು ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. (ಓದು ಪಠ್ಯ) 2X5=10**

1. ಜೇಡರ ದಾಸಿಮಯ್ಯನ ಜೀವನವನ್ನು ಕುರಿತು ಬರೆಯಿರಿ.
2. ಭಿಕ್ಷುಕರಿಗೆ ರೊಟ್ಟಿ ದಾನ ಮಾಡಿದುದು – ಈ ಕಥೆಯ ಸ್ವಾರಸ್ಯವೇನು?
3. ವಾಸ್ತುಶಿಲ್ಪ ಇತಿಹಾಸವನ್ನು ವಿವರಿಸಿ.
4. ಗುಬ್ಬಿ ವೀರಣ್ಣನವರ ಬಾಲ್ಯವನ್ನು ಪರಿಚಯಿಸಿ.

# ಬೆಂಗಳೂರು ನಗರ ವಿಶ್ವವಿದ್ಯಾಲಯ

## 4ನೇ ಸೆಮಿಸ್ಟರ್ ಬಿಎಸ್ಸಿ. ಫ್ಯಾಡ್ ಪಠ್ಯಪುಸ್ತಕ

## ಸಂಪಾದಕರು

**ಡಾ. ಚನ್ನವೀರಯ್ಯ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ಆಚಾರ್ಯ ಪದವಿ ವಿದ್ಯಾಲಯ

ಸೋಲದೇವನಹಳ್ಳಿ

ಬೆಂಗಳೂರು– ೫೬೦೧೦೭

ಜಂಗಮವಾಣಿ ಸಂಖ್ಯೆ: ೯೪೪೮೫೭೯೫೬೫.

**ಶ್ರೀಮತಿ. ಛಾಯಾದೇವಿ. ಎನ್.**

ಮಾಜಿ ಪ್ರಾಂಶುಪಾಲರು

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ಓಷಿಯಾನಿಕ್ ಕಾಲೇಜ್ ಆಫ್ ಹೈಯರ್ ಎಜುಕೇಷನ್

ಬೆಂಗಳೂರು – ೫೬೦೦೯೪

ಜಂಗಮವಾಣಿ ಸಂಖ್ಯೆ: ೮೪೫೩೮೫೭೬೯೪

**ಶ್ರೀ. ಪಾತಯ್ಯ. ಎನ್.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ನಿಟ್ಟೆ ಸ್ಕೂಲ್ ಆಫ್ ಫ್ಯಾಷನ್ ಟೆಕ್ನಾಲಜಿ ಅಂಡ್ ಇಂಟೀರಿಯರ್ ಡಿಸೈನ್

ಯಲಹಂಕ, ಬೆಂಗಳೂರು – ೫೬೦೦೬೪

ಜಂಗಮವಾಣಿ ಸಂಖ್ಯೆ: ೮೭೬೨೬೪೭೫೫೦